MYSORE LEGISLATIVE ASSEMBLY

TWENTIETH DAY

Saturday, 21st March 1964.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

SRI R. M. PATIL (Minister for Home).—Sir, I beg to lay Notification No. HD 12 TMA 64, dated 5th February 1964 (Reduction of tax payable) as required under sub-section (2) of section 16 of the Mysore Motor Vehicles Taxation Act, 1957.

BUDGET ESTIMATES FOR 1964-65.

DEMAND No. 2.—LAND REVENUE.

SRI M. V. KRISHNAPPA (Minister for Revenue).—Sir, on the recommendation of the Governor of Mysore, I beg to move :

"That a sum not exceeding Rs. 1,98,63,000 be granted to the Government to defray the charges which will come in course of payment during the financial year for the period ending 31st day of March 1965, in respect of 'Land Revenue.'"

DEMAND No. 7.—STAMPS

"That a sum not exceeding Rs. 2,85,000 be granted to the Government to defray the charges which will come in course of payment during the financial year for the period ending 31st day of March 1965, in respect of 'Stamps'."

DEMAND No. 8.—REGISTRATION.

"That a sum not exceeding Rs. 18,85,000 be granted to the Government to defray the charges which will come in course of payment during the financial year for the period ending 31st day of March 1965, in respect of Registration Fees'."

(SRI M. V. KRISHNAPPA)

DEMAND NO. 15.—MISCELLANEOUS DEPARTMENTS.

"That a sum not exceeding Rs. 72,04,000 be granted to the Government to defray the charges which will come in course of payment during the financial year for the period ending 31st day of March 1965, in respect of 'Miscellaneous Departments'."

DEMAND NO. 22.—ANIMAL HUSBANDRY.

"That a sum not exceeding Rs. 2,14,90,000 be granted to the Government to defray the charges which will come in course of payment during the financial year for the period ending 31st day of March 1965, in respect of Animal Husbandry'."

DEMAND NO. 33.—FAMINE

"That a sum not exceeding Rs. 71,17,000 be granted to the Government to defray the charges which will come in course of payment during the financial year for the period ending 31st day of March 1965, in respect of 'Famine Relief'."

DEMAND NO. 42.—COMPENSATION TO ZAMINDARS

"That a sum not exceeding Rs. 56,87,000 be granted to the Government to defray the charges which will come in course of payment during the financial year for the period ending 31st day of March 1965, in respect of 'Payment of Compensation to Landholders, etc., on the Abolition of Zamindari System.'

DEMAND NO. 53-CAPITAL OUTLAY ON SCHEMES OF GOVERNMENT TRADING

"That a sum not exceeding Rs. 29,60,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital Outlay on Schemes of Government Trading'."

MR. SPEAKER.—Motion moved.

"That a sum not exceeding Rs. 1,98,63,000 be granted to the Government to defray the charges which will come in course of payment during the financial year for the period ending 31st day of March 1965, in respect of 'Land Revenue."

"That a sum not exceeding Rs. 2,85,000 be granted to the Government to defray the charges which will come in course of payment during the financial year for the period ending 31st day of March 1965, in respect of 'Stamps'."

"That a sum not exceeding Rs. 18,85,000 be granted to the Government to defray the charges which will come in course of payment during the financial year for the period ending 31st day of March 1965, in respect of 'Registration fees'."

"That a sum not exceeding Rs. 72,04,000 be granted to the Government to defray the charges which will come in course of payment during the financial year for the period ending 31st day of March, 1965, in respect of 'Miscellaneous Departments."

"That a sum not exceeding Rs. 2,14,90,000 be granted to the Government to defray the charges which will come in course of payment during the financial year for the period ending 31st day of March 1965, in respect of 'Animal Husbandry'."

"That a sum not exceeding Rs. 71,17,200 be granted to the Government to defray the charges which will come in course of payment during the financial year for the period ending 31st day of March 1965, in respect of 'Famine Relief'."

"That a sum not exceeding Rs. 56,87,000 be granted to the Government to defray the charges which will come in course of payment during the financial year for the period ending 31st day of March 1965, in respect of 'Payment of Compensation to Landholders, etc., on the abolition of Zamindari System'."

That a sum not exceeding Rs. 29,60,000 be granted to the Government to defray the charges which will come in course of payment during the financial year for the period ending 31st day of March 1965, in respect of 'Capital Outlay on Schemes of Government Trading."

All the cut motions, which have been given notice of, are also before the House for discussion.

ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ)—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಇಟ್ಟಿರತಕ್ಕಂಥ ಡಿಮ್ಯಾಂಡ್ ನಂಬರು 2, 7, 8, 15, 22, 33, 42, 53 ಇವುಗಳ ಬಗ್ಗೆ ಕೆಲವು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಮೊದಲನೆಯದಾಗಿ ಭೂಕಂದಾಯ ಇಲಾಖೆಗೆ 1,98,63,000 ರೂಪಾಯಿ ಮಂಜೂರು ಮಾಡಬೇಕೆಂಬ ಬೇಡಿಕೆ ಇದೆ. ಆಡಳಿತ ಖರ್ಚು ಕಡಿಮೆ ಮಾಡಲು ಈ ಹಿಂದೆ ಎ. ಜಿ. ರಾಮಚಂದ್ರರಾಯರ ರಿಪೋರ್ಟಿನಲ್ಲಿ ಡಿವಿಜನಲ್ ಕಮಿಷನರ್ ಹುದ್ದೆಯನ್ನು ತೆಗೆಯಬೇಕೆಂಬ ಒಂದು ಸಲಹೆ ಇದೆ. ಈ ಸಲಹೆ ಹೇಳಿದ್ದರೂ ಕೂಡ ಇದ ವರೆಗೆ ಸರಕಾರ ಯಾವ ಕ್ರಮ ತೆಗೆದುಕೊಂಡಿಲ್ಲ. ನಿನ್ನೆಯ ಪೇಪರಿನಲ್ಲಿ ಒಂದು ಸಮಾಚಾರ ಓದಿದೆ. ಗುಲ್ಬರ್ಗ ಡಿವಿಜನ್ ರದ್ದು ಮಾಡಲಾಗುವುದು ಎಂದು ಸುದ್ದಿ ಇದೆ. ಅಲ್ಲಿಯ ಜನರು ಗುಲ್ಬರ್ಗ ಡಿವಿಜನ್ ರದ್ದು ಮಾಡುವುವಕ್ಕೆ ಪ್ರತಿಭಟನೆ ಮಾಡಿದ್ದು ಉಂಟು. ಉಳಿದ ಡಿವಿಜನ್ನುಗಳನ್ನು ರದ್ದು ಮಾಡದೆ ಒಂದೇ ಡಿವಿಜನ್ ರದ್ದು ಮಾಡಿದ್ದರಿಂದ ಹೀಗೆ ಪ್ರತಿಭಟನೆ ಬಂದಿದೆ. ಎಲ್ಲವನ್ನೂ ಒಂದೇ ಕಾಲಕ್ಕೆ

† Indicates that the remarks or speeches have not been revised by the member concerned

(ಶ್ರೀ ಸಿದ್ದಪ್ಪ ಕಾಶೀಮಠ)

ರದ್ದು ಮಾಡಿದ್ದರೆ ಈ ರೀತಿ ಪ್ರತಿಭಟನೆ ಬರುತ್ತಿರಲಿಲ್ಲ. ಡಿವಿಜನಲ್ ಕಮಿಷನರುಗಳನ್ನು ತೆಗೆಯು ವುದರಿಂದ ಸರಕಾರಕ್ಕೆ ಲಕ್ಷಾಂತರ ರೂಪಾಯಿ ಉಳಿತಾಯವಾಗುತ್ತದೆ. ಎಲ್ಲ ಕೆಲಸ ತಾಲ್ಲೂಕ್ ಆಫೀಸ್, ಡಿಸ್ಟ್ರಿಕ್ಟ್ ಆಫೀಸ್ ಮುಖಾಂತರ ಡಿವಿಜನಲ್ ಕಮಿಷನರ್ ಆಫೀಸಿಗೆ ಕಾಗದ ಪತ್ರಗಳು ಹೋಗುತ್ತವೆ. ಇವೊಂದು ಕಾಗದ ಪತ್ರ ರವಾನೆ ಮಾಡತಕ್ಕ ಪೋಸ್ಟ್ ಆಫೀಸ್ ತರಹ ಆಗಿದೆ. ಅಪೀಲುಗಳು ಟ್ರಿಬ್ಯೂನಲ್‌ಗೆ ಹೋಗುವುದರಿಂದ ಇದನ್ನು ರದ್ದು ಮಾಡುವುದರಿಂದ ಏನೂ ತೊಂದರೆ ಯಾಗುವುದಿಲ್ಲ ಎಂದು ಈ ಸಮಯದಲ್ಲಿ ಸರಕಾರಕ್ಕೆ ತಿಳಿಸಲು ಬಯಸುತ್ತೇನೆ.

ಮತ್ತೊಂದು ವಿಷಯ ಹೇಳಬೇಕಾದುದು ಏನೆಂದರೆ ಮುಂಬಯಿ ಕರ್ನಾಟಕ ಪ್ರದೇಶದಲ್ಲಿಯ ತಾಲ್ಲೂಕ್ ಆಫೀಸುಗಳಲ್ಲಿ ಸ್ಟ್ಯಾಫ್ ಬಹಳ ಕಡಿಮೆ ಇರುತ್ತದೆ. ಇದು ಸರಕಾರದ ನಜರಿಗೆ ಬಂದಿದೆ. ಸ್ಟ್ಯಾಫ್ ಕಡಿಮೆ ಇರುವುದರಿಂದ ತಾಲ್ಲೂಕ್ ಆಫೀಸುಗಳಲ್ಲಿ ಎಷ್ಟು ಕೆಲಸವಾಗಬೇಕೋ ಅಷ್ಟು ಕೆಲಸವಾಗದೆ, ಕೆಲಸ ಉಳಿದು ಅಲ್ಲಿಗೆ ಬರುವ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಉಳಿದ ಪ್ರದೇಶದಲ್ಲಿರುವಂತೆ ಈ ಪ್ರದೇಶದಲ್ಲಿಯೂ ತಾಲ್ಲೂಕ್ ಆಫೀಸಿನಲ್ಲಿ ಸ್ಟ್ಯಾಫ್ ಹೆಚ್ಚು ಮಾಡಬೇಕೆಂದು ಈ ಸಮಯದಲ್ಲಿ ಸರಕಾರಕ್ಕೆ ತಿಳಿಸಲು ಬಯಸುತ್ತೇನೆ.

ಇನ್ನು ಭೂಕಂದಾಯದ ವಿಚಾರ ಹೇಳುವುದಾದರೆ ನಮ್ಮ ಉತ್ತರ ಕರ್ನಾಟಕ ಪ್ರದೇಶದಲ್ಲಿ ಮೊದಲಿನಿಂದಲೂ ಭೂಕಂದಾಯ ಹೆಚ್ಚಿಗೆ ಹಾಕುತ್ತಾ ಬಂದಿದ್ದಾರೆ. ಇದರ ಬಗ್ಗೆ ರಿವಿಜನ್ ಸೆಟ್ಲ್ ಮೆಂಟ್ ಇದುವರೆಗೆ ಆಗಿಲ್ಲ. ಇದರಿಂದ ರೈತನಿಗೆ ತೊಂದರೆಯಾಗಿದೆ. ಇದಲ್ಲದೆ ಸರ್‌ಚಾರ್ಜ್ ಹಾಕಿದ್ದಾಗ್ಗೆ ಕೂಡ ರೈತರಿಗೆ ಎರಡರಷ್ಟು ನಷ್ಟವಾಗಿದೆ. ಇದನ್ನು ಈ ಮೊದಲು ಸಹ ಸರಕಾರಕ್ಕೆ ತಿಳಿಸಿದ್ದೇವೆ. ಇನ್‌ಕಂಟ್ಯಾಕ್ಸ್ ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ರಿಯಾಯಿತಿ ಕೊಡುವ ಹಾಗೆ ಇದ ರಲ್ಲಿ ಸಹ ರೈತರಿಗೆ ರಿಯಾಯತಿ ಕೊಡಬೇಕೆಂದು ಹೇಳುತ್ತೇನೆ. ಇದು ಯಾವ ಆಧಾರದಮೇಲೆ ನಿಂತಿದೆ ಎಂಬುದನ್ನು ಜನಗಳಿಗೆ ತಿಳಿಯಪಡಿಸಿ ಕಂದಾಯ ರಿಯಾಯತಿ ಕೊಟ್ಟು ರೈತರ ಮೇಲೆ ಉಪಕಾರ ಮಾಡಬೇಕೆಂದು ಹೇಳಬಯಸುತ್ತೇನೆ.

ಇಷ್ಟು ಅಲ್ಲದೇನೆ, ತಮಗೆ ಗೊತ್ತಿದ್ದಂತೆ ಆಡಳಿತದಲ್ಲಿ ಡೆಪ್ಯುಟಿ ಕಮಿಷನರನ್ನು ನೇಮಿಸುವಾಗ ಕನ್ನಡ ಬರತಕ್ಕಂಥವರನ್ನು ನೇಮಿಸುತ್ತಿಲ್ಲ. ಇದರಿಂದ ಜಿಲ್ಲೆಯೊಳಗೆ ಸಾಮಾನ್ಯವಾಗಿ ರೆಪ್ರೆ ಸೆಂಟೇಷನ್ ಮಾಡುವಾಗ ಕೆಲವೊಂದು ತೊಂದರೆಗಳು ಬಂದಿವೆ. ಹೇಳಬೇಕು ಎಂದರೆ ತುಮಕೂರು ಕಡೆಯಿಂದ ತಮ್ಮ ಕಡೆ ಎಷ್ಟೋಸಾರಿ ಅವರು ರೆಪ್ರಸೆಂಟೇಷನ್ ಮಾಡಿದ್ದಾರೆ; ನಮ್ಮಲ್ಲಿರ ತಕ್ಕಂಥ ಕಲೆಕ್ಟರಿಗೆ ಕನ್ನಡ ಬರುವುದಿಲ್ಲ, ಕನ್ನಡದಲ್ಲಿ ಅರ್ಜಿ ಕೊಟ್ಟರೆ ತಿರಸ್ಕರಿಸುತ್ತಿದ್ದಾರೆ ಎಂದು. ಇನ್ನುಮುಂದೆಯಾದರೂ ಕೂಡ ಈ ಅಧಿಕಾರಿಗಳಿಗೆ ಕನ್ನಡವನ್ನು ಒತ್ತಾಯವಾಗಿ ಕಲಿಸಲಿಕ್ಕೆ ಮಾರ್ಗ ಮಾಡಿಕೊಡಬೇಕು. ಅವರಿಗೆ ಕನ್ನಡ ಕಲಿಸುವ ವ್ಯವಸ್ಥೆ ಮಾಡಬೇಕು; ಮತ್ತು ಕನ್ನಡ ಬಲ್ಲಂಥವರಿಗೆ ಆದಷ್ಟು ಹೆಚ್ಚು ಪ್ರಾಶಸ್ತ್ಯ ಕೊಡಬೇಕು ಎಂದು ಹೇಳುತ್ತೇನೆ.

ಕಂದಾಯ ಖಾತೆಗೆ ಒಳಪಟ್ಟಂತೆ ಕ್ಯಾಟಲ್ ಪೌಂಡುಗಳು ಇವೆ. ಮುಂಬೈ ಕರ್ಣಾಟಕದ ಪ್ರದೇಶದಲ್ಲಿರತಕ್ಕಂಥ ಕಟ್ಟಡಗಳು ಎಷ್ಟೋ ವರ್ಷಗಳಿಂದ ಬಿದ್ದುಹೋಗಿವೆ. ಈ ಪರಿಸ್ಥಿತಿ ಇರು ವಾಗ ಕ್ಯಾಟಲ್ ಪೌಂಡುಗಳ ಸಲುವಾಗಿ ಕೇವಲ 54 ಸಾವಿರ ರೂಪಾಯಿಗಳನ್ನು ಬೆಳಗಾಂ ಡಿವಿ ಜನ್ನಿಗೆ ಕೊಟ್ಟಿದ್ದಾರೆ. ಅದು ಸಾಕಾಗದು. ಅದಕ್ಕಾಗಿ ಸರ್ವೆ ಮಾಡಬೇಕು. ಪ್ರತಿಯೊಂದು ಊರಿನಲ್ಲಿಯೂ ಕ್ಯಾಟಲ್ ಪೌಂಡುಗಳ ರಿಪೇರಿ, ವಗೈರೆ ಆಗಲಿಲ್ಲ. ಆದಷ್ಟುಮಟ್ಟಿಗೆ ಅಂಥಕಡೆ ರಿಪೇರಿ ಮಾಡಿ, ದನಗಳು ಹೊರಗೆ ಹೋಗುವ ಪರಿಸ್ಥಿತಿ ಇಲ್ಲದಂತೆ ನೋಡಿಕೊಳ್ಳಬೇಕು ಎಂದು ಹೇಳಬಯಸುತ್ತೇನೆ.

ಈ ದಿವಸ ತಾವುಗಳು ಅನಾವಶ್ಯಕವಾಗಿ ಟ್ಯಾಂಕುಗಳನ್ನು ಇಟ್ಟುಕೊಂಡಿದ್ದೀರ. ನಾನು ಹೇಳಬೇಕೆಂದರೆ ರೆವಿನ್ಯೂ ಕಚೇರಿಗೆ ಹೋಗಿ ಕೇಳಿದಾಗ, ನಮಗೆ ಅದು ಸಂಬಂಧಪಟ್ಟಿಲ್ಲ ಎಂಬ ವಿಚಾರ ಮೇಲಿಂದ ಮೇಲೆ ಹೇಳುವುದು ನಮಗೆ ಕಂಡುಬರುತ್ತಿದೆ. ಜಾನುವಾರುಗಳಿಗೆ ಕುಡಿ ಯುವ ನೀರಿಲ್ಲದ ಪರಿಸ್ಥಿತಿಯಲ್ಲಿ, ಕೆರೆಗಳು ಹೂಳುತುಂಬಿ ಹೋಗಿವೆ. ನಿಮಗೆ ಅವುಗಳನ್ನು ಮೈಂಟೇನ್ ಮಾಡುವುದಕ್ಕಾಗುವುದಿಲ್ಲ ಅನ್ನುವುದು ಕಂಡುಬರುತ್ತಿದೆ. ಪಿ.ಡಬ್ಲ್ಯು.ಡಿ. ಅಥವಾ ತಾಲ್ಲೂಕು ಬೋರ್ಡುಗಳಿಗೆ ವಹಿಸಿಕೊಟ್ಟು, ಅವರು ಅವುಗಳ ಯೋಗಕ್ಷೇಮ ನೋಡಿಕೊಂಡು ಅವು ಗಳಿಂದ ಜನರಿಗೆ ಉಪಯೋಗವಾಗುವಂತೆ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಈ ಸ್ಟ್ಯಾಂಪು ಇಲಾಖೆಯಲ್ಲಿ ಸಬ್‌ರಿಜಿಸ್ಟ್ರಾರ್‌ರವರ ವಿಚಾರವನ್ನು ಒಂದೆರಡು ಮಾತುಗಳಲ್ಲಿಯೇ ಹೇಳುತ್ತೇನೆ. ರೈತರು ಸಬ್‌ರಿಜಿಸ್ಟ್ರಾರ್ ಆಫೀಸಿಗೆ ವ್ಯವಹಾರಕ್ಕಾಗಿ ಹೋದಾಗ, ಅಲ್ಲಿ ಪಬ್ಲಿಕ್ ಆಗಿ ಭ್ರಷ್ಟಾಚಾರ ನಡೆಯುತ್ತಾ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಅಲ್ಲಿ 100ಕ್ಕೆ 10 ರೂಪಾಯಿ ಲಂಚ ಕೊಡಬೇಕು. ಇದು ಕಟ್ಟುನಿಟ್ಟಾಗಿ ರಾಜ್ಯಾದ್ಯಂತ ನಡೆಯುತ್ತಿರುವುದರಿಂದ ಇದರ ಬಗ್ಗೆ ಕೆಲವೊಂದು ನಿಗಾ ವಹಿಸಿ, ಸ್ಟ್ರಿಕ್ಟ್ ಆರ್ಡರ್ಸ್ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನೂ ಅನಿಮಲ್ ಹಸ್ಬೆಂಡರಿ ಇಲಾಖೆ ಬಗ್ಗೆ ಹೇಳುವುದು ಬಹಳವಿದೆ. ಇದೇ ಊರಿನಲ್ಲಿ ಡಿಸೆಂಬರ್ ತಿಂಗಳಿನಲ್ಲಿ ರಿಂಡರ್‌ಪೆಸ್ಟ್ ಡಿಸೀಸ್ ಹಬ್ಬಿದಾಗ, ತಾವು ತರಿಸಿದ ಜರ್ಸಿ ಜಾನುವಾರುಗಳೂ ಅದಕ್ಕೆ ಒಳಪಟ್ಟು ಸತ್ತವು. ತಮ್ಮ ಆಫೀಸರುಗಳು ತಕ್ಷಣ ತಕ್ಕ ನಿಗಾ ವಹಿಸದೆ, ಡಿಸೆಂಬರಿನಿಂದ ಫೆಬ್ರುವರಿ ವರೆಗೂ ಸುಮ್ಮನೆ ಕುಳಿತುಕೊಂಡರು. ನಾನು ಪೇಪರಿನಲ್ಲಿ ಓದಿದೆ: ಒಂದೇ ಮನೆಯಲ್ಲಿ 25 ಸಾವಿರ ಬೆಲೆ ಬಾಳತಕ್ಕಂಥ ಹಸುಗಳು ತೀರಿಕೊಂಡಿವೆ. ಈಗ ಬಂದಿರತಕ್ಕ ರಿಪೋರ್ಟ್ ಮೇರೆಗೆ ಹುಬ್ಬಳ್ಳಿಯಲ್ಲಿ ಈಗಾಗಲೇ 60 ಜಾನುವಾರು ಸತ್ತಿವೆ. ಬೆಂಗಳೂರಿನಲ್ಲಿ 300, ರಾಜ್ಯದ ಇತರ ಕಡೆಗಳಲ್ಲಿ ಕೆಲವು ಕಡೆ 400 ಕೆಲವು ಕಡೆ 300, ಕೆಲವು ಕಡೆ 80 ಹೀಗೆ ಜಾನುವಾರುಗಳ ತೀರಿಕೊಂಡಿವೆ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಇರತಕ್ಕ ಹಳ್ಳಿಗಳಲ್ಲಿ ಈ ಡಿಸೀಸು ಪ್ರಸಾರವಾಗದ ಹಾಗೆ ತಡೆಯಲು ಡಿಪಾರ್ಟ್‌ಮೆಂಟಿಗೆ ಆಗದೇನೆ, ಇವತ್ತಿನ ದಿವಸ ಜಾನುವಾರುಗಳು ಸಾವಿಗೆ ತುತ್ತಾಗುವ ಪರಿಸ್ಥಿತಿ ಬಂದಿದೆ. ತಮಗೆ ಗೊತ್ತಿರುವ ಹಾಗೆ 1948ನೆ ಇಸವಿಯಲ್ಲಿ ರಿಂಡರ್‌ಪೆಸ್ಟ್ ಈ ಪ್ರದೇಶಕ್ಕೆ ಬಂದು ಜಾನುವಾರುಗಳು ಸತ್ತ ಪರಿಸ್ಥಿತಿ ಕಂಡುಬಂದಿತ್ತು. ತದನಂತರ 1958ನೇ ಇಸವಿಯಿಂದ, ಈ ಡೈರೆಕ್ಟರು ಚಾರ್ಜು ತೆಗೆದುಕೊಂಡ ಮೇಲೆ ನಿಗಾ ವಹಿಸುತ್ತಾ ಇಲ್ಲ. ಹೆಬ್ಬಾಳದಲ್ಲಿ ಲೈವ್ ಸ್ಟಾಕ್ ಎಕ್ಸ್‌ಪರ್ಟ್ ಇದ್ದಾರೆ; ಈ ಇಲಾಖೆಯಲ್ಲಿ ಇನ್ನೂ ಅನೇಕ ಎಕ್ಸ್‌ಪರ್ಟುಗಳು ಇದ್ದಾರೆ. ಈ ಡಿಸೀಸು ತಡೆಯಲು ಏನು ಮಾಡಬೇಕು ಎಂದು ಕೇಳಿದ್ದಾರೆಯೇ? ಇದರ ಬಗ್ಗೆ ಪರಿಶೋಧನೆ ನಡೆಸುವ ಎಕ್ಸ್‌ಪರ್ಟುಗಳಿದ್ದಾರೆ; ಅಂಥವರ ಸಲಹೆಗಳನ್ನೇನಾದರೂ ಪಡೆದುಕೊಂಡಿದ್ದಾರೆಯೇ, ನಿಮ್ಮ ಡೈರೆಕ್ಟರು, ಎಂದು ಕೇಳಬಯಸುತ್ತೇನೆ. ಇಂಥ ಸಂದರ್ಭದಲ್ಲಿ, ಯಾವುದಾದರೂ ಒಂದು ರೋಗ ರಾಜ್ಯದಲ್ಲಿ ಹಬ್ಬಿದಾಗ, ಯಾರ್ಯಾರು ಎಕ್ಸ್‌ಪರ್ಟುಗಳು ಇದ್ದಾರೋ ಅವರನ್ನೆಲ್ಲಾ ಕರೆಸಿಕೊಂಡು ವಿಚಾರ ವಿನಿಮಯ ಮಾಡಿದ್ದರೆ, ಈ ತರಹ ರೋಗ ಹಬ್ಬಿ ಜಾನುವಾರುಗಳು ಸಾಯಲಿಕ್ಕೆ ಅವಕಾಶವಾಗುತ್ತಾ ಇರಲಿಲ್ಲವೆಂದು ಹೇಳುತ್ತೇನೆ. ಇಷ್ಟೇ ಅಲ್ಲದೆ, ಈಗಾಗಲೇ ಸಾವಿರ, ಎರಡು ಸಾವಿರದ ಕಿಮ್ಮತ್ತಿನ ದನಗಳು ಸತ್ತಿವೆ. ರೈತರೂ ತಮಗೆ ಈಗಾಗಲೇ ಇದರ ಬಗ್ಗೆ ಕಾಂಪೆನ್ಸೇಷನ್ ಕೊಡಬೇಕೆಂದು ಅರ್ಜಿಗಳನ್ನು ಕಳುಹಿಸಿದ್ದಾರೆ; ಕಾಂಪೆನ್ಸೇಶನ್ ಕೊಡಲಿಕ್ಕೇ ಬೇಕು. ಸೆಂಟ್ರಲ್ ಗವರ್ನಮೆಂಟಿನವರು, ಪಂಜಾಬ್ ಮತ್ತು ಇತರ ಪ್ರದೇಶಗಳಲ್ಲಿ ಈ ಇಲಾಖೆಯವರು ಜಾನುವಾರುಗಳ ರಕ್ಷಣೆಯ ಬಗ್ಗೆ ಸ್ಕೀಂ ಮಾಡಿ ಜಾರಿಯಲ್ಲಿ ತಂದಿದ್ದಾರೆ. ಆದರೆ ನಮ್ಮ ರಾಜ್ಯದ ಡಿಪಾರ್ಟ್‌ಮೆಂಟಿನವರು ಇವತ್ತಿನವರೆಗಾದರೂ ಈ ಜಾನುವಾರುಗಳ ರಕ್ಷಣೆಯ ಬಗ್ಗೆ ಏನಾದರೂ ಸಲಹೆಗಳನ್ನು ಇತ್ತಿದ್ದಾರೆಯೇ ಎಂದು ಕೇಳಬಯಸುತ್ತೇನೆ. ಬಹಳ ಬೆಲೆ ಬಾಳುವ ಜಾನುವಾರುಗಳು ಹೋಗಿವೆ; ಎರಡು ಸಾವಿರ ರೂಪಾಯಿ ಕಿಮ್ಮತ್ತು ದನಗಳಿಗೆ ಕೊಡುತ್ತಾ ಇದ್ದಾರೆ. ಇವತ್ತು ಇಂಥ ಹಸುಗಳು ಸತ್ತುಹೋಗುವ ಒಂದು ಪರಿಸ್ಥಿತಿ ಏನು ಆಗುತ್ತಿದೆ, ಅದನ್ನು ತಪ್ಪಿಸಿ ಮೊನ್ನೆದಿವಸ ಪೇಪರಿನಲ್ಲಿ ನೋಡಿದೆ: ಮಲ್ಲೇಶ್ವರದಲ್ಲಿ 9 ದನಗಳು ಸತ್ತು 15 ಸಾವಿರ ರೂಪಾಯಿ ಲುಕ್ಸಾನು ಆಗಿರುತ್ತದೆ. ಇವತ್ತು ಆ ಹಸು ಸಂಪತ್ತನ್ನು ನಂಬಿಕೊಂಡಿರುವವರು ಉರುಲು ಹಾಕಿಕೊಳ್ಳುವ ಪರಿಸ್ಥಿತಿ ಬಂದಿದೆ. ಈ ಡಿಸೀಸ್ ಹರಡದಂತೆ ಮುಂಜಾಗ್ರತೆ ಕ್ರಮ ತೆಗೆದುಕೊಂಡರೆ, ಹಸುಗಳು ಉಳಿಯುತ್ತಲೇ ಹಸುಗಳನ್ನು ಇನ್‌ಷ್ಯೂರ್ ಮಾಡತಕ್ಕಂಥ ಕಂಪೆನಿಗಳೂ ದೊರಕುತ್ತವೆ. ಸ್ವಲ್ಪಮಟ್ಟಿಗೆ ಜನಗಳಲ್ಲಿ ಇನ್‌ಷ್ಯೂರ್ ಮಾಡಲು ಹಿಂಜರಿಯುವ ಭಾವನೆ ಇರುವುದರಿಂದ, ನಿಮ್ಮ ಡಿಪಾರ್ಟ್‌ಮೆಂಟಿನವರು ಕುಳಿತಿದ್ದಾರೆ. ಕ್ಯಾಟಲ್ ಇನ್‌ಷ್ಯೂರೆನ್ಸ್ ಸ್ಕೀಮುಗಳು ಏನಿವೆ ಎಂಬುದನ್ನು ಇಲಾಖೆಯವರು ಜನಗಳಿಗೆ ತಿಳಿಯಪಡಿಸದೆ ಹೋಗಿ, ಜನಗಳು ತಮ್ಮಲ್ಲಿ ಮೊರೆ ಇಡಬೇಕಾದ ಪರಿಸ್ಥಿತಿ ಇದೆ.

ಬೇಕಾದಷ್ಟು ಸ್ಟಾಕ್‌ಮನ್ ಸೆಂಟರುಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಸರಕಾರ ದುಡ್ಡು ಖರ್ಚು ಮಾಡುತ್ತಾ ಇಲ್ಲವೆಂದು ಹೇಳುತ್ತೇನೆ. ಹಣ ಸರಿಯಾಗಿ ವಿನಿಯೋಗವಾಗಬೇಕು. ಹಣ ಸರಿಯಾಗಿ ಖರ್ಚು ಮಾಡುತ್ತಾರೋ ಇಲ್ಲವೋ ಎಂದು ನೋಡಬೇಕಾದರೆ ಒಂದು ಸ್ಟಾಕ್‌ಮನ್ ಸೆಂಟರಿಗೆ ಹೋಗಬೇಕು; ಅಲ್ಲಿ ಒಂದುಕಡೆಯೂ ಸಲಕರಣೆಗಳು ಸರಿಯಾಗಿಲ್ಲ. ಮೆಡಿಸಿನ್ನುಗಳೂ ಇಲ್ಲದೆ ಇರತಕ್ಕಂಥವು ಇವೆ. ರೋಗ ಬಂದಕೂಡಲೆ, ಇಂಜಕ್ಷನ್ ಟ್ಯೂಬು ಎಲ್ಲಿದ್ದರೂ ತೆಗೆದುಕೊಂಡು ಬನ್ನಿ ಎಂದು ಬಡಜನಗಳಿಗೆ ಹೇಳುತ್ತಾರೆ. ದುರ್ದೈವದಿಂದ ಜನಗಳಿಗೆ ಬೇಕಾದ ಔಷಧವೇ ಸಿಗದೆ ಇರುವಾಗ, ಇನ್ನು ಜಾನುವಾರುಗಳಿಗೆ ಔಷಧ ಎಲ್ಲಿ ಸಿಗಬೇಕು ! ಇಂಥ ಪರಿಸ್ಥಿತಿ ರೈತರಿಗೆ ಬಂದಿದೆ. ಔಷಧೋಪಚಾರವಿಲ್ಲದೆ ದನಗಳು ಸಾಯುವ ಪರಿಸ್ಥಿತಿ ಬಂದೊದಗಿದೆ. ಸ್ಟಾಕ್

(ಶ್ರೀ ಸಿದ್ದಯ್ಯ ಕಾಶೀಮಠ)

ಮೆನ್ ಸೆಂಟರುಗಳನ್ನು ಹೆಚ್ಚಾಗಿ ಮಾಡಿದ್ದೀರೆಂದು ನಾವು ಒಪ್ಪಿಕೊಳ್ಳುತ್ತಾ ಇದ್ದೇವೆ. ಅವಕ್ಕೆ ಸಲಕರಣೆಗಳನ್ನು ಕೊಟ್ಟು, ನೌಕರರುದಾರರಿಗೆ ಏನೇನು ಸೌಕರ್ಯಗಳು ಬೇಕೋ ಅವುಗಳನ್ನು ಒದಗಿಸಿಕೊಡಬೇಕು. ಮುಖ್ಯವಾದ ಇನ್ನೊಂದು ವಿಷಯ ಈಗ ಹೇಳುತ್ತೇನೆ. ಈ ಸ್ಟಾಕ್‌ಮೆನ್ ಸೆಂಟರುಗಳಲ್ಲಿ ಕೆಲಸ ಮಾಡತಕ್ಕ ದಲಾಯತ್‌ಗಳಿಗೆ 4-5 ವರ್ಷಗಳಾದರೂ ಕನ್‌ಫರ್ಮ್ ಮಾಡದೆ, ಪ್ರತಿ ವರ್ಷವೂ 8-10 ತಿಂಗಳು ಪಗಾರ ಕೊಡದಿರುವ ಪರಿಸ್ಥಿತಿ ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿದೆ; 8-10 ತಿಂಗಳು ಡಿಲೆ ಮಾಡುತ್ತಾ ಇದ್ದಾರೆ. ಈ ಸಣ್ಣ ನೌಕರುದಾರರಿಗೆ ಬರತಕ್ಕ ಪಗಾರ 50-60-70 ರೂಪಾಯಿ. ಅಂಥವರಿಗೆ ಈ ತರಹ ಕಷ್ಟ ಕೊಡುವುದು ತರವಲ್ಲ. ನಿಮ್ಮ ಆಜ್ಞೆಗಳು ಕಾರ್ಯಗತವಾಗುವಾಗ ಈ ರೀತಿ ಬಹಳ ಡಿಲೆಯಾಗುತ್ತದೆ. ಈ ಡಿಲೆ ಮಾಡುವವರ ಮೇಲೆ ಯಾವ ತರಹ ಕ್ರಮ ತೆಗೆದುಕೊಂಡಿದ್ದೀರ? ಏನು ಕ್ರಮ ತೆಗೆದುಕೊಂಡಿರುವುದನ್ನು ಹೇಳುತ್ತೀರ.

ಈ ರಿಂಡರ್‌ಪೆಸ್ಟ್ ಡಿಸೀಸ್ ಈ ವರ್ಷ ಬಹಳ ಸೀರಿಯಸ್ ಆಗಿ ಸ್ಪ್ರೆಡ್ ಆಗುತ್ತಾ ಇದೆ ಎನ್ನುವುದು ತಮಗೇ ಗೊತ್ತಿದೆ. ಡೈರೆಕ್ಟರು ಪೇಪರಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ಒಂದು ತಿಂಗಳೊಳಗೆ ಅದನ್ನು ನಾಶಮಾಡಿ, ಸ್ಪ್ರೆಡ್ ಆಗದ ಹಾಗೆ ನೋಡಿಕೊಳ್ಳುತ್ತೇವೆ ಎಂದು ಹೇಳಿದ್ದರು. ಆದರೆ 8-10 ತಿಂಗಳಾದ ನಂತರವೂ, ಆ ಡಿಸೀಸು ಬೇಕಾದಷ್ಟು ಹರಡಿ, ಸಾಕಷ್ಟು ಜಾನುವಾರುಗಳು ಸಾಯುವ ಪರಿಸ್ಥಿತಿ ಬಂದಿರುವಾಗ, ಅಂಥವರ ಮೇಲೆ ಯಾವ ತರಹ ಆಕ್ಷನ್ ತೆಗೆದುಕೊಳ್ಳುತ್ತೀರ? ಸರಕಾರ ಅವರ ವಿಷಯದಲ್ಲಿ ನಿರ್ದಯವಾಗಿರಬೇಕು ಎಂದು ಹೇಳುತ್ತೇನೆ. ಇನ್ನು ನಿಮಗೆ ಹೇಳಬೇಕೆಂದರೆ, ಇದೇ ಮೂಲ ಸಂಪತ್ತಾಗಿ ರೈತರಿಗೆ ಇರುವಾಗ, ಅದನ್ನು ಬದುಕಿಸಿಕೊಡತಕ್ಕಂಥ ಕರ್ತವ್ಯ ನಿಮ್ಮದಾಗಿದೆ. ಇದಕ್ಕಾಗಿ ಡಿಪಾರ್ಟ್‌ಮೆಂಟ್ ಬಗ್ಗೆ ತಾವು ಹೆಚ್ಚಿಗೆ ನಿಗಾ ವಹಿಸಿ, ಇನ್ನು ಮುಂದೆಯಾದರೂ ಕೂಡ ಈ ರೋಗ ಹರಡದಂತೆ ಯೋಗ್ಯ ಕಾರ್ಯಕ್ರಮ ತಕ್ಷಣ ತೆಗೆದುಕೊಳ್ಳುತ್ತೀರೆಂದು ನಂಬುತ್ತೇನೆ.

ಇನ್ನು ಕ್ಷಾಮ ಪರಿಹಾರ ಕಾಂಗಾರಿಗಳ ಬಗ್ಗೆ ಒಂದೆರಡು ವಿಷಯ ಹೇಳುತ್ತೇನೆ. ಕ್ಷಾಮ ಇದೆ ಅನ್ನತಕ್ಕಂಥಾದ್ದನ್ನು ಒಪ್ಪಿಕೊಂಡಿದ್ದೀರ. ಕ್ಷಾಮ ಪ್ರದೇಶಗಳು ಎಷ್ಟಿವೆ, ಅಲ್ಲಿ ಏನೇನು ಕೆಲಸಗಳನ್ನು ಸ್ಟಾರ್ಟ್ ಮಾಡಬೇಕು ಅನ್ನತಕ್ಕಂಥ ವಿಚಾರವನ್ನು ಸರ್ವೆ ಮಾಡಿಲ್ಲ. ತಮಗೆ ಹೇಳಬೇಕೆಂದರೆ ಒಂದೊಂದು ಜಿಲ್ಲೆಯೊಳಗೆ ಒಂದೊಂದು ತಾಲ್ಲೂಕಿನವರು ಊರುಬಿಟ್ಟು ಬೇರೆ ಹೋಗಿ ಇರತಕ್ಕ ಪರಿಸ್ಥಿತಿ ಬಂದಿದೆ. ಅವರು ಹೋದಮೇಲೆ ಮಳೆ ಕೂಡ ಸರಿಯಾಗಿ ಆಗಿಲ್ಲ, ಬೆಳೆ ಆಗಿಲ್ಲ. ಅವರು ಬೇರೆ ಊರಿಗೆ ನೆಲಸಲು ಹೋಗಿ ಊಟ ಇಲ್ಲದೆ, ಆರು ತಿಂಗಳು ಗಂಜಿ ಕುಡಿಯುವ ಪರಿಸ್ಥಿತಿ ಬಂದಿದೆ.

ಸರಕಾರದವರನ್ನು ಮೇಲಿಂದ ಮೇಲೆ ಕೇಳುತ್ತಾ ಬಂದದ್ದು ನಮಗೆ ಗೊತ್ತಿದೆ. ಎಲ್ಲವನ್ನೂ ಸರಕಾರದವರೇ ಮಾಡಬೇಕೆಂದು ಸರಕಾರದವರನ್ನೇ ಅವಲಂಬಿಸಿಕೊಂಡು ಕುಳಿತರೆ ಒಳ್ಳೆಯದಲ್ಲ ಎನ್ನುವುದೂ ನಮಗೆ ಗೊತ್ತಿದೆ, ಅದಕ್ಕೆ ಸರಕಾರದವರನ್ನು ಎಲ್ಲಾಕ್ಕೂ ಕೇಳುತ್ತಾ ಇಲ್ಲ. ಯಾವ ಪ್ರದೇಶದಲ್ಲಿ ಕ್ಷಾಮ ಇದೆ ಅಂತಹ ಪ್ರದೇಶಗಳಲ್ಲಿದರೂ ಕೂಡ ಈ ದಿವಸ ಈ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಡೆಪ್ಯುಟಿ ಕಮೀಷನರಿಗೆ ತಾವು ಒಂದು ಆದೇಶವನ್ನು ಕಳುಹಿಸಿ ಅವನ್ನು ಶುರು ಮಾಡಲಿಕ್ಕೆ ಪ್ರಯತ್ನ ಮಾಡಬೇಕು. ಧಾರವಾಡ ಜಿಲ್ಲೆಯಲ್ಲಿ ಹಾವೇರಿ, ಶಿರಹಟ್ಟಿ, ನವಲುಗುಂದ, ರೋಣದಲ್ಲಿ ಕೆಲವು ಭಾಗ, ಕುಂದಗೋಳ ಈ ಪ್ರದೇಶಗಳಲ್ಲಿ ತಕ್ಷಣ ಈ ಕಾಮಗಾರಿಗಳನ್ನು ಈ ದಿವಸದಿಂದೇ ಶುರು ಮಾಡಬೇಕೆಂದು ಈ ಸಮಯದಲ್ಲಿ ಸರಕಾರದವರನ್ನು ಕೇಳಿಕೊಳ್ಳುತ್ತೇನೆ. ಹಾಗೆ ಮಾಡಿದ್ದೇ ಆದರೆ ಅಲ್ಲಿ ಯಾವ ತರಹದ ಕೆಲಸವೂ ಇಲ್ಲವೇ ನಿರುದ್ಯೋಗದಿಂದ ಇದ್ದಾರೆ ಅವರಿಗೆ ಮಳೆ ಬರುವ ತನಕ ಬಿತ್ತನೆ ಕೆಲಸ ಶುರುವಾಗುವ ತನಕ—ಎರಡು ತಿಂಗಳಿನ ಮಟ್ಟಿಗಾದರೂ ಗಂಜೀ ಹಾಕಿದ್ದೇ ಆದರೆ ಅವರು ತಮ್ಮನ್ನು ನೆನೆಸಿಕೊಳ್ಳುವುದು ಅಷ್ಟೇ ಅಲ್ಲ ತಮಗೆ ಬಹಳ ಉಪಕೃತರಾಗಿರುತ್ತಾರೆ ಎಂದು ನಾನು ಹೇಳುತ್ತೇನೆ.

ಇನ್‌ಷ್ಯೂರೆನ್ಸ್ ಬಗ್ಗೆ ಎಲ್ಲಾ ಕಡೆಯೂ ಜಾರಿಗೆ ತಂದು ಒಂದು ಅಂತಹ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳುತ್ತಾ ಇದ್ದೀರಿ ಅದರ ಬಗ್ಗೆ ಹೆಚ್ಚು ಹೇಳದೆ, ಇಷ್ಟು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಅಧ್ಯಕ್ಷರೇ, ರೆವಿನ್ಯೂ ಸಚಿವರು ಮಂಡಿಸಿರುವ ಬೇಡಿಕೆಗೆ ನನ್ನ ಸಂಪೂರ್ಣವಾದ ಅನುಮೋದನೆಯನ್ನು ಕೊಡುತ್ತಾ ಈ ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ಮುಂಚಿತವಾಗಿ ಈ ಸಾರಿ ಮಾನ್ಯ ರೆವಿನ್ಯೂ ಸಚಿವರು ಕಂದಾಯದ ಮೇಲೆ ಹಾಕತಕ್ಕ ಸರ್‌ಚಾರ್ಜನ್ನು ನಿಲ್ಲಿಸಿದ್ದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಕಳೆದ ಎರಡು ವರ್ಷದಿಂದ ಈ ಒಂದು

ವಿಶೇಷ ಪರಿಸ್ಥಿತಿಯ ಸಮಯದಲ್ಲಿ ಏನೊಂದು ಸರ್ಚಾರ್ಜನ್ನು ರೈತರಮೇಲೆ ಸರಕಾರದವರು ಹೊರಿಸಿದ್ದರು ಅದನ್ನು ರೈತರು ಸಂತೋಷದಿಂದ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಒಂದು ಸೂಚನೆಯನ್ನು ನಾನು ಸರಕಾರದವರಿಗೆ ಕೊಡಲು ಬಯಸುತ್ತೇನೆ. ಅದೇನೆಂದರೆ ಈ ಸರ್ಚಾರ್ಜನ್ನು ಜಾರಿಗೆ ತಂದಾಗ 5 ಎಕರೆಗೆ ಕಡಿಮೆ ಇರುವವರಿಂದ ಸರ್ಚಾರ್ಜು ವಸೂಲು ಮಾಡುವುದಿಲ್ಲ ಎಂದು ಹೇಳಿದ್ದಿರಿ ಮತ್ತು ಅದು ಶಾಸನದಲ್ಲೂ ಕೂಡ ವಿಧಾಯಕವಾಗಿದೆ. ಆದರೂ ಕೂಡ ಕೆಲವು ಕಡೆಗಳಲ್ಲಿ ಖುಷ್ಕಿ 5 ಎಕರೆಗಿಂತ ಕಡಿಮೆ ಇರುವ ರೈತರಿಂದಲೂ ಈ ಕಂದಾಯವನ್ನು ವಸೂಲು ಮಾಡಿದ್ದಾರೆ. ಆ ರೀತಿಯ ವಸೂಲಾತಿಯನ್ನು ಯಾವ ರೈತರು ಕೊಟ್ಟಿದ್ದಾರೆ, ಅವರಿಗೆ ವಾಪಸು ಮಾಡುವುದು ಅಥವಾ ಮುಂದಿನ ವರ್ಷದ ಕಂದಾಯಕ್ಕೆ ಅದನ್ನು ಜಮಾ ಮಾಡಿಕೊಳ್ಳತಕ್ಕ ಒಂದು ವ್ಯವಸ್ಥೆಯನ್ನು ಸರಕಾರದವರು ಮಾಡಬೇಕೆಂದು ನಾನು ಮಾನ್ಯ ರೆವಿನ್ಯೂ ಸಚಿವರಿಗೆ ಸೂಚನೆ ಮಾಡುತ್ತೇನೆ. ರೈತರು ಎರಡು ವರ್ಷ ಯಾವ ಸರ್ಚಾರ್ಜನ್ನು ಹಾಕಿದ್ದಿರಿ ಅದನ್ನು ಕೊಟ್ಟಿದ್ದಾರೆ ಮತ್ತು 3 ನೇ ವರ್ಷವೂ ಕೂಡ ಹಾಕಬೇಕೆಂದು ಏನು ಆಲೋಚನೆ ಇತ್ತು ಅದನ್ನು ನಿಲ್ಲಿಸಿದ್ದೀರಿ, ನಮ್ಮ ದೇಶದಲ್ಲಿ ನೂರಕ್ಕೆ ಎಂಬತ್ತು ಭಾಗ ರೈತರು, ವ್ಯವಸಾಯ ವೃತ್ತಿಯನ್ನು ಅವಲಂಬಿಸಿದ್ದಾರೆ, ಅವರಿಗೆ ಏನು ಕಂದಾಯವನ್ನು ಹಾಕಿದರೂ ಸದ್ದಿಲ್ಲದೇ ಕೊಡತಕ್ಕ ಜನ ಅವರು. ಸರಕಾರದವರಿಗೆ ಕಷ್ಟ ಬಂದಾಗ, ದೇಶಕ್ಕೆ ಕಷ್ಟ ಬಂದಾಗ ಅವರು ಯಾವ ತ್ಯಾಗಕ್ಕೂ ಕೂಡ ಸಿದ್ಧರಾಗಿದ್ದಾರೆ. ಬಹಳ ಪುರಾತನವಾದ ಒಂದು ಮಾತು ಎಂದರೆ ರೈತರು ಸರಕಾರದ ಬೆನ್ನು ಮೂಳೆ ಅಂತ. ನಿಜವಾಗಿಯೂ ಸರಕಾರದ ಕೆಲಸಕಾರ್ಯಗಳು ಸುಗಮವಾಗಿ ನಡೆಯಬೇಕಾದರೆ, ದೇಶದಲ್ಲಿ ಜನರೆಲ್ಲರೂ ಸುಖ ಶಾಂತಿಯಿಂದ ಬಾಳಬೇಕಾದರೆ ರೈತ ಬೆಳಿಗ್ಗೆಯಿಂದ ಸಂಜೆಯವರೆಗೂ ದುಡಿದು ಅದರ ಫಲವನ್ನು ಜನರು ಅನುಭವಿಸುವುದು ಆಗಿದೆ. ಅಲ್ಲದೇ ಇಡೀ ದೇಶದ ಕೋಟ್ಯಾಂತರ ಪ್ರಜೆಗಳಿಗೆ ಅವನು ನೆರವಾಗಬೇಕಾಗಿದೆ. ಅವನ ವಿಷಯದಲ್ಲಿ ಸಹಾನುಭೂತಿಯಿಂದ ವರ್ತಿಸಬೇಕು ಮತ್ತು ಯಾವ ರೈತನ ಪುರೋಭಿವೃದ್ಧಿಯಿಂದ ನಮ್ಮ ದೇಶದ ಮುಂದಿನ ಭವಿಷ್ಯ ರಚನೆಯಾಬೇಕಾಗಿದೆ, ಯಾವ ರೈತನ ಒಂದು ಸರ್ವತೋಮುಖವಾದ ಅಭಿವೃದ್ಧಿಯ ಕೆಲಸ ಮಾಡಬೇಕಾಗಿದೆ ಅದನ್ನು ಮಾಡಬೇಕೆಂದು ಇವತ್ತಿನ ದಿವಸ ಇಲ್ಲಿ ಒತ್ತಿ ಹೇಳಬೇಕಾದ ಸಂದರ್ಭ ಇಲ್ಲ. ಆದ್ದರಿಂದ ಈ ಸರ್ಚಾರ್ಜನ್ನು ತೆಗೆದಿರುವುದು ಅಭಿನಂದನೀಯವಾದ ವಿಚಾರ. ರೈತರ ವಿಷಯದಲ್ಲಿ ಸರಕಾರದವರ ಸಹಾನುಭೂತಿಯಿಂದ ಹೋಗಬೇಕಾದ್ದು ಮತ್ತು ಹೋಗತಕ್ಕದ್ದು ಸರಕಾರದ ಆದ್ಯ ಕರ್ತವ್ಯವಾಗಿದೆ.

ಇನ್ನು ಈ ಭೂಸುಧಾರಣೆ ಬಹಳ ಪ್ರಾಮುಖ್ಯವಾದ ವಿಚಾರ. ಭೂಸುಧಾರಣೆಯ ವಿಷಯದಲ್ಲಿ ಸರಕಾರದವರು ನಮಗೆ ಸ್ವಾತಂತ್ರ್ಯ ಬಂದ ಲಾಗಾಯ್ತು ಕಳೆದ 16 ವರ್ಷಗಳಿಂದ ಅವಿಶ್ರಾಂತವಾಗಿ ಈ ಸುಧಾರಣೆಯನ್ನು ಜಾರಿಗೆ ತರಬೇಕೆಂಬ ದೃಷ್ಟಿಯಿಂದ ಅನೇಕ ವಿಧವಾದ ಸುಧಾರಣೆಗಳನ್ನು ಜಾರಿಗೆ ತಂದಿದ್ದಾರೆ. ಜಹಗೀರಿ, ಇನಾಂ ಗ್ರಾಮಗಳು ಮತ್ತು ಈ ತರಹ ಯಾರು ತಾವು ಶ್ರಮಿಸದೆ, ಲಕ್ಷಾಂತರ ಜನ ಶ್ರಮಿಸತಕ್ಕ ಜನರಿಂದ ಪ್ರಯೋಜನವನ್ನು ಹೊಂದಿ ಸುಖವಾಗಿ ಕುಳಿತುಕೊಂಡು ಜೀವನ ಮಾಡುತ್ತಾ ಇದ್ದರು. ಆ ವಿಧವಾದ ಮಧ್ಯವರ್ತಿಯ ಯಜಮಾನಿಕೆಯನ್ನು ಸರಕಾರದವರು ತಪ್ಪಿಸಿದ್ದಾರೆ. ಅದರಿಂದ ಪೂರ್ಣವಾದ ಭೂಸುಧಾರಣೆಯಾದಂತೆ ಆಗಲಿಲ್ಲ. ಯಾವನು ಭೂಮಿಯನ್ನು ಉಳುತ್ತಾನೆಯೋ ಅವನೇ ಭೂಮಿಯ ಒಡೆಯನಾಗಬೇಕು. ಇದು ಕೇಂದ್ರ ಮತ್ತು ಪ್ರಾಂತ ಸರ್ಕಾರಗಳ ಮೂಲಭೂತವಾದ ತತ್ವ. ಇದನ್ನು ಸರಕಾರದವರು ಜಾರಿಗೆ ತಂದು ಯಾವ ಮನುಷ್ಯ ಭೂಮಿಯಲ್ಲಿ ಉತ್ತುತ್ತಾನೆಯೋ ಅವನಿಗೇ ಯಜಮಾನಿಕೆಯನ್ನು ಕೊಡುವಂತಹ ಸಂಪೂರ್ಣವಾದ ಭೂಸುಧಾರಣೆಯನ್ನು ಜಾರಿಗೆ ತರಬೇಕಾದ್ದು ಅತ್ಯಂತ ಮುಖ್ಯ ಮತ್ತು ಅತ್ಯಂತ ತೀವ್ರಗತಿಯಿಂದ ಆಗಬೇಕಾದ ಕಾರ್ಯವಾಗಿದೆ. ಆದರೆ, ಇವತ್ತು ಕೇರಳದಲ್ಲಿ ಆದಂತಹ ಸುಧಾರಣೆಯು ಸುಪ್ರೀಂ ಕೋರ್ಟಿಗೆ ಹೋಗಿ ಸುಪ್ರೀಂ ಕೋರ್ಟಿನಲ್ಲಿ ಆದ ತೀರ್ಮಾನದ ಪ್ರಕಾರ ರಾಜ್ಯಾಂಗದ 31 (ಎ) (ಬಿ) ಗೆ ಸಂಬಂಧಪಟ್ಟ ಹಾಗೆ ಮಾಲೀಕರಿಗೆ ಯಾವ ಒಂದು ಪರಿಹಾರವನ್ನು ಕೊಡಬೇಕು ಎಂಬ ವಿಷಯದಲ್ಲಿ ಪಾರ್ಲಿಮೆಂಟಿನಲ್ಲಿ 17ನೇ ತಿದ್ದುಪಡಿಯಾಗಿ, ರಾಜ್ಯ ಶಾಸನ ಸಭೆಗಳಲ್ಲೂ ಕೂಡ ಅದಕ್ಕೆ ಸಂಬಂಧಪಟ್ಟ ಹಾಗೆ ತಿದ್ದುಪಡಿಯಾದರೆ ಆಗ ಭೂಸುಧಾರಣೆಯನ್ನು ಜಾಗ್ರತೆ ಜಾರಿಗೆ ತರುವುದಕ್ಕೆ ಅನುಕೂಲವಾಗುತ್ತದೆ. ಈ ಸುಧಾರಣೆಯಾಗದೆ ಎರಡು ಮೂರು ವರ್ಷಗಳಿಂದ ಭೂಮಾಲೀಕರಿಗೂ ಮತ್ತು ಅವರ ಟೆನೆಂಟುಗಳಾಗಿ ಕೆಲಸ ಮಾಡತಕ್ಕ ರೈತ ವರ್ಗದವರಿಗೂ ಕೂಡ ಸರಿಯಾದಂತಹ ಮಧುರ ವಾತಾವರಣ ಉಂಟಾಗದೇ ಅವರುಗಳು ಸ್ವಲ್ಪ ಕಷ್ಟಕ್ಕೆ ಸಿಕ್ಕಿರುವುದರಿಂದ ನಮ್ಮ ರಾಜ್ಯ ಸರಕಾರದವರು ಕೇಂದ್ರ ಸರ್ಕಾರದ ಮೇಲೆ ತಮ್ಮ ಪ್ರಭಾವವನ್ನು ಬೀರಿ ಆದಷ್ಟು ಜಾಗ್ರತ ಪಾರ್ಲಿಮೆಂಟಿನಲ್ಲಿ ತಿದ್ದುಪಡಿ ಪಾಸ್ ಆಗಿ, ನಮ್ಮ ಶಾಸನ ಸಭೆಯಲ್ಲೂ ಕೂಡ ಅದಕ್ಕೆ ಸಂಬಂಧಪಟ್ಟ ತಿದ್ದುಪಡಿ ಆಗಿ ಬಹು ಜಾಗ್ರತೆಯಾಗಿ ಈ ಭೂಸುಧಾರಣೆಯನ್ನು ನಮ್ಮ ಸರಕಾರದವರು ನಮ್ಮ ವಿಶಾಲ ಮೈಸೂರಿನಲ್ಲಿ ಜಾರಿಗೆ ತಂದು ಶೇಕಡ ಎಂಬತ್ತು ಜನರು ಯಾರು ವ್ಯವಸಾಯದಲ್ಲಿ ನಿರತರಾಗಿದ್ದಾರೆ ಅವರು ಸುಖದಿಂದ ಇರುವಂತೆ ಮಾಡಬೇಕೆಂದು ಸರಕಾರ

(ಶ್ರೀ ಡಿ. ಎಂ. ಸಿದ್ದಯ್ಯ)

ದವರಿಗೆ ಸೂಚನೆ ಮಾಡಲು ಇಚ್ಛಿಸುತ್ತೇನೆ. ಇದನ್ನು ಅಲ್ಪಸ್ವಲ್ಪ ಜಾರಿಗೆ ಕೊಡುವುದರಿಂದ ರೈತರಿಗೆ ಸೌಕರ್ಯವಾಗಬಹುದು ಎಂದು ಮಾನ್ಯ ಸದಸ್ಯರು ಕೆಲವರು ಅಭಿಪ್ರಾಯಮಾಡಬಹುದು. ಆದರೆ ಈ ಭೂಸುಧಾರಣೆಯ ವಿಷಯದಲ್ಲಿ ಸಂಪೂರ್ಣವಾದ ಯಜಮಾನಿಕೆ ಯಾವ ರೈತ ಭೂಮಿಯಲ್ಲಿ ಉಳುಮೆ ಮಾಡುತ್ತಾನೆಯೋ ಅವನಿಗೆ ದೊರೆಯದಿದ್ದರೆ ಅವನ ಮನಸ್ಸಿಗೆ ನೆಮ್ಮದಿ ಇರುವುದಿಲ್ಲ ಇದನ್ನು ಒಂದೆರಡು ವರ್ಷದಲ್ಲಿ ಮಾಡತಕ್ಕ ಕೆಲಸವಲ್ಲ, ಅನೇಕ ವರ್ಷಗಳ ಕಾಲ ಆ ಭೂಮಿಯ ಮೇಲೆ ತನ್ನ ಬೆವರನ್ನು ಸುರಿಸಿ ಆ ಭೂಮಿಯನ್ನು ಫಲವತ್ತಾದ ಮತ್ತು ಸಂಪತ್‌ಭರಿತವಾದ ಭೂಮಿಯನ್ನಾಗಿ ಮಾಡಿ ಅದರಿಂದ ಹೆಚ್ಚು ಬೆಳೆಯನ್ನು ಬೆಳೆಯಬೇಕಾದರೆ ಅವನಿಗೆ ನಾನು ಆ ಭೂಮಿಯ ಯಜಮಾನ ಎಂದು ಹೇಳಿ ಅದರ ಮೇಲೆ ಅವನಿಗೆ ವಿಶ್ವಾಸ ಮೂಡಿದ ಹೊರತು ಸಂಪೂರ್ಣವಾಗಿ ಕೆಲಸ ಮಾಡುವುದಕ್ಕೆ ಅವನಿಗೆ ಮನಸ್ಸು ಬರುವುದಿಲ್ಲ. ಆದ್ದರಿಂದ ಭೂಸುಧಾರಣೆ ಸಂಪೂರ್ಣವಾಗಿ ಜಾರಿಗೆ ಬರಬೇಕಾದರೆ ಅದಕ್ಕೆ ಸಂಬಂಧಪಟ್ಟ ತಿದ್ದುಪಡಿಯನ್ನು ಪಾರ್ಲಿಮೆಂಟು ಮತ್ತು ಶಾಸನಸಭೆಗಳಲ್ಲಿ ಮಾಡಿ ತೀವ್ರಗತಿಯಿಂದ ಅದನ್ನು ಜಾರಿಗೆ ತರಬೇಕೆಂದು ನಾನು ಸರಕಾರದವರಿಗೆ ಸೂಚನೆ ಮಾಡುತ್ತೇನೆ. ಮತ್ತು ಭೂಮಿಯನ್ನು ಸರಕಾರದವರು ಹಂಚತಕ್ಕ ವಿಚಾರದಲ್ಲಿ ಈಗಾಗಲೇ ನಾಲ್ಕು ಲಕ್ಷ ಜಮೀನನ್ನು ಹಂಚಿದ್ದೇವೆ ಎಂದು ಹಣಕಾಸಿನ ಸಚಿವರ ಎರಡನೆಯ ಭಾಷಣದಲ್ಲಿ ಹೇಳಿದ್ದಾರೆ ಮತ್ತು ಈಗಿರತಕ್ಕ ಇನ್ನು 12 ಲಕ್ಷ ಎಕರೆಯಲ್ಲಿ 8 ಲಕ್ಷ ಎಕರೆಯನ್ನು ಫಾರೆಸ್ಟ್ ಡಿಪಾರ್ಟಮೆಂಟಿಗೆ ಕೊಡಬೇಕೇ ಏನು ಮಾಡಬೇಕು ಎನ್ನುವ ವಿಷಯದಲ್ಲಿ ಏನೋ ಅನಾನುಕೂಲ ಇದ್ದಹಾಗೆ ಇದೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಕೊಡುವುದು ಸೂಕ್ತ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಏಕೆಂದರೆ ಲಕ್ಷಾಂತರ ಎಕರೆ ಫಾರೆಸ್ಟ್ ಹೋಗುತ್ತಾ ಇರುವುದರಿಂದ ಬಹಳ ನಷ್ಟವಾಗುತ್ತಾ ಇದೆ. ಅರಣ್ಯ ಸಂಪತ್ತು ನಮ್ಮ ದೇಶದಲ್ಲಿ ಇರಬೇಕು. ಅದು ಇಲ್ಲದೇ ಇರುವುದರ ದೆಶೆಯಿಂದ ಆ 12 ಲಕ್ಷ ಎಕರೆಯನ್ನೂ ಕೂಡ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ವರ್ಗಾಯಿಸಬೇಕೆಂದು ನಾನು ಸೂಚನೆ ಮಾಡುತ್ತೇನೆ.

9 A.M.

ಇನ್ನು ಉಳಿದ 4 ಲಕ್ಷ ಎಕರೆಗಳನ್ನು ಹಂಚಬೇಕಾಗಿದೆ. ಆ ವಿಷಯದಲ್ಲಿ ಸಲಹೆ ಮಾಡುವುದು ಯಾರಿಗೆ ಭೂಮಿಯಿಲ್ಲ, ಯಾರು ಬೇರೆಯವರಿಗೆ ಪರಭಾರ ಮಾಡದೆ ಸ್ವತಃ ದುಡಿಮೆ ಮಾಡುವರೋ, ವ್ಯವಸಾಯಗಾರರಾಗಿ ಯಾರು ನಿರುದ್ಯೋಗಿಗಳಾಗಿರುವ ಜನರಿದ್ದಾರೋ ಅವರಿಗೆ ಇದನ್ನು ಹಂಚಬೇಕು, ಇದನ್ನು ತಿಳಿಯಲು ಇಡೀ ದೇಶದಲ್ಲಿ ಸರ್ವೆ ಮಾಡಿ ಅರ್ಹರಾದವರಿಗೆ ಸಹಾಯಮಾಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥಿಸುತ್ತೇನೆ. ಇದರ ಜೊತೆಗೆ ರಿಕಾರ್ಡ್ ಆಫ್ ರೈಟ್ಸ್, ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಮತ್ತು ಸುಧಾರಣೆ ಕೆಲಸ ಆಗಬೇಕಾದ್ದೂ ಬಹಳವಾಗಿದೆ, ಅದನ್ನೆಲ್ಲಾ ಪ್ರಾರಂಭಿಸಿದ್ದೇವೆ. 1964ನೆಯ ಇಸವಿಯ ಮಧ್ಯಭಾಗದಲ್ಲಿ ಪೂರೈಸುತ್ತೇವೆ ಎಂದು ಹಣಕಾಸಿನ ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇವೆಲ್ಲವನ್ನೂ ತೀವ್ರವಾಗಿ ಮಾಡಿದರೆ ರೈತರಿಗೆ ಬೇಕಾದ ಸೌಲಭ್ಯ ಒದಗುತ್ತದೆಂದು ಕಾಣುತ್ತದೆ.

ಅನಿಮಲ್ ಹಸ್ಬೆಂಡ್ರಿ ಕೂಡ ಈ ಸಚಿವರ ಇಲಾಖೆಗೆ ಸೇರಿದೆ. ಗೋಸಂಪತ್ತು ಬಹಳ ಮುಖ್ಯವಾದುದು. ಅದನ್ನು ಅಭಿವೃದ್ಧಿ ಮಾಡಲು ಸರಿಯಾದ ತಜ್ಞರು ಮತ್ತು ನಿಜವಾಗಿ ದೇಶದ ಹಿತದೃಷ್ಟಿಯಿಂದ ಕೆಲಸ ಮಾಡುವವರಿರಬೇಕು. ಅಂಥವರು ನಮ್ಮ ದೇಶದಲ್ಲಿಲ್ಲದಿದ್ದರೆ ಮತ್ತೊಂದು ದೇಶದಿಂದಲಾದರೂ ಕರೆಸಿ ಈ ಇಲಾಖೆಯ ಕೆಲಸ ಉತ್ತಮ ರೀತಿಯಿಂದಾಗುವಂತೆ ಮಾಡಲು ತೀವ್ರತೆಯಿಂದ ಕ್ರಮ ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಕ್ಷಾಮ ನಿವಾರಣೆಗೆ ತಾತ್ಕಾಲಿಕ ಪರಿಹಾರವೊದಗಿಸುವುದಕ್ಕಿಂತ ಶಾಶ್ವತವಾದ ಪರಿಹಾರವನ್ನೊದಗಿಸುವುದು ಸೂಕ್ತ. ಕ್ಷಾಮ ಬಾರದಿರುವಂತೆ ಶಾಶ್ವತವಾದ ಕೆಲಸವೇನು ಮಾಡಬೇಕೆಂಬುದನ್ನು ಆಲೋಚಿಸಿ ನಮ್ಮ ದೇಶದಲ್ಲಿ ಕ್ಷಾಮವನ್ನು ತೊಡೆದುಹಾಕಲು ಕ್ರಾಂತಿಕಾರಕವಾದ, ಪರಿಣಾಮಕಾರಿಯಾದ ಒಂದು ಕೆಲಸ ಮಾಡಬೇಕೆಂದು ಸೂಚಿಸಿ ಕಂದಾಯ ಮಂತ್ರಿಗಳು ತಂದಿರುವ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲ ನೀಡಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತೇನೆ.

† ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ವಾಮಿ ಸಭಾಪತಿಯವರೆ, ಈ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಮೊದಲು ಮೈಸೂರು ಹುಟ್ಟಿದಾಗಿನಿಂದಲೂ ಕೂಡ ರೆವಿನ್ಯೂ

ಮಂತ್ರಿಗಳಿಗೆ ಒಂದು ಸ್ಥಾನಮಾನವಿತ್ತು, ಮಾಜಿ ದಿವಾನರಿದ್ದಾಗ ಅವರನಂತರ ಎರಡನೆಯ ಮಂತ್ರಿಗಳ ಸ್ಥಾನವಿತ್ತು, ಈಗ ಅದಿಲ್ಲದಂತೆ ಮಾಡಿರುವುದು ಬಹಳ ಖಂಡನೀಯ. ಅವರ ಘನತೆಗೆ ತಕ್ಕಂತೆ ಸ್ಥಾನಮಾನ ಕೊಡಬೇಕು ಎಂದು ಅರಿಕೆ ಮಾಡುತ್ತೇನೆ.

ಸರ್‌ಟ್ಯಾಕ್ಸ್ ವಿಷಯದಲ್ಲಿ ನನಗೆ ಒಂದು ಅನುಮಾನವಿದೆ. ಆ ಬಾಬ್ತು ಹಣ ಎರಡು ಕೋಟಿ ರೂಪಾಯಿಗಳಷ್ಟು ಸರ್ಪ್ಲಸ್ ತೋರಿಸಲಾಗಿದೆ. ಆದರೆ ಅಷ್ಟನ್ನು 1964ರಲ್ಲಿ ವಸೂಲು ಮಾಡಲು ಅವಕಾಶವೇ ಇಲ್ಲ. ಹಾಗಿರುವಾಗ ಅದನ್ನು ತೋರಿಸಿರುವುದು ನ್ಯಾಯವಾಗಿದೆಯೇ ಅಥವಾ ಇಲ್ಲವೇ ಎಂದು ಯೋಚನೆ ಮಾಡಬೇಕು. ಈ ಇಲಾಖೆಯ ಆದಾಯ ವೆಚ್ಚ ಯಾವ ರೀತಿ ಸರಿದೂಗಿಸಬೇಕೆಂಬುದನ್ನು ಪರಿಶೀಲಿಸಬೇಕು.

ಈಗ ಕಂದಾಯ ವಸೂಲಿ ಕ್ರಮ ಸರಿಯಾಗಿಲ್ಲ. ಬಡವರನ್ನು ಹೆದರಿಸಿ ಕಂದಾಯ ವಸೂಲು ಮಾಡದಂತೆ ಆದೇಶ ರೆವಿನ್ಯೂ ಇಲಾಖೆ ಅಧಿಕಾರಿಗಳಿಗೆ ಕೊಡಬೇಕು. ಇದರ ವಿಚಾರ ರಿಸೋರ್ಸಸ್ ಅಂಡ್ ಎಕಾನಮಿ ಕಮಿಟಿ ಸಹ ಹೇಳಿದೆ. ಬಡವರಿಗೆ ತೊಂದರೆ ಮಾಡಿ ಸ್ಟ್ರಿಕ್ಟಾಗಿ ಕಂದಾಯ ವಸೂಲು ಮಾಡುತ್ತಿದ್ದಾರೆ. ಅದೇ ನೂರಾರು ರೂಪಾಯಿಗಳ ಕಂದಾಯ ಕೊಡದಿರುವವರನ್ನು ಕೇಳುವವರೇ ಇಲ್ಲ. ಇದು ಸರಿಯಲ್ಲ. ಬಡವರ ವಿಚಾರದಲ್ಲಿ ದಯೆತೋರಿ ಹೆಚ್ಚು ತೆರಬೇಕಾದವರಿಂದ ಬರಬೇಕಾಗಿರುವುದನ್ನು ವಸೂಲು ಮಾಡಲು ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳುವುದು ಅವಶ್ಯಕ. ಬಡವರಿಗೆ ಮರ್ಯಾದೆ ಕಳೆದು ವಸೂಲು ಮಾಡುವುದನ್ನು ಖಂಡಿತ ತಪ್ಪಿಸಬೇಕು. ಐದು ರೂಪಾಯಿ ಕೊಡುವವರಿಗೆ ಮಾಫಿ ಮಾಡಬೇಕು. 111 ಕೋಟಿ ರೂಪಾಯಿಗಳ ಬಡ್ಜೆಟ್ಟಿನಲ್ಲಿ ರೆವೆನ್ಯೂ ಆದಾಯ ಕೇವಲ 3 ಅಥವಾ 4 ಕೋಟಿ ಇರಬಹುದು. ಐದು ರೂಪಾಯಿ ಕೊಡುವುದರಿಂದ ಒಂದು ಕೋಟಿ ರೂಪಾಯಿ ಬರಬಹುದು. ಅವರಿಗೆ ರಿಯಾಯಿತಿ ತೋರಿಸಿದರೆ ಲಕ್ಷಾಂತರ ರೈತರಿಗೆ ಉಪಕಾರವಾಗುತ್ತದೆ, ಅವರು ಕೃತಜ್ಞರಾಗಿರುತ್ತಾರೆ. ಅಧಿಕಾರಿಗಳು ಕೋಯರ್ಸಿವ್ ಸ್ಟೆಪ್ಸ್ ತೆಗೆದುಕೊಂಡು ವಸೂಲುಮಾಡುವುದನ್ನು ತಪ್ಪಿಸಿದರೆ ರೈತರಿಗೂ ಮತ್ತು ಸರ್ಕಾರಕ್ಕೂ ಮಧುರಬಾಂಧವ್ಯ ಉಂಟಾಗಲು ಅವಕಾಶವಾಗುತ್ತದೆ. ಇದನ್ನು ಗಮನಿಸಿ 5 ರೂಪಾಯಿಗಳವರೆಗೆ ಕಂದಾಯ ಕೊಡುವವರಿಗೆ ಮಾಫಿ ಮಾಡಬೇಕು.

ರೆವೆನ್ಯೂ ಆದಾಯವನ್ನು ಹೆಚ್ಚು ಮಾಡಲು ಬೇಕಾದಷ್ಟು ಅವಕಾಶವಿದೆ. ಸರ್ಕಾರಕ್ಕೆ ಬರಬೇಕಾದ ಲಕ್ಷಾಂತರ ರೂಪಾಯಿಗಳ ಲೀಕೇಜ್ ಇದೆ. ಇದನ್ನು ರಿಸೋರ್ಸಸ್ ಅಂಡ್ ಎಕಾನಮಿ ಕಮಿಟಿಯ ವರದಿಯಲ್ಲಿ ತಿಳಿಸಿದ್ದಾರೆ. ಲೀಕೇಜ್ ಆಗುತ್ತಿರುವುದನ್ನು ತಡೆಗಟ್ಟಿದರೆ ಸುಲಭವಾಗಿ ಹೆಚ್ಚು ಆದಾಯ ಪಡೆಯಬಹುದು. ಅರಣ್ಯ, ಅಮೃತಮಹಲ್ ಕಾವಲು ಮತ್ತು ಕೆರೆ ಅಂಗಳಗಳಲ್ಲಿ ಲಕ್ಷಗಟ್ಟಲೆ ಎಕರೆ ಪ್ರದೇಶವನ್ನು ಸಾಗುವಳಿ ಮಾಡಿ ಕೋಟಿಗಟ್ಟಲೆ ಬೆಲೆ ಬಾಳುವ ಬೆಳೆ ತೆಗೆಯುತ್ತಿದ್ದಾರೆ. ಆದರೆ ಹಾಗೆ ಮಾಡುವವರು ಕಂದಾಯ ಕೊಡುತ್ತಿಲ್ಲ. ಇದನ್ನು ಕಂಡುಹಿಡಿಯಲು ವಿಶೇಷ ಸಿಬ್ಬಂದಿ ನೇಮಿಸಿ, ಎಷ್ಟು ವರ್ಷಗಳಿಂದ ಹೀಗೆ ಮಾಡುತ್ತಿದ್ದಾರೆ, ಸರ್ಕಾರಕ್ಕೇನು ಪ್ರತಿಫಲ ಬರುತ್ತಿದೆ ಎಂಬುದನ್ನು ಪರಿಶೀಲಿಸಿ ಬರಬೇಕಾದ್ದನ್ನು ವಸೂಲು ಮಾಡಬೇಕು. ಹೀಗೆಯೇ ಅಮರಾಯಿಯಿಂದ ಸಾಕಷ್ಟು ಉತ್ಪತ್ತಿ ಬರುತ್ತಿಲ್ಲ. ಹಾಸನ-ಮಂಗಳೂರು ರಸ್ತೆಯಲ್ಲಿ ಒಂದು ಮರ ಹರಾಜು ಮಾಡಿದ್ದಕ್ಕೆ 250 ರೂಪಾಯಿ ಬಂತು. ಹುಣಸೇ ಮೊದಲಾದ ಮರಗಳ ಫಸಲನ್ನು ಹರಾಜು ಮಾಡಬೇಕು. ಅರಣ್ಯ ಇಲಾಖೆಯಲ್ಲಿ ಬೇಕಾದಷ್ಟು ಲೀಕೇಜ್ ಇದೆ. ಇದನ್ನು ತಪ್ಪಿಸಿ, ಹುಲ್ಲುಬನ್ನಿ, ಅಮರಾಯಿ, ಮರ ಹರಾಜು ಮುಂತಾದುವುಗಳ ಕಡೆ ಸಾಕಾದಷ್ಟು ಗಮನ ಕೊಟ್ಟು ಹೆಚ್ಚು ಆದಾಯ ಬರುವಂತೆ ಮಾಡಬೇಕು.

ಇದೇ ರೀತಿಯಲ್ಲಿ ಸೆಟಲ್‌ಮೆಂಟು ವಿಷಯಗಳಲ್ಲಿ ಏನಾಗಿದೆ ಎಂದರೆ ತಾವು ಸರ್ವೇ ಡಿಪಾರ್ಟ್‌ಮೆಂಟಿನಲ್ಲಿ ಯಾವುದೋ ಒಂದು ಓಬಿರಾಯನ ಕಾಲದ ಮಾರ್ಗವನ್ನು ಇಲ್ಲಿ ಅನುಸರಿಸಿಕೊಂಡು ಬರುತ್ತಿದ್ದೀರಿ. ಇದರಿಂದ ಭೂಮಿಯ ಪರಿಷ್ಕರಣೆ ಯೋಗ್ಯವಾಗಿ ಆಗುತ್ತದೆಯೋ ಎನ್ನುವುದರಲ್ಲಿ ಜನರಿಗೆ ಅನುಮಾನ ಬರುತ್ತಿದೆ. ಯಾವ ಆಧಾರದ ಮೇಲೆ ಹಾಕುತ್ತಿದ್ದೀರಿ. ಆದಾಯ ಎಲ್ಲಿ ಜಾಸ್ತಿಯಾಗಿ ಬರುತ್ತೋ ಅಲ್ಲಿಗೆ ತೆರಿಗೆ ಹಾಕಿ ಬೇಡ ಎನ್ನುವುದಿಲ್ಲ. ಎಲ್ಲಿ ಭೂಮಿ ಬಂಜರು ಬಿದ್ದಿದೆಯೋ ಅಲ್ಲಿಗೆ ಕಂದಾಯ ಹಾಕುವುದು ಸರಿಯಲ್ಲ. ಸೆಟಲ್‌ಮೆಂಟು ಮಾಡುವುದಕ್ಕೆ ಹೋದಾಗ ಎಲ್ಲಿ ಹೆಚ್ಚಿನ ಆದಾಯ ಬರುತ್ತೋ ಅಲ್ಲಿಗೆ ಕಂದಾಯ ಹಾಕಬಹುದು ಎಂದು ನಾನು ಸಲಹೆ ಮಾಡುತ್ತೇನೆ.

ಸರ್‌ಟ್ಯಾಕ್ಸು ವಿಷಯದಲ್ಲಿ ಹೇಳುವುದಾದರೆ ಈಗ ಎಲ್ಲ ಕಡೆಗಳಲ್ಲಿಯೂ ಇದನ್ನು ವಸೂಲು ಮಾಡುತ್ತಾರೆ, ಆದರೆ ನಮ್ಮಲ್ಲಿ ಅನೇಕ ಕ್ಷಾಮ ಪ್ರದೇಶಗಳಿರುವುದರಿಂದ ಅಂತಹ ಕಡೆಗಳಲ್ಲಿ ಇದನ್ನು ವಸೂಲು ಮಾಡುವುದು ಸರಿಯಲ್ಲ, ಇಂತಹ ಭಾಗಗಳಲ್ಲಿ ಸರ್‌ಟ್ಯಾಕ್ಸಿನಿಂದ ರೆಮಿಷನ್ನೂ ಮಾಡಬೇಕು.

(ಶ್ರೀ ಎಚ್. ಆರ್. ಕೇಶವಮೂರ್ತಿ)

ಇನ್ನು ಸರ್ವೆ ಸೆಟಲ್‌ಮೆಂಟು ಇಲಾಖೆಯುಲ್ಲಿರುವ ಅಧಿಕಾರಿಗಳಿಂದ ರೈತರಿಗೇನೂ ಪ್ರಯೋಜನ ದೊರಕುತ್ತಿಲ್ಲ. ಅಲ್ಲದೆ ಈ ಇಲಾಖೆಯ ಆಫೀಸಿಗೆ ಹೋದರೆ ಅಲ್ಲಿ ಯಾವ ಸತ್ಯಾಂಶವೂ ಹೊರ ಬೀಳುವುದಿಲ್ಲ. ಇದೇನೂ ಒಂದು ತರಹದ 'ವ್ಯಾಸ ಗುಟ್ಟು' ಎಂದು ಹೇಳುವಂತೆ ಇಲ್ಲಿ ನಡೆಯುತ್ತಿದೆ. ಅಲ್ಲಿರುವ ಸರ್ವೆ ಆಫೀಸರುಗಳು ಹಳ್ಳಿಗಳಿಗೆ ಬಂದು ರೈತರುಗಳಿಂದ ತಮಗೆ ಬೇಕಾಗುವ ಅನುಕೂಲಗಳನ್ನೆಲ್ಲಾ ಪಡೆದುಕೊಂಡು ಅಂತಹ ರೈತರುಗಳಿಗೆ ಸರಿಯಾದ ಅನುಕೂಲಗಳನ್ನು ಮಾಡಿಕೊಡುತ್ತಿಲ್ಲ. ಸರ್ವೆ ಸೆಟಲ್‌ಮೆಂಟಿನ ಕೆಲಸಗಳು ಈಗ ಮಾಡುತ್ತಿರುವ ರೀತಿ ನೋಡಿದರೆ ಜನಗಳಿಗೆ ತುಂಬಾ ಅನ್ಯಾಯಗಳಾಗುತ್ತಿವೆ, ಒಬ್ಬ ರೈತ ಒತ್ತುವರಿ ಮಾಡುತ್ತಾನೆಂದು ಅವನಿಗೆ ಕಂದಾಯ ಎಷ್ಟು ಬೇಕಾದರೂ ಹಾಕಬಹುದು ಎಂದು ಮಾಡಿದರೆ ಅನ್ಯಾಯಕ್ಕೆ ಅವಕಾಶ ಮಾಡಿ ಕೊಟ್ಟಂತಾಗುತ್ತದೆ. ಇಲ್ಲಿರುವ ಅಧಿಕಾರಿಗಳು ಮಾಡುವ ಕೆಲಸವನ್ನು ಚೆಕ್ ಮಾಡಲು ಇತರ ಇಲಾಖೆಯ ಅಧಿಕಾರಿಗಳನ್ನು ಹಾಕಿ ಒಂದು ತರಹದ ಕೌಂಟರು ಚೆಕ್ ಇರುವಂತೆ ಮಾಡುವ ವಿಧಾನಗಳನ್ನು ಅನುಸರಿಸುವುದು ಸೂಕ್ತ ಎಂದು ನನಗೆ ತೋರುತ್ತದೆ. ಈ ಇಲಾಖೆಯಿಂದ ಜನರಿಗಾಗುತ್ತಿರುವ ತೊಂದರೆಗಳನ್ನು ನಿವಾರಿಸಲು ತಕ್ಕ ಕ್ರಮವನ್ನು ಸರಕಾರ ಕೈಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ರಿಕಾರ್ಡ್ಸ್ ಆಫ್ ರೈಟ್ಸ್ ವಿಭಾಗದಲ್ಲಿ ತಾಲ್ಲೂಕುಗಳಲ್ಲಿ ತಹಶೀಲ್ದಾರರ ಕೈಕೆಳಗೆ ಸರ್ವೇಯರುಗಳಿದ್ದಾರೆ. ಇದೊಂದು ಮೆಸ್ಸು ಇದ್ದಂತಿದೆ. ಇವರುಗಳು ಮಾಡುತ್ತಿರುವ ಎಂಟ್ರಿಗಳು ಬರೀ ತಪ್ಪು ಎಂಟ್ರಿಗಳು, ಕಾನೂನಿಗೂ ಇದಕ್ಕೂ ಸಂಬಂಧವಿರುವುದಿಲ್ಲ. ಇದಕ್ಕೆ ಸರಿಯಾದ ಇಂಡೆಕ್ಸು ಕೂಡ ಇಲ್ಲ. ಇಲ್ಲಿರುವ ಬೇರೆ ಬೇರೆ ರಿಜಿಸ್ಟರುಗಳಲ್ಲಿರುವ ಎಂಟ್ರಿಗಳು ಕೂಡ ಒಂದ ಕ್ಕೊಂದು ಕರಾಬೊರೇಟು ಆಗುವುದಿಲ್ಲ, ಆದುದರಿಂದ ಈಗಲಾದರೂ ಸರಕಾರದವರು ರೈತರಿಗೆ ಅನುಕೂಲವಾಗುವ ಹಾಗೆ ತಕ್ಕ ಮಾರ್ಗಗಳನ್ನು ಕಂಡುಹಿಡಿಯಲು ಆಲೋಚನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದರಿಂದ ಈಗ ಜನಗಳಿಗೆ ತೊಂದರೆಯಾಗುತ್ತಿದೆ ಇದನ್ನು ಸರಿಪಡಿಸಬೇಕು.

ಸಾಲಗಳನ್ನು ಹಂಚುವ ವಿಚಾರದಲ್ಲಿ ಹೇಳಬೇಕಾಗಿದೆ. ಸರಕಾರ ಈಗ ಲ್ಯಾಂಡ್ ಇಂಪ್ರೂವ್ ಮೆಂಟ್ ಲೋನ್, ತಕಾವಿ ಸಾಲಗಳೆಂದು ಕೊಡುತ್ತಿದ್ದಾರೆ. ಹೀಗೆ ರೆವಿನ್ಯೂ ಇಲಾಖೆಯಿಂದ ಕೊಡುವ ಸಾಲಗಳು ಕೆಲವು ಖದೀಮರ ಪಾಲಾಗುತ್ತಿವೆ. ಇವರುಗಳು ಹತ್ತು ಸಾವಿರ, ನಾಲ್ಕು ಸಾವಿರ ಮತ್ತು ಎರಡು ಸಾವಿರ ಎಂದು ಕೊಡುತ್ತಿರುವುದು ನ್ಯಾಯವಾದ ರೈತರಿಗೆ ಸಿಗುತ್ತಿಲ್ಲ. ಟಿಲ್ಲರ್ ಆಫ್ ದಿ ಸಾಯಿಲ್ ಎಂದೆನ್ನಿಸಿಕೊಳ್ಳತಕ್ಕ ರೈತರಿಗೆ ಸಾಲ ದೊರಕುತ್ತಿಲ್ಲ. ಅಲ್ಲದೆ ಸಾಮಾನ್ಯವಾದ ರೈತನಿಗೆ ನೂರು ಅಥವಾ ಐನೂರು ರೂಪಾಯಿಗಳವರೆಗೆ ಸಾಲ ಕೇಳಿದರೆ ಅಂತಹವರಿಗೆ ನೇರವಾಗಿ ಕೊಟ್ಟರೆ ಅವರಿಗೆ ಬಹಳ ಅನುಕೂಲವಾಗುತ್ತದೆ. ಅಲ್ಲದೆ ಕೆಲವು ವೇಳೆ ಬಡ ರೈತರಿಗೆ ಆಧಾರವಾಗಿ ಕೊಡಲು ಸರಿಯಾದ ಜಮೀನು ಇರುವುದಿಲ್ಲ. ಅಂತಹ ರೈತರು ವಾರವೋ ಗುತ್ತಿಗೆಯನ್ನೋ ಮಾಡುತ್ತಿರುತ್ತಾರೆ. ಅಂತಹವರಲ್ಲಿ ಆಸ್ತಿ ಏನೂ ಇರುವುದಿಲ್ಲ. ಅಂತಹವರಿಗೆ ಆಧಾರವಿಲ್ಲದೇ ಇದ್ದರೂ ನಮ್ಮ ರಾಜ್ಯದ ರೈತ ನಂಬಿಕೆ ಇರುವವರು ಎಂದು ತಿಳಿದು ಸರಕಾರ ಸಾಲ ಕೊಡಬಹುದು. ಅವನ ಕ್ರೆಡಿಟ್ ವರ್ದಿನೆಸ್ ನೋಡಿ ಸಾಲ ಕೊಡಬಹುದು. ಇದರಿಂದ ತೊಂದರೆ ಏನೂ ಆಗುವುದಿಲ್ಲ.

ಇನ್ನು ಎಸ್.ಡಿ.ಓ. ಆಫೀಸುಗಳೆಂದು ಈಗ ಇರುವುದು ಬರೀ ಪೋಸ್ಟು ಆಫೀಸುಗಳಂತಿರುವುದ ರಿಂದ ಇದು ಅನಾವಶ್ಯಕ ಎಂದು ನನಗೆ ತೋರುತ್ತದೆ, ಈಗ ತಾಲ್ಲೂಕು ತಹಶೀಲ್ದಾರರಿದ್ದಾರೆ. ಅಲ್ಲಿಂದ ಡೈರೆಕ್ಟಾಗಿ ಡೆಪ್ಯುಟಿ ಕಮಿಷನರು ಇರುತ್ತಾರೆ. ಇವರ ಮಧ್ಯೆ ಎಸ್.ಡಿ.ಓ.ಗಳೆಂದು ಇರುವ ಆಫೀಸುಗಳನ್ನು ಅಬಾಲಿಷ್ ಮಾಡುವುದೊಳ್ಳೆಯದು. ಅದರಲ್ಲೂ ಕೆಲವು ಕಡೆ ಇರುವ ಸಬ್-ಆಫೀಸರುಗಳಿಗೆ ಕನ್ನಡವೇ ಬರುವುದಿಲ್ಲ. ಆದುದರಿಂದ ರೈತರ ಸಂಪರ್ಕ ಎಲ್ಲಿ ಅಧಿಕಾರಿಗಳಿಗೆ ಡಿ ಜನ್ನು ಹೆಚ್ಚಾಗಿರುತ್ತದೆ ಅಂತಹ ಭಾಗಗಳಲ್ಲಿ ಕನ್ನಡ ತಿಳಿದಂತಹ ಡೆಪ್ಯುಟಿ ಕಮಿಷನರುಗಳನ್ನು, ಸಬ್-ಡಿವಿಜನ್ನು ಅಧಿಕಾರಿಗಳನ್ನು ನೇಮಕ ಮಾಡುವುದು ಉತ್ತಮ. ಇಂತಹ ಕನ್ನಡ ಬಾರದಿರುವ ಅಧಿಕಾರಿಗಳಿಗೆ ರೈತರ ಸಂಪರ್ಕವಿರುವಂತೆ ಮಾಡಬೇಡಿ.

ಇನ್ನು ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಎಂದು ಮಾಡಿರುವ ಕಾನೂನನ್ನು ಬದಲಾಯಿಸಬೇಕು. ತಾವೇ ಹೇ ಈಗ ನಾಲ್ಕು ಲಕ್ಷ ಎಕರೆಯಷ್ಟು ಭೂಮಿಯನ್ನು ಹಂಚಬೇಕೆಂದು ಇದ್ದೀರಿ, ಇಷ್ಟನ್ನೂ ಹಂಚಿಬಿಟ್ಟರೆ ಮುಂದೆ ಯಾರಿಗೂ ಜಮೀನು ಹಂಚಲಿಕ್ಕೆ ಸಿಗುವುದೇ ಇಲ್ಲ. ಆದುದರಿಂದ ಜಮೀನು ಈಗ ಯಾರಿಗಿಲ್ಲವೋ ಅಂತಹವರಿಗೆ ಜಮೀನು ಸಿಗುವಂತೆ ಹಂಚುವ ವ್ಯವಸ್ಥೆ ಮಾಡಬೇಕು. ಈಗೇನೋ ಪೊಲಿಟಿಕಲ್ ಸಫರರ್‌ಗಾಗಿ ಎಂದು ಜಮೀನು ಕೊಡುತ್ತಿದ್ದಾರೆ. ಆದರೆ ಇದರಲ್ಲಿ ಹಿಂದೆ ಯಾರಿಗೆ ಜಮೀನನ್ನು ಕೊಟ್ಟಿಲ್ಲವೋ ಅಂತಹವರನ್ನು ನೋಡಿಕೊಂಡು ಹಂಚಿದರೆ ಅನುಕೂಲವಾಗುತ್ತದೆ,

ಈಗೇನಾಗುತ್ತಿದೆ ಎಂದರೆ ಹಿಂದೆ ಪಡೆದಿರುವ ಜಮೀನನ್ನು ಬೇರೆ ರೂಪಾಂತರ ಮಾಡಿ ಮಾರಿಬಿಟ್ಟು ಪುನಃ ಜಮೀನನ್ನು ಪಡೆಯಲು ಪ್ರಯತ್ನ ಮಾಡುತ್ತಾರೆ. ಇವನ್ನೆಲ್ಲಾ ತಪ್ಪಿಸುವುದಕ್ಕೆ ಅನುಕೂಲ ವಾಗುವಂತೆ ಈ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ಗಳನ್ನು ಬದಲಾವಣೆ ಮಾಡಬೇಕೆಂದು ನನ್ನ ಸಲಹೆ.

ಇನ್ನು ಹೆರಿಡಟರಿ ಅಬಾಲಿಷನ್ ಆಫ್ ವಿಲೇಜ್ ಆಫೀಸರುಗಳ ಬಗ್ಗೆ ಇಲ್ಲಿ ಕೆಲವರು ಹೇಳಿದ್ದಾರೆ. ಇದರ ಬಗ್ಗೆ ನಾನು ಹೇಳುವುದು ಯಾರೋ ಕೆಲವರು ಇದರ ಕೇಸನ್ನು ಸುಪ್ರೀಂ ಕೋರ್ಟುವರೆಗೆ ತೆಗೆದುಕೊಂಡು ಹೋಗಿದ್ದಾರೆ. ಆದರೆ ಎಲ್ಲರೂ ಇದಕ್ಕೆ ಸೇರಿಲ್ಲ. ನಮ್ಮಲ್ಲಿ ಇಂತಹ ಅಧಿಕಾರಿಗಳ ಸಂಖ್ಯೆ ಇರುವುದು ಸುಮಾರು 7,000 ದಷ್ಟು ಎಂದಿದೆ. ಇದರಲ್ಲಿ ಸುಮಾರು 106 ಜನರು ಮಾತ್ರ ಈ ಸುಪ್ರೀಂ ಕೋರ್ಟು ಕೇಸಿನಲ್ಲಿ ಭಾಗಿಯಾಗಿದ್ದಾರೆ. ಆದುದರಿಂದ ಇನ್ನುಳಿದಿರುವ ಹೆರಿಡಟರಿ ಆಫೀಸರುಗಳಿಗಾಗಿ ಏನು ನಿಯಮದ ಪ್ರಕಾರ ಪರಿಹಾರ ಕೊಡಬೇಕೆಂದು ಇದೆಯೋ ಅದನ್ನು ತಾವು ಕೊಟ್ಟು ಕಳಿಸಿದರೆ ಅನುಕೂಲ. ಮಾರ್ಕೆಟ್ ರೇಟ್ ಜಮೀನಿಗೇನು ಬರುತ್ತದೋ ಅದರ ಮೌಲ್ಯವನ್ನಾದರೂ ನೋಡಿಕೊಂಡು ಕೊಡಬಹುದು. ಅಪೀಲು ಮಾಡಿರುವವರನ್ನು ಬಿಟ್ಟು ಇವರುಗಳಿಗೆ ಏನು ಕೊಡಬಹುದೋ ಅದನ್ನು ಕೊಟ್ಟು ಅವರ ಮನೆಗಳಿಗೆ ಕಳುಹಿಸಿದರೆ ಮಾನ್ಯ ರೆವಿನ್ಯೂ ಮಂತ್ರಿಗಳಿಗೂ ಕೂಡ ಒಳ್ಳೆಯ ಕೀರ್ತಿ ಬರುತ್ತದೆ. ಅಲ್ಲದೆ ಈ ಇಲಾಖೆಯಲ್ಲಿ ಮುಂದೆ ಕೆಲಸ ಮಾಡಲು ವಿಲೇಜು ಅಕೌಂಟೆಂಟುಗಳನ್ನು ಮಾಡಿ ಅವರ ಜೊತೆಗೆ ಹಿಂದೆ ಕೆಲಸ ಮಾಡುತ್ತಿದ್ದ ಅರ್ಧ ಜನರನ್ನೂ ಇದರಲ್ಲಿಯೇ ಉಳಿಸಿಕೊಂಡಿದ್ದೀರಿ. ಈ ಕೆಲಸಗಳನ್ನೂ ಈಗ ನೇಮಿಸಿರುವ ವಿಲೇಜು ಅಕೌಂಟೆಂಟುಗಳಿಗೆ ವಹಿಸಿದರೆ ಅವರು ಇನ್ನೂ ನೆಮ್ಮದಿಯಿಂದ ಕೆಲಸ ಮಾಡಲು ಅನುಕೂಲವಾಗುತ್ತದೆ ಅಲ್ಲದೆ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳ ಹೆಸರು ಶಾಶ್ವತವಾಗಿ ಅನೂಚಾನವಾಗಿ ಮತ್ತು ಕೀರ್ತಿ ನಿಲ್ಲುವಂತೆ ಅನುಕೂಲವಾಗುತ್ತದೆ. ಇದರ ಕಡೆಗೆ ಸರಕಾರ ಗಮನ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಕಂದಾಯ ಮಂತ್ರಿಗಳು ಮಂಡಿಸಿರತಕ್ಕ ಸಾಮಾನ್ಯವಾದ ಬೇಡಿಕೆಗಳನ್ನು ಒಪ್ಪಿಕೊಂಡು ರೆವಿನ್ಯೂ ಇಲಾಖೆಯ ಬಗ್ಗೆ ಒಂದೆರಡು ವಿಷಯಗಳನ್ನು ನನ್ನ ತಾಲ್ಲೂಕಿನ ಬಗ್ಗೆ ಇಲ್ಲಿ ಸೂಚಿಸಬಯಸುತ್ತೇನೆ.

ಸರ್ ಚಾರ್ಜು ಆಕ್ಟ್ 62-63 ಹಾಗೂ 63-64 ಈ ಎರಡು ಸಾಲುಗಳಿಗೂ ಅನ್ವಯಿಸ ಬೇಕು ಎಂದು ಅಲ್ಲಿರುವ ಡಿವಿಜನಲ್ ಕಮಿಷನರು ಆಯಾ ಡೆಪ್ಯುಟೀ ಕಮಿಷನರುಗಳಿಗೆ ಹಾಗೂ ತಹ ಶೀಲ್ದಾರರುಗಳಿಗೆ ಸರ್‌ಕ್ಯುಲರನ್ನು ಕಳುಹಿಸಿದ್ದಾರೆಂದು ನನಗೆ ತಿಳಿದುಬಂದಿದೆ. ಆದರೆ ನಮ್ಮ ಭಾಗ ದಲ್ಲಿ ಈ ಸರ್‌ಕ್ಯುಲರಿನಂತೆ 63-64ನೇ ಸಾಲಿನ ಕಂದಾಯದ ಜೊತೆಯಲ್ಲಿಯೇ ಸರ್ ಚಾರ್ಜು ವಸೂಲು ಮಾಡಲಕ್ಕೆ ಬರುತ್ತದೆ ಎಂದು ಹೇಳುತ್ತಾರೆ. ನಾನೂ ಅಲ್ಲಿರುವ ರೆವೆನ್ಯೂ ಅಧಿಕಾರಿಗಳ ಗಮನಕ್ಕೆ ಇದನ್ನು ತಂದು, ಈ ರೀತಿ ಸರ್ ಚಾರ್ಜು ವಸೂಲು ಮಾಡಬಾರದು ಎಂದು ಹೇಳಿದರೂ ಈಗಿರುವ ಆರ್ಡರಿನಂತೆ ವಸೂಲಿ ಮಾಡಲಕ್ಕೆ ಬರುತ್ತದೆ ಎಂದು ಹೇಳುತ್ತಾರೆ. ನನಗೆ ತಿಳಿದಹಾಗೆ 1962ನೇ ಇಸವಿಯಲ್ಲಿ ಎಂದರೆ ಮಾರ್ಚಿ, ಏಪ್ರಿಲ್ ತಿಂಗಳಿನಲ್ಲಿ ನಮ್ಮ ಭಾಗದಲ್ಲಿ ಸರ್ ಚಾರ್ಜು ವಸೂಲಿ ಮಾಡುತ್ತಿದ್ದರು. 1963ರಲ್ಲಿ ವಸೂಲು ಮಾಡಿದ್ದರು. ಇದರಮೇಲೆ ಡಿವಿಜನಲ್ ಕಮಿಷನರ್ ಅವರು ಈಗ ಕಳುಸಿರುವ ಸರ್‌ಕ್ಯುಲರ್ ಪ್ರಕಾರ ವಸೂಲು ಮಾಡಿದರೆ ಮೂರು ವರ್ಷದ ವಸೂಲಿ ಮಾಡಿದಂತಾಗುತ್ತದೆ. ಇದನ್ನು ಸರಕಾರ ಪೂರ್ಣವಾಗಿ ಪರಿಶೀಲನೆ ಮಾಡಬೇಕು. ಒಮ್ಮೆ ಇಲ್ಲಿ ಪ್ರಶ್ನೆ ಕೇಳಿದಾಗ ಮಾನ್ಯ ಕಂದಾಯ ಮಂತ್ರಿಗಳು ಧಾರವಾಡ ಜಿಲ್ಲೆಯಲ್ಲಿ ನಾಲ್ಕಾರು ತಾಲ್ಲೂಕುಗಳಲ್ಲಿ 1962ನೇ ಫೆಬ್ರುವರಿ ಮತ್ತು ಮಾರ್ಚ್‌ನಿಂದ ಆಗಸ್ಟ್‌ವರೆಗೆ ವಸೂಲಾಗಿ ಬಿಟ್ಟಿದೆ ಎಂದು ಉತ್ತರ ಕೊಟ್ಟಿದ್ದರು. ನನಗೆ ನೆನಪಿರುವಮಟ್ಟಿಗೆ ಆಗಲೇ ಎರಡು ವರ್ಷಗಳಷ್ಟು ವಸೂ ಲಾಗಿರುವುದರಿಂದ ಈಗ ಪುನಃ ಮೂರನೇ ವರ್ಷದಲ್ಲಿ ವಸೂಲು ಮಾಡುವುದು ಎಂದರೆ ಸರಿಯಾ ಗಿರುವುದಿಲ್ಲ. ಇದನ್ನು ಸರಕಾರ ಸ್ವಲ್ಪ ಪರಿಶೀಲನೆ ಮಾಡಿ ಸರಿಯಾದ ಒಂದು ಸರ್‌ಕ್ಯುಲರನ್ನು ಡಿವಿಜನಲ್ ಕಮಿಷನವರಿಗೂ ಮತ್ತು ಡೆಪ್ಯುಟಿ ಕಮಿಷನರವರಿಗೂ ಕಳುಹಿಸಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ನಮ್ಮ ಮುಂಬಯಿ ಭಾಗದಲ್ಲಿ ಉತ್ತರ ಕರ್ಣಾಟಕದ ಭಾಗದಲ್ಲಿ ದಿ ಬಾಂಬೆ ಪ್ರಿವೆನ್‌ಷನ್ ಅಂಡ್ ಫ್ರಾಗ್‌ಮೆಂಟೇಷನ್ ಆಕ್ಟ್ 1947 ಎಂದಾಗಿತ್ತು. ಇದನ್ನು ನಮ್ಮ ಜಿಲ್ಲೆಯಲ್ಲಿ ಸಾಮಾನ್ಯ ವಾಗಿ ನಾಲ್ಕಾರು ತಾಲ್ಲೂಕುಗಳೊಳಗೆ ಲಾಗು ಮಾಡಲಾಗಿದೆ. ಮುಂದೆಯೂ ಇದನ್ನು ಎಲ್ಲ ಭಾಗದಲ್ಲಿಯೂ ಲಾಗು ಮಾಡಬೇಕೆಂದು ಇತ್ತು. ಇಂತಹ ಬಿಲ್ಲನ್ನು ಮೊಟ್ಟಮೊದಲಿಗೆ ನಮ್ಮ ಬೊಂಬಾಯಿ ಸರಕಾರದವರು ತಂದಿದ್ದರು ಮತ್ತು ಆ ಆಕ್ಟ್ ಮಾಡಿದಾಗಿನಿಂದ ನನಗೆ ಅದರ ತಿಳುವಳಿಕೆ ಕೂಡ ಇದೆ. ಅವರ ಬಿಲ್ಲಿನಂತೆ ಉಳಿದ ಪ್ರಾಂತಗಳವರೂ ಕೂಡ ಅನುಸರಿಸಬೇಕು ಎಂದು ಏನೋ ಹೆಚ್ಚು ಕಡಿಮೆ ಮಾಡಿಕೊಂಡು ಆ ಪ್ರಕಾರ ಮಾಡಿಕೊಂಡರು ಎಂದು ತೋರುತ್ತೆ. ಈ

(ಶ್ರೀ ಎಂ. ಆರ್. ಪಾಟೀಲ್)

ಫ್ರಾಗ್‌ಮೆಂಟೇಷನ್ನು ಆಕ್ಟ್ ಪ್ರಕಾರ ಏನು ಸ್ಕೀಮುಗಳು ಇವೆ ಮತ್ತು ಈ ಕಾಯಿದೆಯ ಕೆಲವು ಕಲಂಗಳಲ್ಲಿ ಸ್ವಲ್ಪ ವ್ಯತ್ಯಾಸಗಳೂ ಇರುವುದರಿಂದ ನಮ್ಮ ಮುಂಬಯಿ ಪ್ರಾಂತದ ರೈತರಿಗೆ ಇದನ್ನು ಫಾಲೋ ಮಾಡಬೇಕೋ ಇಲ್ಲ ಬೇರೆ ಯಾವ ರೀತಿ ಹೋಗಬೇಕೋ ಎನ್ನುವಷ್ಟು ಅವರುಗಳಿಗೆ ತ್ರಾಸಾಗುತ್ತಿದೆ.

ಆ ಕಾಯಿದೆಯನ್ನು ಮಾಡುವಾಗ ಜನರಿಗೆ ಇದರಿಂದ ಎಷ್ಟು ಕಷ್ಟವಾಗುತ್ತದೆ ಎಂಬುದು ಅವರಿಗೆ ಖಂಡಿತ ತಿಳಿದಿರಲಿಕ್ಕಿಲ್ಲ. ನಾನು ಇದರಲ್ಲಿರತಕ್ಕ ಕೆಲವು ಕಲಂಗಳನ್ನು ಓದಿ ಹೇಳಿದರೆ ಆಗ ಈ ಸಭೆಗೆ ಈ ಕಾನೂನಿನ ಸ್ವರೂಪ ಗೊತ್ತಾಗುತ್ತದೆ.

> Section 15: With the object of consolidating holdings in any village, mahal or taluka or any part thereof for the purpose of better cultivation of lands therein, the State Government may declare by a notification in the Official Gazette and by publication in the prescribed manner in the village or villages concerned its intention to make a scheme for the consolidation of holdings in such village or villages or part thereof as may be specified......"

ಅಂದರೆ ಒಮ್ಮೆ ಈ ಸ್ಕೀಂ ಪ್ರತಿ ತಿಂಗಳಲ್ಲೂ ಇಂತಿಷ್ಟು ಹಳ್ಳಿಗಳಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಜಾರಿಗೆ ತರತಕ್ಕದೆಂದು ಅಧಿಕಾರಿಗಳು ವಿಧಾಯಕಮಾಡಿದ ಮೇಲೆ, ಅಂದರೆ ಆ ರೀತಿ ಒಂದು ನೋಟಿಫಿಕೇಷನ್ ಹೊರಡಿಸಿದಮೇಲೆ, ಇದರ ಪರಿಣಾಮ ಏನಾಗುತ್ತದೆಂಬುದನ್ನು ಮುಂದೆ ಹೇಳಿದ್ದಾರೆ :

> Section 27 : When a Consoldation Officer proceeds to prepare a scheme under section 15, during the continuance of the consolidation proceedings,—
>
> (i) under section 154 or 155 of the Bombay Land Revenue Code, 1879 ;
>
> (ii) for execution of any award made under the Bombay Agricultural Societies Act, 1925 ;
>
> (iii) for execution of any award made under the Bombay Agricultural Debtors Relief Act, 1947 ; or
>
> (iv) for execution of any decree passed by a Civil Court, in respect of any land in respect of which a notification has been issued under section 15 shall be commenced and all such proceedings if commenced shall be stayed ;
>
> (b) no person shall transfer any land in respect of which a notification under sec. 15 has been issued."

ಅಂದರೆ ಇದರ ಅರ್ಥ—ಒಮ್ಮೆ ಈ ಸ್ಕೀಮನ್ನು ಜಾರಿಗೆ ತಂದಕಡೆ ಜಮೀನನ್ನು ಪರಭಾರೆ ಮಾಡುವ ಹಾಗಿಲ್ಲ. ಈ ಜಮೀನುಗಳ ಮೇಲೆ ಯಾವ ಕೋರ್ಟು ಕಛೇರಿಗಳಲ್ಲೂ ಇದರ ವ್ಯವಹಾರ ವನ್ನು ತರತಕದ್ದಲ್ಲ ಎಂದು ಹೇಳಿದ್ದಾರೆ. ಇದರಿಂದ ಮುಂದೆ ಯಾವೊಬ್ಬ ಜಮೀನ್ದಾರನಿಗೂ ತನ್ನ ಜಮೀನನ್ನು ಮಾರಾಟಮಾಡುವ ಅಧಿಕಾರವಿರುವುದಿಲ್ಲ. ಇಂಥ ಒಂದು ಸ್ಕೀಮನ್ನು ಆ ಅಧಿಕಾರಿಗಳು ಮಾಡಬಹುದು ಎಂತ ಹೇಳಲಾಗಿದೆ. ಇಂಥಾ ಒಂದು ಕಾನೂನನ್ನು ನಮಗೆ 1952 ರಿಂದ ಲಾಗುಮಾಡಿದ್ದಾರೆ. ಆ ಸ್ಕೀಮು ಅಲ್ಲಿ ಇನ್ನುವರೆಗೂ ಇನ್ನೂ ಮುಗಿದಿಲ್ಲ. ಅಲ್ಲಿ ಸುಮಾರು 10-15 ವರ್ಷಗಳಿಂದ ಜನರಿಗೆ ತುಂಬಾ ಕಿರುಕುಳವುಂಟಾಗಿದೆ. ಇದರಿಂದ ರೈತ ತನ್ನ ಜಮೀನನ್ನು ಗೇಣಿಗೆ ಸಹಾ ಕೊಡಲು ಬರುವಂತಿಲ್ಲ. ಜಮೀನನ್ನು ಅವರು ಒತ್ತೆಹಾಕಲು ಮಾರಾಟಮಾಡಲು ಬರುವುದಿಲ್ಲ. ಇದರಿಂದ ರೈತರಿಗೆ ತುಂಬಾ ಅಡಚಣೆಯುಂಟಾಗಿದೆ. ಎಲ್ಲಿ ಈ ಸ್ಕೀಮನ್ನು ಜಾರಿಗೆ

ತಂದಿಲ್ಲವೋ ಅಲ್ಲಿ ಅನೇಕರು ಜಮೀನನ್ನು ಮಾರಾಟವಮಾಡಿ ಆ ಜಮೀನುಗಳನ್ನೆಲ್ಲಾ ಹಣವಂತರಾಗಿದ್ದ ದೇಶಾಯಿ, ದೇಶಪಾಂಡೆ ಇವರುಗಳು ಕೊಂಡುಕೊಂಡಿದ್ದಾರೆ. ಈ ರೀತಿ ಸಹಸ್ರಾರು ಕಡೆ ಜಮೀನುಗಳು ವರ್ಗಾವರ್ಗಿಯಾಗಿರುತ್ತವೆ. ಈ ಕ್ರಯಗಳೂ ಕೂಡ ರದ್ದಾಗುತ್ತವೆಂದು ಒಂದು ಕಡೆ ಹೇಳಿದ್ದಾರೆ. ಈ ಸ್ಕೀಮುಗಳು ಜಾರಿಗೆ ಬಾರದಿರುವ ಗ್ರಾಮಗಳಿನ್ನೂ ಕೆಲವಿವೆ. ಇದರಲ್ಲಿ ಇನ್ನೊಂದು ವಿಚಾರವೇನಾಗಿದೆಯೆಂದರೆ : ಜಿಲ್ಲಾಧಿಕಾರಿಗಳ ಪರವಾನಿಗೆ ಪಡೆದು ಕೆಲವು ಜಮೀನನ್ನು ಮಾರಾಟವಮಾಡಬಹುದೆಂದು ಹೇಳಲಾಗಿದೆ. ಇದರಿಂದ ಯಾರು ಜಮೀನನ್ನು ಮಾರಾಟ ಮಾಡಬೇಕೆಂದು ಇಷ್ಟಪಡುತ್ತಾನೋ ಅಂಥವನು ರಾಜ್ಯ ಸರ್ಕಾರದ ಪರವಾನಿಗೆಯನ್ನು ಪಡೆಯಬೇಕೆಂದು ಹೇಳಿದಹಾಗಾಯಿತು. ಒಬ್ಬ ಮನುಷ್ಯ ತನ್ನ ಜಮೀನನ್ನು ಗೇಣಿಕೊಡಬೇಕಾದರೆ ಅವನು ಡಿ. ಸಿ. ಕಡೆಗೆ ಹೋಗಬೇಕು, ಅಲ್ಲಿ ಅರ್ಜಿಯನ್ನು ಕೊಡಬೇಕು. ಅವರಿಂದ ಪರವಾನಿಗೆ ಪಡೆಯುವುದೆಂದರೆ ಅದೇನು ಸಾಮಾನ್ಯವಾಯಿತೇ ? ಈ ಸ್ಕೀಂ ನಮ್ಮ ಕಡೆ ಯಾವಯಾವ ಹಳ್ಳಿಗಳಿಗೆ ಬಂದಿದೆಯೋ ಅಲ್ಲೆಲ್ಲಾ ಜನರು ಇದನ್ನು ಒಂದು ಶಾಪ ಎಂದು ಕರೆಯುತ್ತಾರೆ. ಇಂಥ ಕಷ್ಟಕರವಾದ ಈ ಎರಡು ಕಲಂ ಯಾವ ಕಾಯಿದೆಯಲ್ಲೂ ಇರುವುದಿಲ್ಲ. ಹೀಗೆ ಒಂದೊಂದು ವೇಳೆ ಈ ಭೂಮಿಯನ್ನು ವಿಭಜನೆ ಮಾಡಬಾರದೆಂದು ವಿಧಾಯಕ ಮಾಡಿದ ನಂತರ ಅದನ್ನು ಮತ್ತು ವಿಭಜನೆಯಾಗುವುದಕ್ಕೆ ಅವಕಾಶ ಕೊಡಬಾರದು. ಆದರೆ ಕೆಲವು ಸಂದರ್ಭಗಳಲ್ಲಿ ಡಿ. ಸಿ. ಅವರು ಅವುಗಳ ವಿಭಜನೆಗೆ ಅವಕಾಶವನ್ನು ಕೊಟ್ಟಿದ್ದಾರೆ. ಆದರೆ ಎಲ್ಲರೂ ಹೀಗೆ ಅವರಿಂದ ಪರವಾನಿಗೆ ಪಡೆಯಲು ಇದು ಅಷ್ಟು ಹಗುರವಾದ ಬದುಕಲ್ಲ. ಇದನ್ನೆಲ್ಲಾ ನಾವು ಕಲ್ಪನೆ ಮಾಡಿಕೊಂಡು ಈ ವಿಚಾರದಲ್ಲಿ ನಾವು ಸರ್ಕಾರಕ್ಕೆ ಒಂದು ಅರ್ಜಿಯನ್ನು ಕೊಟ್ಟು ಬಹಳ ದಿನಗಳಾಯಿತು. ಮಹರಾಷ್ಟ್ರ ಸರ್ಕಾರದವರು ಈ ತೊಂದರೆಗಳನ್ನೆಲ್ಲಾ ಕಂಡೇ ಅವರು ಈಗ ಇದನ್ನು ತಿದ್ದುಪಡಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅಂಥ ತೊಂದರೆಗಳಿರುವುದನ್ನು ನಾವು ತಿಳಿದೇ ನಮ್ಮ ಸರ್ಕಾರದ ಕಡೆಗೆ ನಾವೂ ಒಂದು ಅರ್ಜಿಯನ್ನು ಕೊಟ್ಟು ಈ ದೂರನ್ನು ಸರ್ಕಾರದವರ ನದರಿಗೆ ತಂದು ತಾವು ಇದನ್ನು ದೂರಮಾಡಬೇಕೆಂದು ನಾವು ಸವಿನಯ ಪ್ರಾರ್ಥನೆಯನ್ನು ಮಾಡಿಕೊಂಡಿದ್ದೇವೆ. ಇದರಲ್ಲಿ ಅನೇಕ ದೋಷಗಳಿವೆ. ನಮ್ಮಲ್ಲಿ ಜನರು ತಿರುಗಾ ಮುರುಗಾ ಅರಗಣ್ಣ ಎಂದು ಒಂದು ಗಾದೆಯನ್ನು ಹೇಳುತ್ತಾರೆ. ಅದರಂತೆ ಇದೆ ಈ ಕಾನೂನು. ನಮ್ಮ ಸರ್ಕಾರಕ್ಕೆ ಜನರ ಕಲ್ಯಾಣ ಮಾಡಬೇಕೆಂಬ ಇರಾದೆ ಇದ್ದರೆ, ಆಸೆಯಿದ್ದರೆ ಈಗ ಈ ಸರ್ವೆ ಇಲಾಖೆಯಲ್ಲಿರತಕ್ಕ ಶ್ರಮದಲ್ಲಿ 100ಕ್ಕೆ 20ರಷ್ಟು ಕಷ್ಟವನ್ನು ಉಳಿಸಬಹುದು. ಕೆಲವು ಕಡೆ ಸರ್ಕಾರ ಇಷ್ಟು ಕಷ್ಟಪಟ್ಟು ಇಷ್ಟು ಖರ್ಚು ಮಾಡಿ ಮಾಡಿದ್ದನ್ನು ಮತ್ತೆ ಒಡೆಯುವುದಕ್ಕೆ ಪರವಾನಿಗೆ ಕೊಡುತ್ತಿದ್ದಾರೆ. ಇದು ಸರಿಯಲ್ಲ. ಸರ್ಕಾರದವರು ಇದಕ್ಕೆ ಖಂಡಿತ ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಹೀಗೆ ಮಾಡಿದರೆ ನೂತಿದ್ದೆಲ್ಲ ತಿರುಗಿ ಅಂಜೀ ಆಯಿತೆಂದು ಹೇಳಿದಹಾಗಾಯಿತು. ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ ಅಧ್ಯಕ್ಷರೇ, ಈ ರೆವಿನ್ಯೂ ಇಲಾಖೆಯನ್ನು ಹಿಂದೆ ರಾಜಾ ಇಲಾಖೆಯೆಂದು ಹೇಳುತ್ತಿದ್ದರು. ಈಗ ರಾಜನೂ ಹೋದ ರಾಜ್ಯವೂ ಹೋಯಿತು ಎಲ್ಲಾ ಇಲಾಖೆಗಳೂ ಕಳಾಹೀನವಾಗಿ ನಿಂತಿದೆ. ಈ ಇಲಾಖೆಯಲ್ಲಿ ತಾಲ್ಲೂಕ್ ಕಛೇರಿಯಿಂದ ಹಿಡಿದು ಸೆಕ್ರೆಟೇರಿಯಟ್‌ವರೆಗೂ ನಾವು ಮೆಟ್ಟಲು ಮೆಟ್ಟಲುಗಳನ್ನು ಹತ್ತಿಬರಬೇಕು. ತಾಲ್ಲೂಕ್ ಮಟ್ಟದಲ್ಲಿ ನಡೆಯತಕ್ಕ ಅನಾಚಾರಗಳನ್ನು ಹೇಳತೀರದಾಗಿದೆ. ಅಲ್ಲಿ ಕೊಟ್ಟ ಅರ್ಜಿಗಳ ವಿಲೇವಾರಿ ಬಗ್ಗೆ ಯಾರನ್ನು ಕೇಳಿದರೂ ಅವರು ಅರ್ಜಿ ಅಲ್ಲಿಗೆ ಹೋಗಿದೆ, ಇಲ್ಲಿಗೆ ಹೋಗಿದೆ, ಕೆಳಕ್ಕೆ ಹೋಗಿದೆ, ಮೇಲಕ್ಕೆ ಹೋಗಿದೆ ಎಂದು ಇದನ್ನು ಹೇಳುತ್ತಿದ್ದಾರೇ ಹೊರತು ಅದರ ಖಚಿತವಾದ ತೀರ್ಮಾನವೇನಾಯಿತೆಂಬ ದನ್ನು ಯಾರು ತಿಳಿಸುವಂತಿಲ್ಲ. ಶ್ರೀ ಕಡಿದಾಳ್ ಮಂಜಪ್ಪನವರ ಕಾಲದಲ್ಲಿ ಅವರೊಂದು ಪದ್ಧತಿಯನ್ನು ಅನುಸರಿಸುತ್ತಿದ್ದರು.

9-30 A.M.

ಈಗ 28 ಮಂತ್ರಿಗಳಿದ್ದಾರೆ. ತಿಂಗಳಲ್ಲಿ ಎಲ್ಲಾ ಭಾಗಗಳಲ್ಲಿಯೂ ಸುತ್ತುತ್ತಾ ಇರುತ್ತಾರೆ. ಇವರಿಗೆ ರೈತರಿಗೆ ಅನುಕೂಲ ಮಾಡತಕ್ಕ ಕೆಲಸದಲ್ಲಿ ಅಷ್ಟಾಗಿ ನಿಗಾ ಇಲ್ಲ. ಇವರು ಆ ರೀತಿ ಟೂರ್ ಮಾಡಿಕೊಂಡು ಬರುತ್ತಿರುವಾಗ ದಾರಿಯೊಳಗೆ ಸಿಕ್ಕತಕ್ಕಂಥ ರೆವಿನ್ಯೂ ಇಲಾಖೆ ಆಫೀಸುಗಳಿಗೆ ಹೋಗಿ ತನಿಖೆ ಮಾಡಿ ಯಾವ್ಯಾವ ಗುಮಾಸ್ತನ ಹತ್ತಿರ ಎಷ್ಟೆಷ್ಟು ದಿವಸಗಳಿಂದ ಕಾಗದ ಪತ್ರಗಳು ಉಳಿದಿವೆ ಎಂಬುದಾಗಿ ವಿಚಾರಿಸುವುದಕ್ಕಿಂತ ಬೇರೆ ಒಂದು ದೊಡ್ಡ ಕೆಲಸವೇನಿದೆ ; ಇವರೆಲ್ಲರೂ ಟೂರ್ ಮಾಡಿರತಕ್ಕ ಯಾವ್ಯಾವ ಮಂತ್ರಿಗಳು ಹೊರಗಡೆ ಎಷ್ಟೆಷ್ಟು ಸುತ್ತಿದರು ಎಂಬುದಾಗಿ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಕೇಳಿದ್ದಕ್ಕೆ ನನಗೆ ಒಂದು ಪಟ್ಟಿ ಕೊಟ್ಟರು. ಅದರಲ್ಲಿ ರೆವಿನ್ಯೂ ಮಂತ್ರಿಗಳ ಟೂರ್ ಕಮ್ಮಿ ಇತ್ತು. ನಾನು ಈಗ ಅದಕ್ಕೋಸ್ಕರವೇ ಇವರಿಗೆ ಬೊಜ್ಜು ಬಂದಿದೆ ಎಂದೆಂದುಕೊಂಡೆ. ಸ್ವಲ್ಪ ಅಲ್ಲಿ ಇಲ್ಲಿ ಓಡಾಡಿ ರೈತರ ಕಷ್ಟಸುಖವೇನು ಎಂಬುದನ್ನು ನೋಡುವ ಪರಪಾಟು ಇಲ್ಲದೆ ನಾನು ರೆವಿನ್ಯೂ ಮಂತ್ರಿಯಾಗಿದ್ದೇನೆಂದು ವಿಧಾನಸೌಧದಲ್ಲಿಯೇ ಕೂತುಕೊಂಡರೆ ರೈತನಿಗೆ ನಿಜವಾಗಿ ಒಳ್ಳೆಯದಾಗುವುದಿಲ್ಲ, ಅನುಕೂಲವಾಗುವುದಿಲ್ಲ. ಇನ್ನುಮುಂದಾದರೂ ಕೂಡ ಆಯಾ ತಾಲ್ಲೂಕು ಆಫೀಸುಗಳಿಗೆ ಭೇಟಿ ಕೊಡಬೇಕು. ಹಿಂದಿನ ಇಂತಹ ಸತ್ಸಂಪ್ರದಾಯಗಳನ್ನು ನಡೆಸಬೇಕು. ನೋಟೀಸ್ ಕೊಡದೆಯೇ ಸಡನ್ನಾಗಿ ಹೋಗಿ ಕಚೇರಿಗಳನ್ನು ತನಿಖೆ ಮಾಡುವ ಏರ್ಪಾಡು ಮಾಡಬೇಕು. ಆಗ ಎಷ್ಟು ರಿಕಾರ್ಡ್‌ಗಳು ಮಾಯವಾಗುತ್ತವೆ ಎಂಬುದು ಗೊತ್ತಾಗುತ್ತದೆ. ಅಲ್ಲದೆ ಈ ಕಾಗದಗಳು ಗುಮಾಸ್ತರ ಕೈಗೆ ಹೋದತಕ್ಷಣ ಮತ್ತೆ ಅವರ ಕೈಗೆ 10-20 ರೂಪಾಯಿಗಳು ಸಿಗುತ್ತದೆ ಎನ್ನುವ ಒಂದು ಲೆಖ್ಖಾಚಾರದಲ್ಲಿ ಅವರು ಇರುತ್ತಾರೆಯೇ ಹೊರ್ತು ಬಂದಂಥ ಅರ್ಜಿಗಳು ವಿಲೇ ಆಗುವುದು ಇಲ್ಲವೇ ಇಲ್ಲ. ನಮ್ಮವರಿಗೆ ನಾವೇ ಮಾಡುತ್ತಿದ್ದೇವೆಂಬ ಮನೋಭಾವವೂ ಕೂಡ ಅವರಿಗೆ ಬರುವುದಿಲ್ಲ, ಈಗ ಇರತಕ್ಕವರಿಗೆ ಅಲ್ಲಿ ಎಳ್ಳಷ್ಟೂ ಕೆಲಸವಿಲ್ಲ. $10\frac{1}{2}$ ಘಂಟೆಯಿಂದ $5\frac{1}{2}$ ಘಂಟೆಯವರಿಗೆ ಆಫೀಸು ಇದ್ದರೆ, ಆ ವೇಳೆಯಲ್ಲಿ ಅರ್ಜಿಗಳನ್ನು ತಂದಂಥ ಪಾರ್ಟಿಗಳ ಜೊತೆಯಲ್ಲಿ ಹೋಟಲುಗಳಲ್ಲಿ ಕೂತು ಘಂಟೆಗಳಷ್ಟು ಕಾಲ ಕಳೆಯುತ್ತಾರೆ. ದೇಶದಲ್ಲಿ ನಾನಾ ಯೋಜನೆಗಳಿಗೆ ಯಥೇಚ್ಛವಾಗಿ ದುಡ್ಡು ಬೇಕು. ಕೆಲಸವಿಲ್ಲದಿದ್ದರೂ ಅನೇಕರನ್ನು ನೇಮಕ ಮಾಡಿಕೊಂಡು ಅನಾವಶ್ಯಕವಾಗಿ ದುಡ್ಡು ಖರ್ಚು ಮಾಡುತ್ತಿರುವುದನ್ನು ಬಹಳಮಟ್ಟಿಗೆ ನಿಲ್ಲಿಸಬೇಕು. ನನ್ನ ಮಾನ್ಯ ಸ್ನೇಹಿತರಾದಂಥ ಶ್ರೀಮಾನ್ ಕೇಶವಮೂರ್ತಿಗಳು ಹೇಳಿದಂತೆ ಕೆಲವು ಅಧಿಕಾರಿಗಳನ್ನು ಕೂಡಲೇ ತೆಗೆಯಬೇಕು. ಸಬ್‌ಡಿವಿಷನ್ ಆಫೀಸರ್ಸ್ ಮತ್ತು ಡಿವಿಜನಲ್ ಕಮಿಷನರ್ಸ್ ಹುದ್ದೆಗಳನ್ನು ತೆಗೆದುಹಾಕಬೇಕು. ಇವರಿಂದ ನಮಗೇನು ತೊಂದರೆಯಾಗಿದೆಯೆಂದರೆ ವರ್ಷಾನುಗಟ್ಟಲೆ ಕೇಸುಗಳು ಇತ್ಯರ್ಥವಾಗುವುದಿಲ್ಲ. ಆದ್ದರಿಂದ ತಹಸೀಲ್ದಾರ್ ಮತ್ತು ಜಿಲ್ಲಾಧಿಕಾರಿ ಅವರಮೇಲೆ ಸರ್ಕಾರ ಹೀಗೆ ಅವರ ಒಂದು ಜವಾಬ್ದಾರಿಯನ್ನು ವಹಿಸಿದ್ದೇ ಆದರೆ ನಮಗೆ ಸ್ವಲ್ಪಮಟ್ಟಿನ ಅನುಕೂಲವಾಗುತ್ತದೆಂದು ನಾನು ಹೇಳಲು ಇಷ್ಟಪಡುತ್ತೇನೆ. ಬೇಕಾದರೆ ರೆವಿನ್ಯೂ ಟ್ರಿಬ್ಯೂನಲ್ ಎನಿದೆ ಅಲ್ಲಿ ಡಿವಿಜನಲ್ ಕಮಿಷನರನ್ನು ಹಾಕಿ. ಎರಡು ಪಂಚಾಯಿತಿಗಳು ಇರುವು ಕಡೆ ಮೂರು ಮಾಡಿ. ಜನಗಳ ಬೇಡಿಕೆಗಳು ಜಾಗ್ರತೆಯಾಗಿ ತೀರ್ಮಾನವಾಗಿ ಅವರಿಗೆ ಅನುಕೂಲವಾಗುವ ಪರಿಸ್ಥಿತಿ ಉಂಟಾಗುತ್ತದೆಂದು ಹೇಳುತ್ತೇನೆ. ನಮ್ಮ ಜಿಲ್ಲೆಗೆ ಇಬ್ಬರು ಡೆಪ್ಯುಟಿ ಕಮಿಷನರ್ಸ್ ಇದ್ದಾರೆ. ಇಬ್ಬರನ್ನು ಕಟ್ಟಿಕೊಂಡರೆ ಏನಾಗುತ್ತದೆಂಬುದನ್ನು ವಿಚಾರಮಾಡಿ ನೋಡಬೇಕು. ಆದರೆ ಅನೇಕರಿಗೆ ಆ ಅನುಭವವಿಲ್ಲ, ಅದಕ್ಕೆ ಕಾನೂನು ಬೆದರಿಕೆ ಬೇರೆ ಬಂದಿದೆ. ಅದು ಅನುಭವಸ್ತರಿಗೆ ಮಾತ್ರ ಗೊತ್ತುಂಟು ಆದ್ದರಿಂದ ನಮ್ಮ ಜಿಲ್ಲೆಗೆ ಒಬ್ಬ ಡೆಪ್ಯುಟಿ ಕಮಿಷನರೇ ಸಾಕಾಗುತ್ತದೆ. ಅಂತಹ ಮಾಡಬಾರದ ಕೆಲಸಗಳೇನೂ ಇಲ್ಲ. ಡೆವಲಪ್‌ಮೆಂಟ್ ಇಲಾಖೆಯೆಂದು ಬೇರೆ ಮಾಡಿದ್ದಾರೆ. ಅದಕ್ಕೆ ತಕ್ಕಂತೆ ಸಿಬ್ಬಂದಿಯನ್ನೂ ಸಹ ನೇಮಕ ಮಾಡಿರುವುದರಿಂದ ಒಬ್ಬ ಜಿಲ್ಲಾಧಿಕಾರಿಯೇ ಎಲ್ಲಾ ಕೆಲಸಗಳನ್ನು ನೋಡಿಕೊಳ್ಳಬಹುದು, ಒಂದು ಪಕ್ಷ ಅವರಿಗೆ ಬಹಳ ಕೆಲಸಗಳೇನಾದರೂ ಇದ್ದರೆ ಒಬ್ಬ ಸಬ್‌ಡಿವಿಜನ್ ಆಫೀಸರ್ ದರ್ಜೆಯ ಒಬ್ಬ ಅಧಿಕಾರಿಯನ್ನು ಅವರ ಸಹಾಯಕ್ಕೆ ಕೊಡುವುದು ಸೂಕ್ತ.

ಇನ್ನು ಭೂಸುಧಾರಣೆಯ ವಿಷಯವಾಗಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ಹೇಳಿದೆ. ನಮ್ಮ ನಾಯಕರು ಹುಚ್ಚರು, ಇವರಿಗೆ ಈ ವಿಷಯದಲ್ಲಿ ಸರಿಯಾಗಿ ಯೋಚನೆ ಮಾಡತಕ್ಕ ಶಕ್ತಿ ಇಲ್ಲವೇ ? ಎಂದು ಕೇಳುತ್ತೇನೆ. ಕೇವಲ ಹುಚ್ಚರ ಹಾಗೆ ಈ ಬಗ್ಗೆ ವರ್ತನೆ ಮಾಡುತ್ತಿದ್ದಾರೆ. ಕೇವಲ ಒಂದೆರಡು ಎಕರೆ ಭೂಮಿ ಕೊಟ್ಟರೆ ರೈತನಾದವನು ತನ್ನ ಆರ್ಥಿಕಮಟ್ಟವನ್ನು ಹೇಗೆ ಹೆಚ್ಚಿಸಿಕೊಳ್ಳುತ್ತಾನೆ, ಅವನು ಹೇಗೆ ಜೀವನ ಮಾಡಬೇಕು, ಯಾವರೀತಿ ತನ್ನ ಸಂಸಾರವನ್ನು ಮಾಡಬೇಕು, ಎಂಬುದನ್ನೆಲ್ಲಾ ಯೋಚನೆ ಮಾಡುವುದನ್ನು ಇವರು ಬಿಟ್ಟು ಹಿಡುವಳಿ ಪರಿಮಿತಿ ಇಷ್ಟೇ ಇರಬೇಕು, ಎಂಬುದಾಗಿ ಕಟ್ಟುನಿಟ್ಟಾದ ಕಾನೂನನ್ನು ಮಾಡುತ್ತಾ ಹೋದರೆ ದೇಶದಲ್ಲಿ ನಿಜವಾಗಿ ಅಶಾಂತಿಯನ್ನು ಮತ್ತೆ ಮತ್ತೆ ಹೆಚ್ಚಿಸುವುದಕ್ಕೆ ಕಾರಣವಾಗುತ್ತದೆ. ಮಹಾತ್ಮ ಗಾಂಧೀಜಿಯವರ ಸೋಷಿಯಲೀಸಂ ಅರ್ಥವೇ ಬೇರೆ. ಇವರು ಅದನ್ನು ವ್ಯಾಖ್ಯಾನ ಮಾಡುವುದೇ ಬೇರೆ. ಗಾಂಧೀಜಿಯವರ ಹೆಸರನ್ನು ಹೇಳುವವರು ಸರಿಯಾದ ಮಾರ್ಗದಲ್ಲಿ ನಡೆಯಬೇಕು. ಸರ್ವರೂ ಸುಖವಾಗಿರಬೇಕು ಎಂಬುದೇ ಅವರ ತತ್ವ. ಭೂಮಿ ಇದ್ದವರದು ಕಿತ್ತು ಕೊಂಡು ಇಲ್ಲದವರಿಗೆ ಕೊಡುತ್ತೇವೆಂದು ಆಶೆ ತೋರಿಸತಕ್ಕ ಇವರ ಒಂದು ಹಿಂಸಾಪ್ರವೃತ್ತಿಯನ್ನು ನಾನು ಒಪ್ಪತಕ್ಕವನಲ್ಲ, ಈ ರೀತಿಯಾಗಿ ಅನುಸರಿಸುವುದು ಈ ಸರ್ಕಾರಕ್ಕೆ ಎಳ್ಳಷ್ಟೂ ಸಾಧುವಾದುದಲ್ಲ. ಗಾಂಧೀಜಿಯವರ ಹೆಸರನ್ನು ಹೇಳಬೇಕಾದರೆ ಅವರು ಯಾವ ಒಂದು ಅರ್ಥದಲ್ಲಿ ಈ ಸಮತಾವಾದವೆಂದು ಹೇಳಿದರೋ ಅದನ್ನು

ಇವರು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಈಗ ನಾಲ್ಕು ಲಕ್ಷ ಎಕರೆ ಜಮೀನನ್ನು ಈಗಾಗಲೇ ಕೊಟ್ಟಿದ್ದೇವೆ ನಾಲ್ಕು ಲಕ್ಷ ಎಕರೆ ಜಮೀನು ಇದೆಯೆಂದು ಹೇಳುತ್ತಾರೆ. ಇದನ್ನು ರೆವಿನ್ಯೂ ಮಂತ್ರಿಗಳು ಗೋ ಸಂಪತ್ತನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ನೋಡಿದರೆ ಬೆಣಚುಕಲ್ಲು ಇರತಕ್ಕ ಜಮೀನು ದರಖಾಸ್ತು ಕೊಟ್ಟಿದ್ದಾರೆ. ಹೀಗಾದರೆ ಅಲ್ಲಿನ ಕುರಿ, ದನಗಳು ಎಲ್ಲಿ ಮೇಯಬೇಕು. ಅವುಗಳಿಗೆ ಮೇವು ಎಲ್ಲಿ ಎಂದು ನಾನು ಕೇಳಬೇಕಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ನಿಮ್ಮ ಜೊತೆಯಲ್ಲಿಯೇ ಎರಡು ಸಾರಿ ಬಂದಿದ್ದೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ನಮ್ಮ ಪಶುಸಂಪತ್ತು ಅಭಿವೃದ್ಧಿ ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಹಾಕಿಕೊಳ್ಳದೆ ವಿವೇಚನೆ ಇಲ್ಲದೆ ಯಾರೋ ಯಾವುದೋ ಕೇಳುತ್ತಾರೆಂದು ಸಿಕ್ಕಾಪಟ್ಟೆ ಜಮೀನುಗಳನ್ನು ವಿಲೇ ಮಾಡುವುದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತದೆ. ಇದನ್ನು ಸಾಕುಮಾಡಿ ಇರತಕ್ಕ ಭೂಮಿಯನ್ನು ಗೋಮಾಳಕ್ಕೆ ಉಳಿಸಿಕೊಟ್ಟು ಗೋಸಂಪತ್ತು ವೃದ್ಧಿಯಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಯದಿಂದ ಕೇಳಿಕೊಳ್ಳುತ್ತೇನೆ.

ಇನ್ನು ಆಡಳಿತದಲ್ಲಿ ತಹಸೀಲ್ದಾರರಿಗೆ ಬಹಳಮಟ್ಟಿಗೆ ಕೆಲಸ ಜಾಸ್ತಿಯಾಗಿತ್ತು. ಈಗ ಡೆವಲಪ್‌ಮೆಂಟ್ ಆಫೀಸರುಗಳನ್ನು ಹಾಕಿದ ಮೇಲೆ ಕೆಲಸಗಳು ಸ್ವಲ್ಪಮಟ್ಟಿಗೆ ಕಮ್ಮಿಯಾಗಿವೆ. ಏರಿಯಾ ದೊಡ್ಡದಾಗಿದ್ದರೆ ತಕಾವಿ ಸಾಲವನ್ನು ಸಾವಿರ ಕೊಡಲಿಕ್ಕೆ ವ್ಯವಸ್ಥೆ ಮಾಡುವಾಗ ಬಡವರಿಗೆ 100 ರೂಪಾಯಿಗಳಾದರೂ ಅದು ಸಿಕ್ಕುವಂತಿರಬೇಕು. ಇದರಲ್ಲಿ ಒಂದು ಲಿಮಿಟ್ ಹಾಕಿ, 100ರಿಂದ 500 ರೂಪಾಯಿಗಳಿಗಿಂತ ಮೇಲೆ ತಕಾವಿ ಸಾಲಗಳು ಇರಕೂಡದು. ಒಂದು ಪಕ್ಷ ಯಾರಾದರೂ ದೊಡ್ಡದಾಗಿ ವ್ಯವಸಾಯ ಮಾಡಿಸುವವರು ವಿಶೇಷ ಸೌಲಭ್ಯವನ್ನು ಅಪೇಕ್ಷಿಸಿದರೆ ಅದಕ್ಕೆ ಬೇರೆ ಏರ್ಪಾಡು ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಅಭಾವ ಪರಿಸ್ಥಿತಿಗಾಗಿ ಸ್ವಲ್ಪ ಹಣವನ್ನು ಇಟ್ಟಿದ್ದಾರೆ. ಎಷ್ಟೋ ಸಾರಿ ನಾಗಮಂಗಲ ಮತ್ತು ಇದೇ ರೀತಿಯ ಅನೇಕ ತಾಲ್ಲೂಕುಗಳಲ್ಲಿ ನಾನಾ ಕಾರಣಗಳಿಗಾಗಿ ಬೆಳೆ ಕೈ ಹತ್ತಿಲ್ಲ. ಅದಕ್ಕಾಗಿ ಸರ್ಕಾರದವರನ್ನೂ ಸಹ ಕೇಳಿಕೊಂಡಿದ್ದೇನೆ. ಈ ಬಗ್ಗೆ ಅಲ್ಲಿನ ಅಧಿಕಾರಿಗಳಿಂದ ಸರ್ಕಾರಕ್ಕೆ ವರದಿ ಬಂದಿರಬೇಕು. ಕಣ್ಣು ಒರೆಸುವ ಕೆಲಸ ಮಾಡದೆ ಶಾಸ್ತ್ರೀಯವಾದ ಕೆಲಸಗಳನ್ನು ಮಾಡಬೇಕು. ಅದರಲ್ಲೂ ನಮಗೆ ಈ ಸಾರಿ ಕಂದಾಯ ಕೊಡುವುದಕ್ಕೆ ಸುತರಾಂ ಸಾಧ್ಯವಾಗುತ್ತಾ ಇಲ್ಲ. ದಯವಿಟ್ಟು ಈ ಸಾರಿ ಅದನ್ನು ಪೂರ್ತಿ ವಿನಾಯಿತಿ ಮಾಡಿಕೊಡಬೇಕು. ಇಲ್ಲದೇಹೋದರೆ ಕಂದಾಯ ವಸೂಲಿ ಕ್ರಮವನ್ನು ಕಡ್ಡಾಯವಾಗಿ ನಿಲ್ಲಿಸಿಕೊಟ್ಟು ಕಷ್ಟಕ್ಕೀಡಾಗಿರುವ ರೈತನ ನೆರವಿಗೆ ಸರ್ಕಾರ ಮುಂದೆ ಬರಬೇಕು.

ಇನ್ನು ಸರ್ವೇಯರ್ಸ್ ನಮ್ಮ ಜಿಲ್ಲೆಗೆ ಬಂದಿರತಕ್ಕವರ ಮೂರು ದಿನಗಳೂ ಕೂಡ ಒಂದು ಕಡೆ ಇರುವುದಿಲ್ಲ. ಅವಷ್ಟು ಬೇಗ ಎಲ್ಲಾ ಕಡೆಗಳಲ್ಲೂ ಹೋಗಿ ಈ ಸರ್ವೇ ಕೆಲಸವನ್ನು ಸರಿಯಾಗಿ ನಡೆಸತಕ್ಕ ಒಂದು ವ್ಯವಸ್ಥೆಯನ್ನು ಮಾಡಬೇಕು.

ಇನ್ನು ಪಶುಪಾಲನೆಯ ವಿಚಾರದಲ್ಲಿ ಬಹಳವಾಗಿ ಹೇಳಬೇಕಾಗಿದೆ. ಈ ಇಲಾಖೆಯಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಾ ಇಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರಿನ ವೆಟರಿನರಿ ಕಾಲೇಜಿನಲ್ಲಿ ಇಲಾಖೆ ಮುಖ್ಯಾಧಿಕಾರಿಗಳು ತರಬೇತು ಆಗಿರುವವರು ಇದ್ದರೂ ಕೂಡ ಸುತ್ತಮುತ್ತಲಿರುವ ಗ್ರಾಮಗಳಲ್ಲಿ ಬಹಳ ಒಳ್ಳೆಯ ರಾಸುಗಳು ಹೋಗುತ್ತಾ ಇವೆ. ಒಂದೊಂದು ರಾಸು ಹೋಗುವುದೆಂದರೆ ರೈತನ ಮನೆಯೇ ಹಾಳಾಗುತ್ತದೆ. ಇಷ್ಟೊಂದು ಸಿಬ್ಬಂದಿ ಇಟ್ಟುಕೊಂಡಿರುವ ಈ ಕಾಲೇಜು ಹತ್ತಿರವಿದ್ದರೂ ರೈತನಿಗೆ ಸರಿಯಾಗಿ ನೆರವಾಗುತ್ತಾ ಇಲ್ಲ. ಅಂದಮೇಲೆ ಬಹಳ ದೂರದಲ್ಲಿರುವ ರೈತರ ಗತಿಯೇನು ಎಂದು ನಾನು ಕೇಳಬೇಕಾಗಿದೆ. ಆದ್ದರಿಂದ ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಮಾಡದೇಹೋದರೆ ಮುಂದೆ ಬರುವವರು ಪಾಠ ಕಲಿಯುವುದಕ್ಕೆ ಆಗುವುದಿಲ್ಲವೆಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗೋಪಾಲರಾವ್ ಮುಡಬಿ (ಹುಮ್ನಾಬಾದ್).—ಸನ್ಮಾನ ಅಧ್ಯಕ್ಷರೇ, ನಮ್ಮ ಮಾನ್ಯ ರೆವಿನ್ಯೂ ಇಲಾಖೆಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡಿಗೆ ನನ್ನ ಬೆಂಬಲವನ್ನು ಕೊಡುತ್ತಾ ಈ ಖಾತೆಗೆ ಸಂಬಂಧಪಟ್ಟ ಹಾಗೆ ಗುಲ್ಬರ್ಗ ಡಿವಿಜನ್ನಿನ ಜನರ ಕಷ್ಟ ನಷ್ಟಗಳನ್ನು ನಾನು ವಿವರವಾಗಿ ಹೇಳಬೇಕೆಂದಿದ್ದೇನೆ. ಈಗ ಕಳೆದ ಒಂದು ತಿಂಗಳಿನಿಂದ ಗುಲ್ಬರ್ಗ ಡಿವಿಜನಲ್ ಕಮಿಷನರ ಆಫೀಸನ್ನು ತೆಗೆದುಹಾಕಬೇಕೆಂಬ ಪ್ರಯತ್ನಗಳು ನಡೆಯುತ್ತಿವೆಯೆಂದು ವರದಿಯಾಗುತ್ತಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಸುಳ್ಳು.

ಶ್ರೀ ಗೋಪಾಲರಾವ್ ಮುಡಬಿ.—ತುಂಗಭದ್ರ ಜಲಾಶಯದ ಕೆಳಗಡೆ ಇರುವ ಭೂಮಿಯು ಸರಿಯಾಗಿ ಸಾಗಾಗದೆ ಅಲ್ಲಿ ನೀರು ಪೋಲಾಗುತ್ತಿದೆ, ಆ ನೀರನ್ನು ಬಳಕೆಗೆ ತರಬೇಕು, ಜನಗಳು ಆ ನೀರನ್ನು ಉಪಯೋಗಿಸುವಂತೆ ಮಾಡಬೇಕೆಂಬ ದೃಷ್ಟಿಯಿಂದ ಸರ್ಕಾರದವರು ಆ ವಿಷಯದಲ್ಲಿ ವಿಶೇಷವಾದ ಆಸಕ್ತಿಯನ್ನು ವಹಿಸಿದ್ದಾರೆ. ಅದನ್ನು ಅಭಿವೃದ್ಧಿ ಮಾಡಬೇಕೆಂಬ ದೃಷ್ಟಿಯಿಂದ ಅಲ್ಲಿ 5-6 ವರ್ಷಗಳ ಕಾಲ ಕೆಲಸ ಮಾಡಲು ಗುಲ್ಬರ್ಗ ಡಿವಿಜನಲ್ ಕಮಿಷನರ ಆಫೀಸನ್ನು ತುಂಗಭದ್ರಾ ಡಿವಿಜನ್ನಿಗೆ ವರ್ಗಾಯಿಸಬೇಕೆಂದು ವರದಿ ಇದೆ. ಮತ್ತು ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳನ್ನು ಬೆಳಗಾಂ ಡಿವಿಜನ್ನಿಗೆ ಸೇರಿಸುತ್ತಾರೆಂಬ ವರದಿ ಇದೆ. ಗುಲ್ಬರ್ಗ ಜಿಲ್ಲೆಯವರು ಮತ್ತು ಬೀದರ್ ಜಿಲ್ಲೆಯವರು ಈಗ ಬೆಂಗಳೂರಿಗೆ ಬರಬೇಕಾದರೆ ಎಷ್ಟು ಕಷ್ಟವಾಗುತ್ತಿದೆಯೋ ಅದೇ ರೀತಿ ಅವರು ಬೆಳಗಾಮಿಗೆ ಹೋಗಬೇಕಾದರೂ ಅಷ್ಟೇ ಕಷ್ಟವಾಗುತ್ತದೆ. ಸುಮಾರು 500 ಮೈಲಿಯನ್ನು ಸುತ್ತಿಕೊಂಡು ಹೋಗಬೇಕಾಗುತ್ತದೆ. ಬೀದರ್‌ನಿಂದ ಬೆಳಗಾಮಿಗೆ ರೈಲ್ವೆಯ ಮುಖಾಂತರ ನೇರವಾಗಿ ಹೋಗಬೇಕಾದರೂ ಕಷ್ಟಪಡಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಯ ಜನಗಳು ತಮ್ಮ ಕೆಲಸ ಕಾರ್ಯಗಳಿಗೋಸ್ಕರ ಬೆಳಗಾಮಿಗೆ ಹೋಗಬೇಕಾದರೆ ಬಹಳ ಕಷ್ಟವಾಗುತ್ತದೆ. ಇದನ್ನು ನೋಡಿದರೆ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಯ ಜನಗಳ ಕಷ್ಟನಷ್ಟಗಳನ್ನು ಸರ್ಕಾರದವರು ಲಕ್ಷ್ಯದಲ್ಲಿ ಇಟ್ಟ ಹಾಗೆ ಕಾಣುವುದಿಲ್ಲ. ತುಂಗಭದ್ರಾ ಜಲಾಶಯದ ಕೆಳಗಡೆ ಇರತಕ್ಕ ಜಮೀನನ್ನು ಅಭಿವೃದ್ಧಿಗೊಳಿಸಬೇಕು, ಅದರಿಂದ ಲಾಭವನ್ನು ಪಡೆಯಬೇಕು ಎಂದರೆ ಒಂದು ಅಡೀಷನಲ್ ಡಿವಿಜನಲ್ ಕಮಿಷನರ ಹುದ್ದೆಯನ್ನು ಕ್ರಿಯೇಟ್ ಮಾಡಿ ತುಂಗಭದ್ರಾ ಜಲಾಶಯ ಮೇಲ್ವಿಚಾರಣೆ ಮತ್ತು ರಾಯಚೂರು ಡಿಸ್ಟ್ರಿಕ್ಟ್‌ಗೆ ಸಂಬಂಧಪಟ್ಟ ವಿಚಾರ ಇವುಗಳನ್ನು ಅವರು ಕಂಟ್ರೋಲ್ ಮಾಡುವ ಹಾಗೆ ವ್ಯವಸ್ಥೆ ಮಾಡಬೇಕು. ಬಳ್ಳಾರಿ ಜಿಲ್ಲೆಯ ಸಹಕಾರ ಇಲಾಖೆ, ಪಬ್ಲಿಕ್ ವರ್ಕ್ಸ್ ಇಲಾಖೆ ಮತ್ತು ವ್ಯವಸಾಯ ಇಲಾಖೆ ಇವುಗಳ ಮೇಲಿನ ಕಂಟ್ರೋಲನ್ನು ಗುಲ್ಬರ್ಗ ಡಿವಿಜನ್ನಿಗೆ ಸೇರಿಸಬೇಕು. ತುಂಗಭದ್ರಾ ಜಲಾಶಯದ ಕೆಳಗಡೆ ಇರತಕ್ಕ ಜಮೀನನ್ನು ಅಭಿವೃದ್ಧಿಗೊಳಿಸುವುದಕ್ಕೆ ಇನ್ನೊಂದು ಹೊಸ ಹುದ್ದೆಯನ್ನು ಕ್ರಿಯೇಟ್ ಮಾಡಿ ಆ ಕೆಲಸವನ್ನು ಅವರಿಗೆ ವಹಿಸಿ. ಆದರೆ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳನ್ನು ಬೆಳಗಾಂ ಜಿಲ್ಲೆಗೆ ಸೇರಿಸುವುದು ತುಂಬಾ ಅನ್ಯಾಯಮಾಡಿದಂತಾಗುತ್ತದೆ. ಆದ್ದರಿಂದ ಆ ಕಾರ್ಯವನ್ನು ಮಾಡಕೂಡದು ಎಂದು ನಾನು ಹೇಳುತ್ತೇನೆ.

ಆಮೇಲೆ ಇನ್ನೊಂದು ವಿಚಾರ. ಈಗ ಬೀದರ್ ಜಿಲ್ಲೆಯಲ್ಲಿ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜನ್ನು ವಸೂಲು ಮಾಡುತ್ತಿದ್ದಾರೆ. ಇದರ ಬಗ್ಗೆ ಒಂದು ಮಾತನ್ನು ನಾನು ಹೇಳಬಯಸುತ್ತೇನೆ. ಈಗ ಕಳೆದ ಎರಡು ವರ್ಷಗಳಿಂದಲೂ 5 ಎಕರೆಗಳಿಗಿಂತಲೂ ಕಡಿಮೆ ಹಿಡುವಳಿ ಇರತಕ್ಕ ಭೂಮಾಲೀಕರುಗಳಿಂದ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜನ್ನು ಸರ್ಕಾರದವರು ವಸೂಲು ಮಾಡುತ್ತಿದ್ದಾರೆ. ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜ್ ಆಕ್ಟ್ ಪ್ರಕಾರ ನಮ್ಮ ಹುಮ್ನಾಬಾದ್ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಡಿಕ್ಲರೇಷನ್ ತೆಗೆದುಕೊಂಡಿಲ್ಲ. ಆದ್ದರಿಂದ ಆ ಬಗ್ಗೆ ಅಲ್ಲಿ ತಹಶೀಲ್ದಾರರು ಒಂದು ಸರ್ಕ್ಯುಲರ್ ಕೂಡ ಹೊರಡಿಸಿದ್ದಾರೆ. ಆದರೆ ಡಿಕ್ಲರೇಷನ್ ತೆಗೆದುಕೊಳ್ಳುವುದಕ್ಕೆ ಬೇಕಾದಂತಹ ಫಾರಮ್‌ಗಳನ್ನು ಕೂಡ ಸರ್ಕಾರದವರು ಅಲ್ಲಿಗೆ ಕಳುಹಿಸಿ ಕೊಟ್ಟಿಲ್ಲ. ಈಗ ಎರಡು ವರ್ಷಗಳಿಂದಲೂ ಸಹ ಅಲ್ಲಿ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜನ್ನು ವಸೂಲು ಮಾಡುತ್ತಿದ್ದಾರೆ. ಇದರಿಂದ ಸಣ್ಣ ಸಣ್ಣ ಲ್ಯಾಂಡ್ ಹೋಲ್ಡರ್ಸ್ ಏನಿದ್ದಾರೆಯೋ ಅವರಿಗೆ ವಿಪರೀತ ಕಷ್ಟವಾಗಿದೆ. ಹೋದ ವರ್ಷ ನಮ್ಮ ಭಾಗದಲ್ಲಿ ವಿಶೇಷವಾಗಿ 60 ಪರ್ಸೆಂಟಿಗಿಂತ ಹೆಚ್ಚು ಕರೀಫ್ ಬೆಳೆ ಸರಿಯಾಗಿ ಆಗಲಿಲ್ಲ. ನಾಲ್ಕಾಣೆ 5 ಆಣೆಗಿಂತ ಕಡಿಮೆ ಬೆಳೆ ಆಗಿದೆ. ಆದರೆ ಆ ವರ್ಷದ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜನ್ನು ಮಾತ್ರ ವಸೂಲು ಮಾಡಿದರು. ಐದು ಎಕರೆಗಳಿಗಿಂತ ಕಡಿಮೆ ಭೂಮಿ ಇರತಕ್ಕ ಭೂಮಾಲೀಕರುಗಳಿಗೆ ಈ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜಿನ ವಿನಾಯ್ತಿ ದೊರಕಿದ್ದರೆ ಅದರಿಂದ ಅವರಿಗೆ ಬಹಳ ಅನುಕೂಲವಾಗುತ್ತಿತ್ತು. ಆದರೆ ದುರ್ದೈವವಶಾತ್ ಡೆಪ್ಯುಟಿ ಕಮಿಷನರ್ ಮತ್ತು ತಹಶೀಲ್ದಾರರು ಆಕಡೆ ಲಕ್ಷ್ಯವನ್ನು ಕೊಟ್ಟಿಲ್ಲ. ಅದರಿಂದ ಅವರಿಗೆ ಬಹಳ ತೊಂದರೆಯಾಗಿದೆ. ಈ ವಿಷಯದಲ್ಲಿ ನಾವು ಅದಕ್ಕೆ ಸಂಬಂಧಪಟ್ಟವರನ್ನು ಕೇಳಿದ್ದಕ್ಕೆ 5 ಎಕರೆಗಿಂತ ಕಡಿಮೆ ಜಮೀನು ಇರತಕ್ಕ ಜಮೀನಿನ ಮಾಲೀಕರು ಡಿಕ್ಲರೇಷನ್ ಕೊಟ್ಟಮೇಲೆ ಅವರಿಗೆ ವಿನಾಯ್ತಿಯನ್ನು ಕೊಡುತ್ತೇವೆ ಎಂದು ಹೇಳಿದರು. ಈಗ 5 ಎಕರೆ ಜಮೀನು ಇರತಕ್ಕವರಿಂದಲೂ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜನ್ನು ವಸೂಲು ಮಾಡುತ್ತಿದ್ದಾರೆ. ಆದ್ದರಿಂದ ಅವರ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಇನ್ನು ಅನಿಮಲ್ ಹಸ್ಬೆಂಡ್ರಿಯ ವಿಚಾರ. ಬೀದರ್ ಜಿಲ್ಲೆಯಲ್ಲಿ ಒಳ್ಳೆಯ ಹಸುವಿನ ತಳಿ ಇದೆ. ಅದಕ್ಕೆ ದೇವಣಿ ತಳಿ ಎಂದು ಹೇಳುತ್ತಾರೆ. ಅಲ್ಲಿರತಕ್ಕಂಥ ತಳಿ ಬಹಳ ಸುಪ್ರಸಿದ್ಧವಾದದ್ದು. ಅದಕ್ಕೆ ಆಲ್ ಇಂಡಿಯಾ ಕಾಂಪಿಟಿಷನ್‌ನಲ್ಲಿ ಬಹುಮಾನ ಬಂದಿದೆ. ಬೀದರ್ ಜಿಲ್ಲೆಯ ಬಾಲ್ಕಿಯಲ್ಲಿ

ಆ ತಳಿಯನ್ನು ಬೆಳೆಸುತ್ತಿದ್ದಾರೆ. ಆ ತಳಿಯನ್ನು ಅಭಿವೃದ್ಧಿಮಾಡುವುದಕ್ಕೋಸ್ಕರ ಸರ್ಕಾರ ದವರನ್ನು ಈಗ ನಾಲ್ಕೈದು ವರ್ಷಗಳಿಂದಲೂ ಕೇಳಿಕೊಳ್ಳುತ್ತಿದ್ದೇವೆ. ಆದರೆ ಅದರ ಸಲುವಾಗಿ ಇದುವರೆಗೂ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಮೊನ್ನೆ ತಾನೆ ಮಾನ್ಯ ರೆವಿನ್ಯೂ ಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದಾಗ ಅಲ್ಲಿ ಒಂದು ಕ್ಯಾಟಲ್ ಬ್ರೀಡಿಂಗ್ ಸೆಂಟರ್ ಮಾಡಿದರೆ ಒಳ್ಳೆಯದೆಂದು ಹೇಳಿದೆವು. ಅಲ್ಲಿರತಕ್ಕ ದೇವಣಿ ತಳಿ ಏನಿದೆ ಅದನ್ನು ಬೆಳೆಸಬೇಕು, ಅದಕ್ಕೆ ಪ್ರೊಟೆಕ್ಷನ್ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ನಮ್ಮ ಭಾಗದಲ್ಲಿ ವೆಟರ್ನರಿ ಆಸ್ಪತ್ರೆ ಗಳಿಲ್ಲ. ದುಬಲ್ಗುಂಡಿ ಒಳ್ಳೆಯ ಮಾರ್ಕೆಟ್ ಇರುವ ಊರಾಗ, ಅಲ್ಲಿ ಪ್ರತಿವಾರ ಸಾವಿರಾರು ದನಗಳ ವ್ಯವಹಾರ ನಡೆಯುತ್ತದೆ. ಅಲ್ಲಿ ಒಂದು ವೆಟರ್ನರಿ ಆಸ್ಪತ್ರೆ ಇಲ್ಲ. ಕಮಾಲ್‌ನಗರ ಎನ್ನುವ ಕಡೆಯೂ ಸಹ ದೊಡ್ಡ ಮಾರ್ಕೆಟ್ ಇದೆ. ಅಲ್ಲಿ ಒಂದು ವೆಟರ್ನರಿ ಆಸ್ಪತ್ರೆಯನ್ನು ಸ್ಥಾಪನೆ ಮಾಡಿದರೆ ಅಲ್ಲಿ ದನಗಳಿಗೆ ಕಾಯಿಲೆ ಬಂದಾಗ ಅದರಿಂದ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ಮಾಡಬೇಕು.

ಇನ್ನು ನಮ್ಮ ಭಾಗದಲ್ಲಿ ಬೀದರ್ ಜಿಲ್ಲೆಯಲ್ಲಿ ಹೋದ ಎರಡು ವರ್ಷಗಳಿಂದ ಕರೀಫ್ ಬೆಳೆಯು 100ಕ್ಕೆ 60 ಭಾಗದಲ್ಲಿ ಬೆಳೆ ಆಗದೆ ಇರುವುದರಿಂದ ಅಲ್ಲಿನ ಜನಗಳಿಗೆ ಬಹಳ ತೊಂದರೆಯಾಗಿದೆ. ಈ ವರ್ಷವಂತೂ ಅಲ್ಲಿ ಏನೇನು ಬೆಳೆ ಆಗಿಲ್ಲ. ಈ ವರ್ಷ ಅಲ್ಲಿ ರಿಲೀಫ್ ಮೆಜರ್ಸ್‌ಗೋಸ್ಕರ ಒಂದೆರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದು ಸಾಲುವುದಿಲ್ಲ. ಆದ್ದರಿಂದ ಅಲ್ಲಿಗೆ ನಾಲ್ಕಾರು ಲಕ್ಷ ರೂಪಾಯಿಗಳನ್ನು ರಿಲೀಫ್ ಮೇಜರ್ಸ್ ರೋಡುಗಳು ಮತ್ತು ಕೆರೆಗಳ ಕಾಮಗಾರಿ ಗಳಿಗೆ ಒದಗಿಸಿದರೆ ಆ ಭಾಗದ ವಕ್ಕಲಿಗರು ಮತ್ತು ಕೂಲಿಗಾರರಿಗೆ ಸರ್ಕಾರದವರು ದೊಡ್ಡ ಉಪಕಾರವನ್ನು ಮಾಡಿದ ಹಾಗಾಗುತ್ತದೆ. ಆದ್ದರಿಂದ ಅಲ್ಲಿ 5-6 ಲಕ್ಷ ರೂಪಾಯಿಗಳ ರಿಲೀಫ್ ವರ್ಕ್ಸ್ ಅನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದವರು ಆ ಭಾಗದ ಡೆಪ್ಯುಟಿ ಕಮಿಷನರಿಗೆ ಸೂಚನೆ ಯನ್ನು ಕೊಡಬೇಕೆಂದು ಕೇಳಿಕೊಂಡು ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ರೆವೆನ್ಯೂ ಡಿಮ್ಯಾಂಡ್ ಮೇಲೆ ಮಾತನಾಡುತ್ತಿರುವ ಸಂದರ್ಭದಲ್ಲಿ ನಾನು ನಾಲ್ಕು ಮಾತುಗಳನ್ನಾಡ ಬೇಕೆಂದು ನಿಂತಿದ್ದೇನೆ. ಈ ರೆವೆನ್ಯೂ ಡಿಮ್ಯಾಂಡ್ ಸಂಬಂಧದಲ್ಲಿ ಬೇಕಾದಷ್ಟು ವಿಷಯ ಹೇಳ ಬೇಕಾಗಿತ್ತು. ಕಾಲ ಕಡಮೆ ಇರುವುದರಿಂದ ಯಾವುದರಮೇಲೆ ಮಾತನಾಡಬೇಕು, ಯಾವುದನ್ನು ಬಿಡಬೇಕು ಎನ್ನುವುದು ತಿಳಿಯದಂತಾಗಿದೆ. ಆದರೂ ಮುಖ್ಯವಾಗಿರುವ ವಿಚಾರಗಳಲ್ಲಿ ನಾಲ್ಕು ಮಾತುಗಳನ್ನಾಡುತ್ತೇನೆ.

ಈಗ ತಾನೇ ಶ್ರೀಮಾನ್ ಕೇಶವಮೂರ್ತಿಗಳು ಹೇಳಿದರು. ಪಟೇಲ್ ಶ್ಯಾನಭೋಗರ ಗತಿ ಏನಾಗಿದೆ, ಅವರನ್ನು ಏನು ಮಾಡುತ್ತೀರಿ ಎಂದು. ನಮ್ಮ ಊರಿನಲ್ಲಿಯೂ ಕೆಲವು ಜನ ಪಟೇಲ್ ಶ್ಯಾನುಭೋಗರಿದ್ದಾರೆ. ನಿಮ್ಮ ಅಧಿಕಾರಿಗಳು ಅವರಿಗೆ ಬಹಳ ಹಿಂಸೆ ಮಾಡುತ್ತಿದ್ದಾರೆಂದು ಹೇಳುವುದಕ್ಕೆ ನನಗೆ ಬಹಳ ಸಂಕೋಚವಾಗುತ್ತದೆ. ಏಕೆಂದರೆ ಎಷ್ಟೋ ಜನ ಪಟೇಲರೂ, ಶ್ಯಾನು ಭೋಗರೂ ಬಹಳ ಹಿಂದಿನಿಂದ ಇದ್ದಾರೆ. ಅವರಲ್ಲಿ ಬಹಳ ಜನ ಬರೀ ಪೋಟಿಗಿ ತಿಂದುಕೊಂಡು, ದುಡ್ಡು ತಿಂದುಕೊಂಡು ಇರತಕ್ಕ ವ್ಯಕ್ತಿಗಳಾಗಿರುವುದಿಲ್ಲ. ಎಷ್ಟೋ ಜನ ದೊಡ್ಡ ಮನೆತನದವ ರಿದ್ದಾರೆ. ಅವರು ಹೊರಟು ಹೋಗುತ್ತಾರೆಂದು ಅವರನ್ನು ಕ್ಷುಲ್ಲಕ ರೀತಿಯಿಂದ ನೋಡುತ್ತಿದ್ದಾರೆ. ಇದನ್ನು ತಪ್ಪಿಸಿ, ಅವರನ್ನು ಇಟ್ಟುಕೊಳ್ಳುವ ಹಾಗಿದ್ದರೆ ಮಾನ, ಮರ್ಯಾದೆ, ಬೆಲೆ ಕೊಟ್ಟು ಇಟ್ಟು ಕೊಳ್ಳಬೇಕು. ಇಲ್ಲದೆ ಹೋದರೆ ಅವರಿಗೆ ಕೊಡಬೇಕಾದ ಕಾಂಪೆನ್‌ಸೇಷನ್ ಕೊಟ್ಟು ಕಳಿಸಬೇಕು. ಇದು ಸರ್ಕಾರದ ಕರ್ತವ್ಯವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಇದನ್ನು ಗಮನಕ್ಕೆ ತೆಗೆದು ಕೊಂಡು ಅವರನ್ನು ಕೆಲಸದಲ್ಲಿ ಇಟ್ಟುಕೊಳ್ಳುವುದು, ಇಲ್ಲದೆ ಹೋದರೆ ಕಾಂಪೆನ್‌ಸೇಷನ್ ಕೊಡು ವುದು, ಎರಡರಲ್ಲಿ ಒಂದು ಮಾಡಬೇಕು ಎಂದು ಒತ್ತಾಯಮಾಡುತ್ತಿದ್ದೇನೆ.

ರಿಜಿಸ್ಟ್ರೇಷನ್ ಮತ್ತು ಸ್ಟ್ಯಾಂಪುಗಳ ವಿಚಾರಕ್ಕೆ ಬಂದರೆ, 21 ಇಲಾಖೆಗಳಿಗೆ ಇದರಿಂದ ವಿನಾಯಿತಿ ಕೊಟ್ಟಿದ್ದೀರಿ. ತಕಾವಿಸಾಲ ತೆಗೆದುಕೊಳ್ಳುವಾಗ, ರಿಜಿಸ್ಟ್ರೇಷನ್ ಮತ್ತು ಸ್ಟ್ಯಾಂಪು ಚಾರ್ಜು ವಿನಾಯಿತಿ ಇದೆ. ಅಡಮಾನ ಬ್ಯಾಂಕಿಗೆ ರಿಜಿಸ್ಟರು ಮಾಡಿಕೊಡುವಾಗ ಸ್ಟ್ಯಾಂಪ್ ತೆಗೆದು ಕೊಳ್ಳಬೇಕು. ಅದೇ ರೀತಿ ಒಬ್ಬ ರೇಷ್ಮೆ ಬೆಳೆಯತಕ್ಕ ವ್ಯವಸಾಯ ಸಾರ ಸಾಲ ತೆಗೆದುಕೊಳ್ಳ ಬೇಕಾದರೆ ಸಾವಿರಕ್ಕೆ ಸುಮಾರು 50 ರೂಪಾಯಿ ಖರ್ಚು ಮಾಡಬೇಕು. ಐದು ಸಾವಿರ ರೂಪಾಯಿ ಸಾಲ ಪಡೆಯುವಂಥ ಸಂದರ್ಭದಲ್ಲಿ, ಅವನಿಗೆ ಸಿಕ್ಕತಕ್ಕ 500 ರೂಪಾಯಿ ಸಬ್ಸಿಡಿ ಏನಿದೆ ಅದನ್ನು ಈ ಕೈಯಿಂದ ಕೊಟ್ಟು ಆ ಕೈಯಿಂದ ಸ್ಟ್ಯಾಂಪ್ ಮುಂತಾದ ರೂಪದಲ್ಲಿ ಕಿತ್ತುಕೊಳ್ಳುವು ದಾದರೆ ಅದರಿಂದ ರೈತನಿಗೆ ಸಹಾಯ ಮಾಡಿದಂತಾಗುವುದಿಲ್ಲ. ಅವನು ಸಾಲ ಕೇಳುತ್ತಿರುವ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಸಮಯದಲ್ಲಿ ಅವರಿಂದ ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್‌ಗೆ ಏನೂ ತೆಗೆದುಕೊಳ್ಳದೆ ಸಹಾಯ ಮಾಡಬೇಕು. ರೇಷ್ಮೆ ವ್ಯವಸಾಯ ಮಾಡುವವರಿಗೆ ಸಾಲ ಕೊಡುವಾಗ ಕೂಡ ಅದೇ ರೀತಿಯಲ್ಲಿ ಒದಗಿಸಿಕೊಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮುಜರಾಯಿ ಸಂಸ್ಥೆಗಳ ವಿಚಾರ ತೆಗೆದುಕೊಂಡರೆ ನಮ್ಮ ರೆವಿನ್ಯೂ ಮಂತ್ರಿಗಳು ಹೇಮಗಿರಿ ಮುಂತಾದ ಕಡೆ ಹೋಗುತ್ತಾರೆಯೇ ಹೊರತು ನಮ್ಮ ಕಡೆ ಬನ್ನಿ ಎಂದರೆ ಬರುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಬೇಕಾದಷ್ಟು ದೇವಸ್ಥಾನಗಳಿವೆ. ಅಭಿವೃದ್ಧಿ ಸ್ಥಿತಿಗೆ ತರಬೇಕಾದಂಥ ಕಟ್ಟಡಗಳು, ದೇವಸ್ಥಾನಗಳೂ ಇವೆ. ಅದರಲ್ಲಿ ಗೋಪಾಲಸ್ವಾಮಿ ಬೆಟ್ಟ ಎಷ್ಟೋ ವರ್ಷಗಳಿಂದ ಇರುವ ಒಂದು ಸುಂದರವಾದ ಪ್ರದೇಶ. ಅಲ್ಲಿಯ ದೇವಸ್ಥಾನವನ್ನು ಉತ್ತಮ ಸ್ಥಿತಿಗೆ ತರಬೇಕಾಗಿದೆ. ರೆವಿನ್ಯೂ ಮಂತ್ರಿಗಳನ್ನು ಕರೆದದ್ದಾಯಿತು, ಟೂರಿಸ್ಟ್ ಮಂತ್ರಿಗಳಾದ ಪಾಟೀಲರನ್ನು ಕರೆದದ್ದಾಯಿತು. ಯಾರೂ ಬಂದು ನೋಡುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿರುವ ದೇವಸ್ಥಾನಗಳು ಮತ್ತು ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿ ಪಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಮುಜರಾಯಿ ಇಲಾಖೆಗೆ ಬರತಕ್ಕ ಹಣದಿಂದ ತೆರಕಣಾಂಬಿ ದೇವಸ್ಥಾನವನ್ನು ಉತ್ತಮಪಡಿಸಲು ಈ ವರ್ಷ ಸ್ವಲ್ಪ ಹಣ ಕೊಟ್ಟು ಸಹಾಯ ಮಾಡಿದ್ದಾರೆ. ಅದಕ್ಕಾಗಿ ನಾನು ನಿಜವಾಗಿಯೂ ಆಭಾರಿಯಾಗಿದ್ದೇನೆ. ಗೋಪಾಲಸ್ವಾಮಿ ಬೆಟ್ಟವಲ್ಲದೆ ಅನೇಕ ವರ್ಷಗಳ ಹಿಂದೆ ಕಟ್ಟಿದ, ಜಕಣಾಚಾರಿ ಕಾಲದಲ್ಲಿ ಕಟ್ಟಿರುವ ದೇವಸ್ಥಾನಗಳಿವೆ. ಇವುಗಳನ್ನು renovate ಮಾಡಿ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

ಆಹಾರದ ವಿಚಾರಕ್ಕೆ ಬಂದರೆ, ನಮ್ಮ ರಾಜ್ಯದಲ್ಲಿ, ಆಹಾರದ ಕೊರತೆ ಇದೆ. ಈಗಲೇ ಒಂದು ಕಿಲೋಗ್ರಾಂ ಅಕ್ಕಿಗೆ ಒಂದು ರೂಪಾಯಿ ಆಗಿದೆ. ನಾವೆಲ್ಲ 30–1 ರೂಪಾಯಿಗಳಿಗೆ ಬತ್ತವನ್ನು ಕೊಟ್ಟುಬಿಟ್ಟಿದ್ದೇವೆ. ಈಗಿರುವ ಪರಿಸ್ಥಿತಿಯನ್ನು ನೋಡಿದರೆ ಅಕ್ಕಿಯ ಬೆಲೆ ಒಂದು ಕಿಲೋಗ್ರಾಮಿಗೆ 20 ರೂಪಾಯಿ ಆಗುತ್ತದೆಂದು ಹೇಳುತ್ತಾರೆ. ಇದಕ್ಕೆ ಏನು ಮಾಡುತ್ತಿದ್ದೀರಿ ? ಇದೂ ಅಲ್ಲದೆ ಡೆವಲಪ್‌ಮೆಂಟ್ ಕೌನ್ಸಿಲ್ಲಿನಲ್ಲಿ ಮೈಸೂರು ಜಿಲ್ಲೆ ಡೆಪ್ಯುಟಿ ಕಮೀಷನರು ನಮಗೆ ಒಂದು ಆಶ್ವಾಸನೆಯನ್ನು ಕೊಟ್ಟರು. ನಮ್ಮ ತಾಲ್ಲೂಕಾದ ಗುಂಡ್ಲುಪೇಟೆಗೆ ಬಹಳ ಕಷ್ಟವಿದೆ, ಅದನ್ನು ನಿವಾರಣೆ ಮಾಡಲು ಅಕ್ಕಿ, ಜೋಳ ಸಪ್ಲೈ ಮಾಡಬೇಕೆಂದು ಕೇಳಿದಾಗ ಜೋಳ ಕೇಳಬೇಡಿ, ಬೇಕಾದಷ್ಟು ಅಕ್ಕಿಯನ್ನು ತರಿಸಿಕೊಡುತ್ತೇವೆ. ಅಮೆರಿಕ ಅಕ್ಕಿ ಬೇಕಾದಷ್ಟು ಬಿದ್ದಿದೆ, ತರಿಸಿಕೊಡುತ್ತೇವೆಂದು ಹೇಳಿದರು. ನಾವು ಇವರು ಹೇಳಿದುದನ್ನು ನಂಬಿಕೊಂಡು ಹಳ್ಳಿಗಳಲ್ಲಿ ಹೋಗಿ ನಿಮಗೆ ಕೆಲಸ ಎಲ್ಲಿರುತ್ತವೆಯೋ ಅಲ್ಲಿಗೆ ಹೋಗಿ ಕೆಲಸ ಮಾಡಿ ಬನ್ನಿ, ನಿಮಗೆ ಕಷ್ಟವಿರುವುದಿಲ್ಲ, ನಿಮಗೆ ಅಕ್ಕಿಯನ್ನು ತಂದುಕೊಡುತ್ತೇವೆಂದು ಹೇಳಿದೆವು. ಅದರಂತೆ ಹಳ್ಳಿಯ ಜನ 10–12 ಮೈಲಿ ದೂರ ಹೋಗಿ ಪ್ರಾಜೆಕ್ಟ್ ಕೆಲಸ ಮಾಡಿಕೊಂಡು ಬಂದರೆ, ಅವರಿಗೆ ಅಕ್ಕಿಯೇ ಇಲ್ಲ. ಸರ್ಕಾರದವರ ಮಾತನ್ನು ಕೇಳಿ ನಾವು ನಮ್ಮ ಮಾತನ್ನು ಉಳಿಸಿಕೊಳ್ಳದಂತಾಗಿದೆ. ಹದಿನೈದು ದಿವಸವಾದರೂ ನಮ್ಮ ತಾಲ್ಲೂಕಿಗೆ ಅಕ್ಕಿಯೇ ಬರಲಿಲ್ಲ. ಮಾನ್ಯ ಮಂತ್ರಿಗಳನ್ನು ವಿಚಾರಿಸಿ ಕಾಗದ ಬರೆದಿದ್ದೇವೆ, ಈಗ ಬರುತ್ತದೆ, ಆಗಬರುತ್ತದೆಂದು ಹೇಳಿದರು. ಕೊನೆಗೆ ನೋಡಿದರೆ ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳಬೇಕಾದ್ದನ್ನು ಕಾಲದಲ್ಲಿ ತೆಗೆದುಕೊಳ್ಳದೆ ಅದು cancel ಆಯಿತು ಎಂದು ಹೇಳಿದರು. ಹಾಗಾದರೆ ಅಕ್ಕಿ, ಜೋಳ ಇವುಗಳನ್ನು ಅಭಾವವಿರತಕ್ಕ ಕಡೆಗೆ ಹೇಗೆ ಒದಗಿಸುತ್ತೀರಿ? ನಮಗೆ ಅಕ್ಕಿ, ಜೋಳ ಬೇಕು ಎಂದು ಕೇಳಿದರೆ, 'ಉಪ್ಪು ಇದೆಯೇ ಎಂದರೆ ಪಪ್ಪು ಇದೆ' ಎಂದು ಹೇಳುವಂತೆ ಗೋಧಿ ತೆಗೆದುಕೊಳ್ಳಿ, ರವೆ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಇವಕ್ಕೆ ತುಪ್ಪವನ್ನು ಸರ್ಕಾರದವರು ಕೊಡುತ್ತಾರೆಯೇ? ಅದೂ ಅಲ್ಲದೆ ನಮ್ಮ ಜನಗಳಿಗೆ ಒಂದು ತರಹ ಆಹಾರ ಪದಾರ್ಥಗಳನ್ನು ತಿಂದು ಅಭ್ಯಾಸವಾಗಿ ಬೇರೆ ಪದಾರ್ಥಗಳನ್ನು ತಿಂದರೆ ರಕ್ತಭೇದಿ, ಆಮಶಂಕೆ, ಶುರುವಾಗಿ ಡಾಕ್ಟರ್ ನಾಗಪ್ಪ ಆಳ್ವರನ್ನು ಬಿಟ್ಟು ಔಷಧಿ ಕೊಡಿ ಎಂದು ಕೇಳಬೇಕಾಗುತ್ತದೆ. ಆದುದರಿಂದ ಆ ಜನಗಳಿಗೆ ಬರುವ ವರ್ಷ ಮಳೆ ಬಂದು ಬೆಳೆ ಬರುವವರೆಗೂ ಅವರಿಗೆ ಬೇಕಾದ ಆಹಾರವನ್ನು ಒದಗಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಸಕ್ಕರೆ ವಿಷಯ ಬೇಕಾದಷ್ಟು ಜನ ಮಾತನಾಡಿದ್ದಾರೆ. ಸಕ್ಕರೆಯನ್ನು ಸೊಸೈಟಿ ಮುಖಾಂತರ ಹಂಚುತ್ತಾರೆ, ನಮ್ಮ ಕಡೆ ಸೊಸೈಟಿಯಲ್ಲಿ ಸಕ್ಕರೆಯನ್ನು ತೂಕ ಮಾಡಿ ಕೊಡುವುದಿಲ್ಲ ಅಳತೆಮಾಡಿ ಕೊಡುವುದಿಲ್ಲ ಅವರು ಕೊಟ್ಟಷ್ಟು ತೆಗೆದುಕೊಂಡು ಹೋಗಬೇಕು. ಮಂತ್ರಿಗಳು ಅಲ್ಲಿಗೆ ನಾಟಕ ವಗೈರೆ ನೋಡುವುದಕ್ಕೆ ಬರುತ್ತಾರೆ. ನಾಟಕ ನೋಡುವ ಮಂತ್ರಿಗಳು ಅಲ್ಲಿಯ ಜನರ ಕಷ್ಟ ಸುಖ ಕೇಳುತ್ತಾರೆಯೇ ಎಂದರೆ ಇಲ್ಲವೇ ಇಲ್ಲ. ಇದು ಯಾವ ಧರ್ಮ?

Mr. SPEAKER [illegible] ply to all the Ministers.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾಟಕ ನೋಡುವ ಮಂತ್ರಿಗಳಿಗೆ ಹೇಳಿದ್ದು. ನಮ್ಮ ಪ್ರಾರಬ್ಧ ಕರ್ಮವನ್ನು ಹೇಳುತ್ತಿದ್ದೇನೆ.

Miscellaneous Departmentsನಲ್ಲಿ ವಾರ್ತಾ ಇಲಾಖೆ ಸೇರಿದೆ ಎಂದು ತಿಳಿದುಕೊಂಡಿದ್ದೇನೆ. ಮಾನ್ಯ ಗೃಹ ಮಂತ್ರಿಗಳಿಗೆ ಈ ಇಲಾಖೆ ಸೇರಿದೆ. ಮೈಸೂರಿನಲ್ಲಿ ಒಂದು ಆಫೀಸ್ ಇದೆ. ಬೆಂಗಳೂರಿನಲ್ಲಿರುವ ಆಫೀಸು ಬಹಳ ಗಲೀಜು ಪ್ರದೇಶದಲ್ಲಿದೆ. ಅವರು ನೋಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಮೈಸೂರಿನಲ್ಲಿರುವ ಆಫೀಸು ಬಹಳ ಚೆನ್ನಾಗಿದೆ. ಈ ಆಫೀಸುಗಳಿಗೆ ಎಷ್ಟು ಸಿಬ್ಬಂದಿ ಕೊಟ್ಟಿದ್ದಾರೆ ಎಂದು ಕೇಳಬೇಕಾಗಿದೆ. ಇದು foreign exchange ಬರುವಂಥ ವಿಚಾರ, ಇದಕ್ಕೆ ಎಷ್ಟರಮಟ್ಟಿಗೆ ಸಿಬ್ಬಂದಿಯನ್ನು ಕೊಟ್ಟಿದೆ, trained guides ಇದ್ದಾರೆಯೇ, conveyances ಏನಾದರೂ ಕೊಟ್ಟಿದೆಯೇ? ಕೃಷ್ಣರಾಜಸಾಗರದಲ್ಲಿ ಒಂದು ವಿಶ್ರಾಂತಿ ಗೃಹವನ್ನು ಕೊಟ್ಟಿದ್ದಾರೆ. ಅಲ್ಲಿ ಒಂದು ಕಪ್ ಕಾಫಿ ಕೊಡುವವರೇ ಇಲ್ಲ, cool drinks ಕೂಡ ಇಲ್ಲ. ಒಬ್ಬ ಹೋಟೆಲ್‌ನವನಿಗೆ ಲೈಸೆನ್ಸ್ ಕೊಟ್ಟಿದ್ದಾರೆ. ಒಂದು ಗ್ಲಾಸ್ ಲೈಮ್ ಜ್ಯೂಸ್‌ಗೆ ಒಂದೂವರೆ ರೂಪಾಯಿ ಕೊಡಬೇಕು. ಹೀಗಾದರೆ ಪ್ರವಾಸಿಗರು ಹೇಗೆ ಬರುತ್ತಾರೆ? ಆ ಕಟ್ಟಡದಲ್ಲಿರುವುದೆಲ್ಲ single rooms. ಪ್ರವಾಸಿಗರ ಅನುಕೂಲಕ್ಕಾಗಿ double rooms ಇರಬೇಕಾದ್ದು ಅಗತ್ಯ. ಇಷ್ಟು ಹಣ ಬರತಕ್ಕ ಮುಖ್ಯವಾದ ಇಲಾಖೆಯನ್ನು ignore ಮಾಡದೆ ಸರಿಯಾಗಿ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ನಾನು ಮುಖ್ಯವಾಗಿ ಹೇಳಬೇಕಾಗಿರುವ ಕ್ಷಾಮದ ವಿಚಾರಕ್ಕೆ ಬರುತ್ತೇನೆ. ಈ ವಿಚಾರ ಮಾತನಾಡುವುದಕ್ಕೆ ಮುಂಚೆ ಒಂದು ಮಾತು ಹೇಳುತ್ತೇನೆ. ರಾಜ್ಯಪಾಲರ ಭಾಷಣದ ಮೇಲೆ, ಬಡ್ಜೆಟ್ ಮೇಲೆ ಚರ್ಚೆ ನಡೆಯುವಾಗ ಈ ವಿಚಾರ ಹೇಳಿದೆ. ಮಾನ್ಯ ಉಪಮಂತ್ರಿಗಳಾದ ಪ್ರಭಾಕರ್ ಅವರು ಹೇಳಿದರು. ನಾಗರತ್ನಮ್ಮ ಹೇಳುವುದೆಲ್ಲ, ಸುಳ್ಳು, ಸುಳ್ಳಿನ ಮೊಟ್ಟೆ ಎಂದು ಯಾರೋ ಹೇಳಿದರು ಎಂದು. ಅವರಿಗೂ ಮತ್ತು ಅವರಿಗೆ ಯಾರು ಹೇಳಿದರೋ ಅವರಿಗೂ ಹೇಳುತ್ತೇನೆ ಸುಳ್ಳಿನ ಮೊಟ್ಟೆ ನಾನು ಏಕೆ ಹೇಳಬೇಕು? ಶ್ರೀ ಪ್ರಭಾಕರ್ ಅವರು ಸುಳ್ಳಿನ ಮೊಟ್ಟೆ, ಇದು ಸುಳ್ಳು ಎಂದು ಹೇಳಿದ್ದಕ್ಕೆ ನನಗೆ ಬಹಳ ವ್ಯಸನವಾಯಿತು. ಏಕೆಂದರೆ ಅಂಥ ಸುಳ್ಳು ಹೇಳಬೇಕಾದ ಪ್ರಮೇಯ ನನಗೇನೂ ಒದಗಿಲ್ಲ. ಪ್ರಪಂಚದಲ್ಲಿ ಬರಬಾರದಂಥ ಕಷ್ಟ ಬಂದರೂ ನಗುತ್ತ ಅದನ್ನು ಎದುರಿಸುತ್ತೇನೆ. ಹೊಟ್ಟೆಯಲ್ಲಿ ಎಷ್ಟೇ ಸಣ್ಣ ಕುದಿಯಲಿ ಅದನ್ನು ತೋರ್ಪಡಿಸುವುದಿಲ್ಲ. ಸುಳ್ಳು ಹೇಳಿ ನಾನು ಬದುಕಬೇಕಾಗಿಲ್ಲ.

10-00 A.M.

ಸುಳ್ಳುಹೇಳಿದ್ದಾರೆಂದು ಯಾರು ಇವರಿಗೆ ಹೇಳಿದರೋ ಅವರಿಗೆ ಅದು ಸುಳ್ಳಲ್ಲ, ನಿಜ ಹೇಳಿದ್ದಾರೆಂದು ಇವರು ಹೇಳಬೇಕಾಗಿತ್ತು. ನಮ್ಮ ಜನರಿಗೆ ನಾನು ದ್ರೋಹಮಾಡಬಾರದು, ಅದಕ್ಕೆ ಅವರು ನನ್ನನ್ನು ಆರಿಸಿ ಈ ಸಭೆಗೆ ಕಳುಹಿಸಿರುವುದು ನಾನು ನಿಜ ಹೇಳಬೇಕೆಂದು. ನಾನು ನಿಜ ಹೇಳದಿದ್ದರೆ ಮುಂದೆ, ದೇವರ ಮುಂದೆ ನನಗೆ ಕ್ಷಮೆ ದೊರಕುವುದಿಲ್ಲವೆಂದು ತಿಳಿದು ನಿಜವನ್ನು ಹೇಳಿದ್ದೇನೆ. ಹೀಗಿರುವಾಗ ಅವರಿಗೆ ಯಾರಾದರೂ ಹಾಗೆ ಹೇಳಿದ್ದರೆ ಇವರೇ ಅವರಿಗೆ ಸರಿಯಾಗಿ ಹೇಳಬೇಕಾಗಿತ್ತು. ನಮ್ಮೂರಿನಲ್ಲಿರುವ ಕ್ಷಾಮ ನಿಮ್ಮೂರಿನಲ್ಲೆಲ್ಲಿಯೂ ಇಲ್ಲವೆಂದು ಅವರಿಗೆ ಹೇಳುತ್ತೇನೆ. ನಮ್ಮ ಮಂತ್ರಿಗಳು ಅಲ್ಲಿ ಬಂದು ನೋಡಬೇಕು. ಅಲ್ಲಿ ಕ್ಷಾಮವಿಲ್ಲ ಆದ್ದರಿಂದ ರಿಲೀಫ್ ಕಾಮಗಾರಿಗಳನ್ನು ಮಾಡಲಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರಂತೆ. ರಿಲೀಫ್ ವರ್ಕ್ಸ್‌ನಲ್ಲಿ ಕೊಟ್ಟರೂ ಹತ್ತಾಣೆ ಕೂಲಿ ಕೊಟ್ಟು ಕೆಲಸ ಮಾಡಿ ಎಂದು ಹೇಳುತ್ತಾರೆ. ಇವರು ಕೊಡುವ ಹತ್ತಾಣೆಗೆ ಮುಕ್ಕಾಲು ಸೇರು, ಒಂದು ಸೇರು ಅಕ್ಕಿ ಕೂಡ ದೊರಕುವುದಿಲ್ಲ. ಇದನ್ನು ಬಿಟ್ಟು ಹತ್ತು ಮೈಲಿ ದೂರ ಹೋದರೆ ಅಲ್ಲಿ ನಡೆಯುತ್ತಿರುವ ಯೋಜನೆಯಲ್ಲಿ ಅವರಿಗೆ ಕೆಲಸ ಸಿಕ್ಕುತ್ತದೆ, ಹೆಚ್ಚಿನ ಕೂಲಿ ಸಿಕ್ಕುತ್ತದೆ, ರೆವಿನ್ಯೂ ಅಧಿಕಾರಿಗಳು ಬಿ.ಡಿ.ಓ.ಗೆ ಹಾಕುವುದು, ಇವರು ಮತ್ತೆ ಅವರಿಗೆ ಕಳುಹಿಸುವುದು, ಹೀಗೆ ಮಾಡಿ ಇಬ್ಬರೂ ಸೇರಿ ಎರಡು ತಿಂಗಳು ಕಾಲ ಕಳೆದರು. ಎಲ್ಲರೂ ಬಡಜನರ ಕಡೆ ಕೈತೋರಿಸುತ್ತಾರೆ; ಆದರೆ ಅಧಿಕಾರಿಗಳು ಮಾಡುವುದು ಅವರಿಗೆ ಗೊತ್ತಾಗುವುದಿಲ್ಲ. ತಕಾವಿ ಸಾಲ ಕೇಳಿದರೆ ಬಿದರೆಗೆ ಅಷ್ಟು ಕೊಟ್ಟೆವು, ಗುಬ್ಬರ್ಗಕ್ಕೆ ಇಷ್ಟು ಕೊಟ್ಟೆವು ಎಂದು ಲೆಕ್ಕ ಹೇಳುತ್ತಾರೆ. ಅಲ್ಲಿ ದನಗಳಿಗೆ ಕುಡಿಯಲು ನೀರಿಲ್ಲ, ತಿನ್ನಲು ಹುಲ್ಲಿಲ್ಲ. ಇಂತಹ ಸಮಯದಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರು ಮನೆಮನೆಗೆ ಹೋಗಿ ನುಗ್ಗಿ ಕಂದಾಯ ವಸೂಲು ಮಾಡುತ್ತಿದ್ದಾರೆ. ಜನರು ಕಂದಾಯವನ್ನು ಯಾವ ರೀತಿ ಕೊಡಬೇಕು? ಜನರಲ್ಲಿ ವಿಷ ತೆಗೆದು

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಕೊಳ್ಳಬೇಕೆಂದರೂ ಮೂರು ಕಾಸಿಲ್ಲ. ಹೀಗಿರುವಾಗ ನಮಗೆ, ನಮ್ಮ ತಾಲ್ಲೂಕಿಗೆ ಅನುಕೂಲ ಕೊಡದಿರುವುದು ಸರಕಾರಕ್ಕೆ ಅವಮಾನಕರ. ಆದಕಾರಣ, ಅಲ್ಲಿನ ಕಷ್ಟವನ್ನು ನಿವಾರಣೆ ಮಾಡಬೇಕು. ನಮ್ಮಲ್ಲಿ ಬೇಕಾದಷ್ಟು ಎಕ್ಸ್‌ಪ್ರೆಸ್ ಫಂಡ್ಸ್ ಇದೆ. ಮಂತ್ರಿಗಳು ನಂಜನಗೂಡಿನಿಂದ ಮುಂದಕ್ಕೆ ಏಕೆ ಬರುವುದಿಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಹೋದ ವರ್ಷ ಬಂದಿದ್ದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಯಾವುದೋ ಸಂಸ್ಥೆಯನ್ನೋ, ಕಟ್ಟಡವನ್ನೋ ತೆರೆಯುವುದಕ್ಕೆ, ಪ್ರಾರಂಭೋತ್ಸವ ನಡೆಸುವುದಕ್ಕೆ ಬಂದಿದ್ದರೆಂದು ಕಾಣುತ್ತದೆ ; ನಾವು ಅಂತಹ ಸಮಾರಂಭಗಳನ್ನಿಟ್ಟುಕೊಳ್ಳಲು ನಮ್ಮಲ್ಲಿ ಹಣವಿಲ್ಲ. ದಯವಿಟ್ಟು ಚಾಮರಾಜನಗರ, ಕೊಳ್ಳೇಗಾಲ ಮತ್ತು ನಮ್ಮ ತಾಲ್ಲೂಕು, ಈ ಎಲ್ಲ ಕಡೆಯೂ ಬಂದು ಮಂತ್ರಿಗಳು ನೋಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ಸಿದ್ದಮ್ಮ ಮೈಲಾರ್ (ಬ್ಯಾಡಗಿ).—ಸ್ವಾಮಿ ನಾನು ಈ ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ ನಮ್ಮ ತಾಲ್ಲೂಕಿನಲ್ಲಿ ಬರಗಾಲ ಪರಿಸ್ಥಿತಿ ಹೇಗಿದೆ ಎಂಬ ವಿಷಯವನ್ನು ಹೇಳುತ್ತೇನೆ. ಈಗ ಎರಡು ವರ್ಷಗಳಿಂದ ನಮ್ಮ ತಾಲ್ಲೂಕಿನಲ್ಲಿ ಬರಗಾಲವಿದೆ, ಬೆಳೆ ಬಂದಿಲ್ಲ, ಜನರಿಗೆ ಬಹಳ ತೊಂದರೆಯಾಗಿದೆ ಎಂದು ರೆವಿನ್ಯೂ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ಹೋದ ವರ್ಷವೂ ಹೇಳಿದೆ. ನಮ್ಮ ತಾಲ್ಲೂಕಿಗೆ ಹಣ ಸಹಾಯ ಕೊಡಿ.

[MR. DEPUTY SPEAKER in the Chair.]

ಅಲ್ಲಿನ ಜನರು ಬಹಳ ಬಡವರು ಎಂದು ಹೇಳಿದೆ. ಆದರೂ ನಮ್ಮ ಜಿಲ್ಲೆಗೆ ಜಾಸ್ತಿ ಕೊಟ್ಟಿದ್ದೇವೆಂದು ಹೇಳಿದರು. ಯಾರಾದರೊಬ್ಬರು ಹೊಟ್ಟೆತುಂಬ ಊಟಮಾಡಿದರೆ ಮತ್ತೊಬ್ಬರು ಅರೆಹೊಟ್ಟೆ ಇರಬೇಕೆಂದು ನಾನು ಇಚ್ಛೆಪಡುವುದಿಲ್ಲ, ಅವರಿಗೆ ಜಾಸ್ತಿ ಕೊಡುತ್ತೀರೆಂದು ನಾನು ಅಸೂಯೆಪಡುವುದಿಲ್ಲ. ಆದರೆ ನಾನು ಇಷ್ಟು ಹೇಳುತ್ತೇನೆ. ನಾಲ್ಕು ವರ್ಷಗಳಿಂದ ನಮ್ಮ ಕಡೆ ಸರಿಯಾಗಿ ಬೆಳೆ ಬಂದಿಲ್ಲ, ಅದರಲ್ಲಿಯೂ ಈ ವರ್ಷ ಏನೂ ಬೆಳೆ ಬಂದಿಲ್ಲ. ತಲಾಟಿ ಮತ್ತು ತಹಶೀಲ್ದಾರರು ಸೇರಿ ಅಣೆವಾರಿ ಬರೆಯುವುದರಲ್ಲಿ ಅನ್ಯಾಯ ಮಾಡಿದ್ದಾರೆ. ಆದುದರಿಂದ ತಾವು ಆ ಜಿಲ್ಲೆಗೆ ಸರಿಯಾಗಿ ಬರೆದು ಅಥವಾ ಸ್ವತಃ ತಾವೇ ಬಂದು ಆ ತಾಲ್ಲೂಕಿನ ಪರಿಸ್ಥಿತಿಯನ್ನು ನೋಡಿ ಅಲ್ಲಿನ ರೈತರಿಗೆ ಸಹಾಯ ಮಾಡಬೇಕೆಂದು ಆಶಿಸುತ್ತೇನೆ. ಹಿಂದೆ ಡಿಸ್ಟ್ರಿಕ್ಟ್ ಅಧಿಕಾರಿಗಳು ಸರಿಯಾಗಿ ನಡೆಯುವುದಿಲ್ಲವೆಂದು ಎಷ್ಟೋ ತಕರಾರು ಹೇಳಿದರು, ಆದರೆ ಅವರು ಒಳ್ಳೆಯವರಿದ್ದಾರೆ, ಬಹಳ ಒಳ್ಳೆಯ ಕೆಲಸ ಮಾಡುತ್ತಾರೆ ಎಂದು ಸರಕಾರದಿಂದ ಉತ್ತರ ಬಂತು. ಇರಬಹುದು, ಅವರು ತರುಣರು, ಉತ್ಸಾಹಿಗಳೂ ಇರಬಹುದು, ಆದರೆ ಆ ಜಿಲ್ಲೆಯನ್ನು ಕಷ್ಟ ಪರಿಸ್ಥಿತಿಯಲ್ಲಿ ಸುಧಾರಿಸುವುದು ಕಷ್ಟ, ಆ ಶಕ್ತಿ ಅವರಿಗಿಲ್ಲ. ನಮ್ಮ ಜಿಲ್ಲೆ ಬಹಳ ದೊಡ್ಡದಾಗಿದೆ, ಎಲ್ಲಕಡೆಯೂ ನಿಗಾಕೊಡುವುದು ಅವರಿಗೆ ಕಷ್ಟ. ಅವರು ಬ್ರಿಟಿಷರ ಕಾಲಕ್ಕೆ ಯಾವ ರೀತಿ ಅಧಿಕಾರ ಮಾಡುತ್ತಿದ್ದರೋ ಹಾಗೆಯೇ ಈಗಲೂ ಮಾಡುತ್ತಿದ್ದಾರೋ ಏನೋ ಎಂದು ನಮಗನಿಸುತ್ತದೆ. ಇಂಥ ಅಧಿಕಾರಿಗಳನ್ನು ಇಲ್ಲಿ, ಸರಕಾರದ ಹತ್ತಿರ ಇಟ್ಟುಕೊಂಡು, ಬೇರೆ ಅನುಭವವುಳ್ಳವರನ್ನು ನಮ್ಮ ಜಿಲ್ಲೆಗೆ ಹಾಕಿ, ಬರಗಾಲ ಇರುವ ಕಡೆ ನಿಗಾ ಕೊಟ್ಟು ರೈತರಿಗೆ ಸಹಾಯವಾಗುವಂತೆ ಮಾಡುತ್ತಾರೆಂದು ಆಶಿಸುತ್ತೇನೆ. ಬ್ಯಾಡಗಿ ತಾಲ್ಲೂಕಿನಲ್ಲಿ ಸರಿಯಾಗಿ ಪೀಕ್ ಪಹಣಿ ಮಾಡದೆ, ಜನರಿಗೆ ಅನ್ಯಾಯವಾಗಿದೆ. ಆದುದರಿಂದ ನಮ್ಮ ರೈತರಿಗೆ ಕಂದಾಯ ಸೂಟಿ ಕೊಡಬೇಕು. ಅವರಿಗೆ ಸರಿಯಾದ ಸಹಾಯ ಸಿಕ್ಕಬೇಕು. ಸರಕಾರದಿಂದ ತೆಗೆದುಕೊಂಡಿರುವ ಹಣವನ್ನು ವಾಪಸು ಕೊಡುವುದಕ್ಕೆ ಒಂದು ವರ್ಷ ಅವಧಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಜನರು ಊಟಕ್ಕೆ ಕಾಳು ಕೊಳ್ಳಬೇಕೆಂದರೆ ಅವರ ಕೈಲಿ ಹಣವಿಲ್ಲ. ಕೆಲಸ ಮಾಡಿ ಸಂಪಾದನೆ ಮಾಡೋಣವೆಂದರೆ ಅದಕ್ಕೆ ಅನುಕೂಲತೆ ಇಲ್ಲ, ಬೆಳೆ ತೆಗೆದುಕೊಳ್ಳುವುದಕ್ಕೆ ನೀರಾವರಿ ಅನುಕೂಲವಿಲ್ಲ; ಇಂತಹ ಪರಿಸ್ಥಿತಿಯಲ್ಲಿ ಸರಕಾರ ಹತ್ತು ಹಳ್ಳಿಗೆ ಒಂದು ಕಂಟ್ರೋಲ್ ಆಹಾರದ ಧಾನ್ಯದ ಅಂಗಡಿ ತೆರೆದು ಜನರಿಗೆ ಕಾಳನ್ನು ಒದಗಿಸಬೇಕು. ಅಲ್ಲದೆ ಅವರು ಕಾಳನ್ನು ಖರೀದಿ ಮಾಡುವುದಕ್ಕೆ ಹಣ ಸಿಕ್ಕುವಂತೆ ರಸ್ತೆ ಮತ್ತು ಕೆರೆ ಇಂತಹ ಕೆಲಸಗಳನ್ನು ಪ್ರಾರಂಭ ಮಾಡಿ ರೈತರಿಗೆ ಅನುಕೂಲ ಮಾಡಿಕೊಡುತ್ತಾರೆಂದು ಆಶೆ ಮಾಡಿಕೊಂಡು ಇನ್ನೊಂದು ವಿಷಯ ಹೇಳಿ ಮುಗಿಸುತ್ತೇನೆ. ನಮ್ಮ ತಾಲ್ಲೂಕಿನಲ್ಲಿ 14 ವರ್ಷಗಳ ಹಿಂದೆ ಫಾರೆಸ್ಟ್ ಭೂಮಿಯನ್ನು ಹರಿಜನರಿಗೆ ಕೊಟ್ಟಿದ್ದರು. ಈಗ ಅವರನ್ನು ಅಲ್ಲಿಂದ ಬಿಡಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆ ಬಡ ಜನರು ತಮ್ಮಲ್ಲಿದ್ದ ಬೇರೆ ಆಸ್ತಿಯನ್ನು ಖರ್ಚು

ಮಾಡಿ ಆ ಜಮೀನನ್ನು ವ್ಯವಸಾಯ ಮಾಡಿ ಉತ್ತಮ ಮಾಡಿದ್ದಾರೆ. ಆದಕಾರಣ ವ್ಯವಸಾಯ ಮಾಡುವ ಹರಿಜನರಿಗೇ ಅದನ್ನು ಕೊಡಬೇಕು. ವರ್ಷವರ್ಷವೂ ಪತ್ರ ಮಾಡಬೇಕೆನ್ನದೆ ಖಾಯಂ ಆಗಿ ಅವರಿಗೆ ಕೊಡಬೇಕೆಂದು ಮಂತ್ರಿಗಳಾದ ಶ್ರೀ ರಾಚಯ್ಯನವರು ಮತ್ತು ರೆವಿನ್ಯೂ ಮಂತ್ರಿಗಳಾದ ಕೃಷ್ಣಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಲದೆ ದೇಶದ ಸ್ವಾತಂತ್ರ್ಯದ ಸಲುವಾಗಿ ದುಡಿದ ಅನೇಕ ಜನರಿಗೆ ರಾಜಕೀಯ ಸಂತ್ರಸ್ತರೆಂದು ಅವರಿಗೆ ಜಮೀನು ಕೊಡುವುದಾಗಿ ಆಸೆ ತೋರಿಸಿದರು. ಅವರು ದೇಶಕ್ಕಾಗಿ ದುಡಿದು ತಮ್ಮ ಆಸ್ತಿಪಾಸ್ತಿಯನ್ನೆಲ್ಲ ಕಳೆದು ಕೊಂಡರು. ಅಂಥವರಿಗೆ ಜೀವನೋಪಾಯಕ್ಕೆ ಭೂಮಿಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಂಡು, ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಮಂಡಿಸಿರುವ ಭೂಕಂದಾಯ ಬೇಡಿಕೆಯ ಬಗ್ಗೆ ಮೊದಲು ಮಾತನಾಡಲು ಬಯಸುತ್ತೇನೆ. ಸರಕಾರ ಈ ವರ್ಷದಿಂದ ಸರ್‌ಚಾರ್ಜ್ ವಸೂಲ್ಮಾಡುವುದಿಲ್ಲ ಎಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಹಣಕಾಸಿನ ಮಂತ್ರಿಗಳು ಒಂದು ಮಾತು ಹೇಳಿದರು. ಸರ್ವೆ ಸೆಟಲ್‌ಮೆಂಟ್ ಕೆಲಸ ಮುಗಿಯುತ್ತಾ ಬಂದಿದೆ. ಆದುದರಿಂದ ಸರ್‌ಚಾರ್ಜ್ ಮೂಲಕ ಬರತಕ್ಕಂಥ ಹಣ ಅದನ್ನು ನಾವು ಹೊಸ ಕಂದಾಯ ಮೂಲಕ ಪಡಕೊಳ್ಳಲು ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ. 1963—64ರಲ್ಲಿ ಲ್ಯಾಂಡ್ ರೆವಿನ್ಯೂ 7,87,66,000 ಇತ್ತು. 1964—65 ರಲ್ಲಿ 7,82,73,000 ಎಂದು ಅಂದಾಜು ಮಾಡಲಾಗಿದೆ. ವಾಸ್ತವವಾಗಿ ಈ ಸರ್‌ಚಾರ್ಜ್ ಹಣವನ್ನು ಪೂರ್ತಿ ಪಡಕೊಳ್ಳುವುದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೆ ನಮಗೆ ಗೊತ್ತಿಲ್ಲ. ಸುಮಾರು 7 ಲಕ್ಷ ಹೆಚ್ಚುವರಿ ಪಡೆಯುತ್ತೇವೆಂದು ಹಣಕಾಸಿನ ಮಂತ್ರಿಗಳು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಇದು ಬರೀ ಸರಕಾರದ ಆಶಯವಾಗುತ್ತದೆಂದು ಕಾಣುತ್ತದೆ. ಒಂದು ಮಸೂದೆ ಕೂಡ ತರುತ್ತೇವೆಂದು ಹೇಳಿದ್ದರು. ಆದರೆ ಪಾರ್ಟಿ ಮೀಟಿಂಗನಲ್ಲಿ ವಿರೋಧ ಬಂದುದರಿಂದ ಇದನ್ನು ಕೈ ಬಿಟ್ಟಿದ್ದಾರೆಂದು ತಿಳಿದು ಬಂದಿದೆ. ಇತ್ತೀಚೆಗೆ ರಾಜ್ಯದಲ್ಲಿ ಹೊಸ ಭೂಕಂದಾಯ ಕಾನೂನು ಮಾಡಿದ್ದಾರೆ. ಆದರೆ ಅದನ್ನು ಯಾವಾಗ ಜಾರಿಗೆ ಕೊಡುತ್ತಾರೋ ಎಂಬುದು ನಿಗದಿ ಇಲ್ಲ. ಇವತ್ತಿನ ದಿವಸ ಮುಖ್ಯವಾದ ವಿಚಾರ ಅಂದರೆ ಭೂಸುಧಾರಣೆ. ಸ್ವಾತಂತ್ರ್ಯನಂತರ ಭೂಸುಧಾರಣೆ ತರುವುದಕ್ಕೆ ಸರಕಾರ ಬಹಳ ಶ್ರಮಪಟ್ಟಿದೆ. ವಾಸ್ತವವಾಗಿ ನೋಡಿದರೆ ಭೂಸುಧಾರಣೆ ಕಾನೂನು ಜಾರಿಗೆ ಬಂದು ಈಗಾಗಲೇ ಹತ್ತು ವರ್ಷಗಳಾಗಬೇಕಾಗಿತ್ತು. ಭೂಸುಧಾರಣೆ ಮುಖ್ಯ ಉದ್ದೇಶ ಏನು ಅಂದರೆ ಒಂದೇ ಮಾತಿನಲ್ಲಿ ಹೇಳುವುದಾದರೆ: ಉಳುಮೆ ಮಾಡತಕ್ಕಂಥವನಿಗೂ ಭೂ ಒಡೆಯನಿಗೂ ನಡುವೆ ಮಧ್ಯವರ್ತಿಯಾಗಿರುವುದನ್ನು ತೊಡೆದುಹಾಕುವುದೇ, ಅದರ ಅರ್ಥ. ಉಳುವವನೇ ಭೂ ಒಡೆಯನಾಗಬೇಕು. ಮೈಸೂರು ರಾಜ್ಯದಲ್ಲಿ ರೈತವಾರಿ ಪದ್ಧತಿ ಇದೆ. ಹತ್ತು ಸಾವಿರ ರೂಪಾಯಿ ಕಂದಾಯ ಕೊಡತಕ್ಕಂಥ ಜಮೀನುದಾರರು ಇದ್ದಾರೆ. ಅಂಥವರು ಹೆಚ್ಚು ಜಮೀನು ಕೊಂಡುಕೊಳ್ಳುತ್ತಾ ಇದ್ದಾರೆ. ಮಲೆನಾಡಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇಣಿ ಪದ್ಧತಿ ಇದೆ. ಅದು ಮುಂದುವರಿದುಕೊಂಡು ಹೋಗುತ್ತಾ ಇದೆ. ಇವತ್ತಿನ ದಿನ ಭೂಸುಧಾರಣೆ ಜಾರಿಗೆ ತರುವುದನ್ನು ಬಹಳ ತಡ ಮಾಡುತ್ತಿರುವುದರಿಂದ ಗೇಣಿದಾರರಿಗೆ ಬಹಳ ತೊಂದರೆಯಾಗಿದೆ. ಜಮೀನುದಾರರು ಭೂಮಿ ಬಿಡಿಸಿಕೊಳ್ಳುತ್ತಿರುವುದರಿಂದ ಬಹಳ ಜನ ರೈತರು ಕೂಲಿಕಾರರಾಗುತ್ತಿದ್ದಾರೆ. ಸದ್ಯಕ್ಕೆ ಇರತಕ್ಕ ಕಾನೂನನ್ನು ಸಹ ಸರಿಯಾಗಿ ಅನ್ವಯಿಸುತ್ತಿಲ್ಲ. ಪದೇ ಪದೇ ಭೂಸುಧಾರಣೆ ಕಾನೂನು ಜಾರಿಗೆ ತರುತ್ತೇವೆಂದು ಮಾತ್ರ ಮಾತನಾಡುತ್ತಾರೆ. ಜಾರಿಗೆ ಬಾರದೇ ಇರುವುದರಿಂದ ಜನರಿಗೆ ಕಷ್ಟವಾಗಿದೆ. ನಮ್ಮ ದೇಶದಲ್ಲಿ ಶೇಕಡ 70 ರಷ್ಟು ಜನ ಕೃಷಿ ಅವಲಂಬಿಸಿದ್ದಾರೆ ಎಂಬುದನ್ನು ಗಮನಿಸಬೇಕು. ಕೈಗಾರಿಕೆಗಳನ್ನು ಸೃಷ್ಟಿ ಮಾಡಿ ಹಳ್ಳಿಗಳಲ್ಲಿ ಇರತಕ್ಕಂಥ ಕೃಷಿ ಕೂಲಿಕಾರರಿಗೆ ಜಮೀನು ಇಲ್ಲದೇ ಇರತಕ್ಕಂಥವರಿಗೆ ಬೇರೆ ಕೆಲಸ ಒದಗಿಸಿಕೊಡಬೇಕಾಗಿದೆ. ಇತ್ತೀಚೆಗೆ ಜಮೀನು ಕೊಡಿ ಎಂದು ಸಾವಿರಾರು ಅರ್ಜಿಗಳು ಸರಕಾರಕ್ಕೆ ಬರುತ್ತಿವೆ. ವಿಲೇವಾರಿ ಸರಿಯಾಗಿ ಆಗುತ್ತಿಲ್ಲ. ನಮ್ಮ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ದರಖಾಸ್ತು ಅರ್ಜಿಗಳನ್ನು ಪ್ರಿಂಟ ಮಾಡಿ ಇಟ್ಟುಕೊಂಡಿರುವುದಕ್ಕೆ ಸಾವಿರಾರು ರೂಪಾಯಿ ಖರ್ಚು ಮಾಡಿದ್ದಾರೆ. ಪ್ರಿಂಟ್ ಮಾಡಿರುವ ಫಾರ್ಮ್ ಮೇಲೆ ಉತ್ತರ ಸಹ ಕೊಡುತ್ತಾರೆ. ಇದು ಹೀಗೆ ನಡೆಯುತ್ತಿದೆ. ಹಾಗಾದರೆ ಯಾವ ತರಹ ಭೂಸುಧಾರಣೆ ತರುತ್ತೀರಿ? ನಿಮ್ಮ ಡಿಜೈನ್ ಏನು? ಉದ್ದೇಶ ಏನು? ಇದನ್ನು ಯಾರೂ ಯೋಚನೆ ಮಾಡಿಲ್ಲ ಮತ್ತು ಒಂದು ಸ್ಪಷ್ಟವಾದ ಚಿತ್ರ ದೇಶದ ಮುಂದೆ ಇಟ್ಟಿಲ್ಲ. ಇದು ದುರದೃಷ್ಟಕರ. ವ್ಯವಸಾಯ ಉತ್ಪತ್ತಿ ಬಿದ್ದುಹೋಗುತ್ತಿದೆ. ರೈತನ ಜೀವನ ಇನ್ನಷ್ಟು ಕೆಡುವುದಕ್ಕೆ ಸಹಾಯವಾಗಿದೆ. ಆದುದರಿಂದ ರಾಜ್ಯ ಸರಕಾರಕ್ಕೆ ಕೊನೆಯದಾಗಿ ಹೇಳುವುದು ಏನೆಂದರೆ; ನೆಪಗಳನ್ನು ಮುಂದೆ ಇಡದೆ ಏನು ತಿದ್ದುಪಡಿ ಮಾಡಬೇಕಾಗಿದೆಯೋ ಅದನ್ನು ಮಾಡಿ ಭೂಸುಧಾರಣೆ ಕಾನೂನು ಬೇಗನೆ

(ಶ್ರೀ ಎಸ್. ಗೋಪಾಲಗೌಡ)

ಜಾರಿಗೆ ಬರುವಹಾಗೆ ಮಾಡಬೇಕು. ರಾಜ್ಯ ಸರಕಾರದಲ್ಲಿಯೂ ಕೇಂದ್ರ ಸರಕಾರದಲ್ಲಿಯೂ ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿದೆ. ಕೇಂದ್ರ ಸರಕಾರ ತೀರ್ಮಾನ ಮಾಡಿದರೆ ಎಲ್ಲಾ ರಾಜ್ಯಗಳಲ್ಲಿಯೂ ಅದು ತೀರ್ಮಾನವಾಗುತ್ತದೆ. ಏಕ ಮಾಖವಾದ ಕಾಯಿದೆಯನ್ನು ಕೇಂದ್ರದವರೇ ಏಕೆ ಮಾಡಬಾರದು ಎಂದು ಕೇಳುತ್ತೇನೆ. ಕೇಂದ್ರದವರು ಒಂದು ಕಾನೂನು ತಂದು ದೇಶಕ್ಕೆಲ್ಲಾ ಅನ್ವಯಿಸಿಕೊಂಡು ಹೋಗುವಂತೆ ಮಾಡಬೇಕು ಅಂದರೆ ಈ ಭೂಸುಧಾರಣೆ ಕೆಲಸ ಬೇಗ ಆಗುತ್ತದೆ ಎಂದು ಅನಿಸುತ್ತದೆ. ದಿನದಿನಕ್ಕೂ ರೈತರ ಸ್ಥಿತಿ ಕೆಟ್ಟು ಹೋಗುತ್ತಾ ಇದೆ. ಇದರಿಂದ ಕೆಲವುಮಟ್ಟಿಗೆ ಕ್ರಾಂತಿಕಾರಕ ಪರಿಸ್ಥಿತಿ ಕೂಡ ಉಂಟಾಗಬಹುದು. ಈಗ ತಾನೆ ಶ್ರೀಮತಿ ಸಿದ್ಧಮ್ಮ ಮೈಲಾರರವರು ಮಾತನಾಡಿದರು. ಅವರ ಊರಿನಿಂದ ನನಗೆ ಅನೇಕ ಅರ್ಜಿಗಳು ಬಂದಿವೆ. ಅಲ್ಲಿ ಹತ್ತಾರು ವರ್ಷಗಳಿಂದ ಜಮೀನು ಮಾಡುತ್ತಾ ಇದ್ದ ಹರಿಜನರು ಮತ್ತು ಬಡವರಾಗಿರತಕ್ಕ ಕೃಷಿಯನ್ನರ ಮೇಲೆ ಇವತ್ತು ಒಮ್ಮೆಲೇ ವಸೂಲಾತಿ ಕ್ರಮ ಆರಂಭ ಮಾಡಿದ್ದಾರೆ. ಇವತ್ತು ಆ ಜಿಲ್ಲೆಯಲ್ಲಿ ಸ್ವಲ್ಪ ಜೋಳ ಬೆಳೆದುಕೊಂಡು ಜೀವನ ಮಾಡುತ್ತಿದ್ದಾರೆ. ಸರ್ಕಾರಿ ನೌಕರರು ಅವರನ್ನು ಶಿಕಾರಿ ಮಾಡುತ್ತಿದ್ದಾರೆ. ಅವರು ಎಲ್ಲಿಗೆ ಹೋಗಬೇಕೋ ಗೊತ್ತಿಲ್ಲ. ಅವರ ಮನೆ ಮಾರಾಟ ಮಾಡಿದರೂ 30 ರೂಪಾಯಿ ಬರುವುದಿಲ್ಲ. 20-50–100-150 ಕೊಡಿ ಎಂದು ರೈತರನ್ನು ಗೋಳು ಹುಯಿದುಕೊಳ್ಳುತ್ತಿದ್ದಾರೆ. ಈಗಂತೂ ಟಿ. ಟಿ. ಹಾಕಿ, ಮಲೆನಾಡಿನಲ್ಲಿ ಒಂದಕ್ಕೆ ನೂರು ಪಟ್ಟು ವಸೂಲು ಮಾಡುತ್ತಿದ್ದಾರೆ. ಈಗ ಒಬ್ಬ 5 ರೂಪಾಯಿ ಕಂದಾಯದ ಭೂಮಿ ಮಾಡುತ್ತಾ ಇದ್ದರೆ, ಅದಕ್ಕೆ 100 ರಷ್ಟು, 10-25-30 ರಷ್ಟು ತಕರಾರು ತಃಖ್ತೆ ಹಾಕಿದ್ದಾರೆ. ಒಬ್ಬೊಬ್ಬ ರೈತ 150 ರೂಪಾಯಿ ಕೊಡಬೇಕು, ಇಲ್ಲವಿದ್ದರೆ ಜಮೀನು ಇಡಬೇಕಾಗುತ್ತದೆ. ಸ ತಃ ಇಂಥ ಟಿ. ಟಿ. ಪ್ರೋತ್ಸಾಹ ಮಾಡಿದ್ದಾರೆ ಶಾನುಭೋಗರು, ಪಟೇಲರು, ರೆವಿನ್ಯೂ ಇಲಾಖೆಯವರು ಒಬ್ಬ ಶಾನುಭೋಗನಿಗೆ ಒಂದು ತಾಲ್ಲೂಕಿನಲ್ಲಿ 500 ಟಿ. ಟಿ. ಕೇಸುಗಳಿದ್ದರೆ, ಸರ್ಕಾರಕ್ಕೆ ಒಂದು ಸಾವಿರ ರೂಪಾಯಿ ಬಂದರೆ, ಈ ಜನರಿಗೆ 500 ರೂಪಾಯಿ ಮಾಮೂಲು ಬಂದ ಹಾಗೆ ಬರುತ್ತದೆ. ಇಂಥ ಜಮೀನು ಕೊಡುತ್ತೇವೆ, ಇಂಥದು ಕೊಡುವುದಿಲ್ಲ. ಇಂಥದು ಬಿಡಬೇಕು, ಇಂಥದು ಮಾಡಿಕೊಳ್ಳಬಹುದು ಎಂತ ಒಂದು ಪ್ರೋಸಿಸಿಂಗನ್ನು ರೆವಿನ್ಯೂ ಇಲಾಖೆಯವರು ಮಾಡುತ್ತಿಲ್ಲ. ರಾಮನಗರಕ್ಕೆ ಕಳೆದ ವರ್ಷ ಬಂದಿದ್ದ ಮಾನ್ಯ ಮುಖ್ಯ ಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. 500 ಎಕರೆ ಮೇಲೆ ಜಮೀನು ಇದ್ದರೆ, ಖಾತೆ ಹಾಕಿಸಿಕೊಡುತ್ತೇವೆ ಎಂದು. ಇವತ್ತಿನವರೆಗೂ ರೆವಿನ್ಯೂ ಮಂತ್ರಿಗಳ ದೃಷ್ಟಿ ಆ ಕಡೆ ಹರಿದಿಲ್ಲ. ಈಗಾಗಲೇ ಕೆಲವರು ಬಲಿಷ್ಠರು ಸರ್ಕಾರಿ ಜಮೀನನ್ನು ಆಕ್ರಮಿಸಿಕೊಂಡು ಹೋಗುತ್ತಿದ್ದಾರೆ. ಅವರನ್ನು, ಬಿಡಿ ಅಂದರೆ, "ದುಡಿದು ನಾವು ಮಾಡಿದ್ದೇವೆ, ನಮ್ಮದು" ಎಂದು ಹೇಳುತ್ತಿದ್ದಾರೆ. ಮೈಸೂರು ರಾಜ್ಯದಲ್ಲಿ ಹೀಗಾದರೆ, ರೆವಿನ್ಯೂ ಇಲಾಖೆಯಲ್ಲಿ ಇದನ್ನು ಸರಿಪಡಿಸತಕ್ಕಂಥ ಅಧಿಕಾರಿಗಳು ಇಲ್ಲವೇ? ಈ ಮನೋಭಾವ ಅಧಿಕಾರಿಗಳಲ್ಲಿದ್ದರೆ, ಇದು ರಾಜಾಖಾತೆ ಅಲ್ಲದೇನೆ ಮತ್ತೇನು? ಇದು ಎಲ್ಲಿಯವರೆಗೆ ನಡೆಯಬೇಕು, ಇದಕ್ಕೆ ಯಾವಾಗ ಮುಕ್ತಾಯ? ಇದು ಯಾವಾಗ ಸರಿಹೋಗುತ್ತದೆಯೋ ನನಗಂತೂ ಗೊತ್ತಾಗುವುದಿಲ್ಲ. ಈ ಬಗ್ಗೆ ಎಷ್ಟು ಹೇಳಿದರೂ ಕಡಿಮೆ. ಭೂಮಿ ಬೇಡಿ ಬರತಕ್ಕಂಥ ರೈತರಿಗೆ 2-3 ಎಕರೆ ಭೂಮಿಯನ್ನು ಕೊಡುವುದಕ್ಕೂ ಆಗುತ್ತಾ ಇಲ್ಲ. ಅದೇರೀತಿ ಹೋಲ್ಡಿಂಗ್ಸ್ ಒಟ್ಟು ಮಾಡತಕ್ಕ ಮತ್ತು ಆರ್ಥಿಕ ಹಿಡುವಳಿಗಳನ್ನು ಅಥವಾ ಒಂದು ಫ್ಯಾಮಿಲಿ ಹೋಲ್ಡಿಂಗನ್ನು ರಚನೆ ದಿಶೆಯಲ್ಲಿ ಯಾವ ಕೆಲಸವನ್ನೂ ರಾಜ್ಯ ಸರ್ಕಾರ ಮಾಡುತ್ತಾ ಇಲ್ಲ. ಯಾವ ಹತೋಟಿಯನ್ನೂ ಇಡುತ್ತಾ ಇಲ್ಲ.

ಕೋ-ಆಪರೇಟೀವ್ ಫಾರ್ಮಿಂಗ್ ಮಾಡಬೇಕು ಅಂತ ನಾಗಪುರದಲ್ಲಿ ನಿರ್ಣಯ ಮಾಡಿದರು. ಇವತ್ತು ಪ್ರದರ್ಶನಕ್ಕೆ ಅನ್ನುವ ರೀತಿಯಲ್ಲಿ ಕೆಲವು ಫಾರಮ್ಮುಗಳನ್ನು ಇಟ್ಟುಕೊಂಡಿದ್ದಾರೆ. ಈ ಫಾರಮ್ಮುಗಳಲ್ಲಿ ಕೆಲಸ ಮಾಡುವ ನೌಕರರಿಗೆ ಯಾವ ಸಂಬಳ ಕೊಡಬೇಕು, ಎಷ್ಟು ಗಂಟೆ ಕೆಲಸ ಮಾಡಬೇಕು. ಅವನನ್ನು ಖಾಯಂ ಮಾಡಬೇಕೆ ಬೇಡವೇ ಎಂಬುದನ್ನು ಸರ್ಕಾರದವರು ಇನ್ನೂ ಗಮನಕ್ಕೆ ತೆಗೆದುಕೊಂಡಿಲ್ಲ. ಕೆಲವು ಫಾರಮ್ಮುಗಳು ಪ್ರಾರಂಭವಾಗಿ 5-10 ವರ್ಷವಾದರೂ, ಅವುಗಳ ಗತಿ ಏನಾಯಿತು ಎಂದು ಹೇಳುತ್ತಿಲ್ಲ; ಅವುಗಳನ್ನು ನೋಡುವವರೇ ಇಲ್ಲ. ಈ ಕೋ-ಆಪರೇಟೀವ್ ಫಾರ್ಮಿಂಗ್ ಬಗ್ಗೆ ಒಂದು ಸಲಹೆ ಕೊಡಬಯಸುತ್ತೇನೆ. ಫಾರೆಸ್ಟ್ ಮತ್ತು ರೆವಿನ್ಯೂ ಇಲಾಖೆಯವರು ಸೇರಿ ರಾಜ್ಯದಲ್ಲಿ ಎಷ್ಟೆಷ್ಟು ತಾಲ್ಲೂಕಿನಲ್ಲಿ ಎಷ್ಟೆಷ್ಟು ಎಕರೆ ಇದೆಯೆಂದು ಲೆಕ್ಕ ಮಾಡಿದ್ದಾರೆ. ಆ ಲೆಕ್ಕವೂ ಸರಿ ಇಲ್ಲ. ನಮ್ಮಲ್ಲಿ ಎಷ್ಟು ಖರಾಬು ಇದೆ ಎಂದು ಯಾವುದೋ ಲೆಕ್ಕ ಕೊಟ್ಟಿದ್ದಾರೆ. ಅದು ಎಲ್ಲಿದೆ, ಗುಡ್ಡವೋ, ಬೆಟ್ಟವೋ, ಕಾಡೋ, ಉಳುಮೆಗೆ ಬರುತ್ತದೆಯೋ, ಎಂದು ಕೇಳಿದರೆ ತಹಸೀಲುದಾರರಿಗೂ ಹೇಳುವುದಕ್ಕೆ ಬರುವುದಿಲ್ಲ, ಈ ಎಲ್ಲಾ ಲೆಕ್ಕ ತೆಗೆದು

ಕೊಂಡರೆ, 4 ಸಾವಿರ ಎಕರೆ ನಮ್ಮ ತಾಲ್ಲೂಕಿನಲ್ಲಿದೆ. ಅದರ ಪ್ರಕಾರ ನೋಡಿ. ಎಲ್ಲಿ 50-100-200-300-500 ಎಕರೆ ಇದೆ, ಅಂಥ ಕಡೆಗಳಲ್ಲಿ ಬೇಸಾಯದಲ್ಲಿ ಕೂಲಿಗಾರರಾಗಿರತಕ್ಕ ಹರಿಜನರು, ಒಂದು ಸಹಕಾರ ಬೇಸಾಯದ ಮೇಲೆ, ಸಂಯುಕ್ತ ಬೇಸಾಯದ ಮೇಲೆ ವ್ಯವಸಾಯ ನಿರ್ವಹಿಸುವಂತೆ ಮಾಡಿ ಅವರಿಗೆ ನೆರವೂ ನೀಡಿ ಅವರಿಗೆ ಎತ್ತುಗಳನ್ನು ಕೊಡಬೇಕು; ಯಂತ್ರಗಳನ್ನು ಕೊಡಬೇಕು, ಉಳುಮೆ ಮಾಡುವುದಕ್ಕೆ ಎಲ್ಲಾ ಸಹಾಯ ಮಾಡಬೇಕು. ಸರ್ಕಾರ ಇಷ್ಟಪಟ್ಟರೆ ನಾಲ್ಕಾರು ವರ್ಷಗಳಲ್ಲಿ ಸಾವಿರಾರು ಕಾಲೋನಿಗಳನ್ನು, ವಸಾಹತುಗಳನ್ನು, ಮಾಡಬಹುದು. ಸಂಯುಕ್ತ ಬೇಸಾಯವಾಗಲಿ, ಕೋ-ಆಪರೇಟೀವ್ ಫಾರ್ಮಿಂಗ್ ಆಗಲಿ ಮಾಡುವುದರಿಂದ ಸರ್ಕಾರದವರ ಸಮಸ್ಯೆಯೂ ಬಗೆ ಹರಿಯುತ್ತದೆ, ಅವರನ್ನು ನೆಲೆಗೊಳಿಸಿ, ಅವರಿಗೆ ಉದ್ಯೋಗ ದೊರಕಿಸಿದ ಹಾಗೆ ಆಗುತ್ತದೆ. ಜೊತೆಗೆ ಪ್ರೊಡಕ್ಷನ್ನೂ ಹೆಚ್ಚು ಮಾಡಿದಂತಾಗುತ್ತದೆ. ಈ ಎರಡು ಸಮಸ್ಯೆಗಳನ್ನೂ ಕೇವಲ ಎರಡು ಎಕರೆ ಕೊಡುವುದರಿಂದ ಬಗೆ ಹರಿಸಬಹುದು, ಅದರಿಂದ ದರಖಾಸ್ತು ಹಾಕುವ ಸಮಸ್ಯೆಯನ್ನು ಬಗೆ ಹರಿಸಿದಂತಾಗುತ್ತದೆ.

ಇನ್ನು "ಮಿಸಲೇನಿಯಸ್" ಅನ್ನುವುದರಲ್ಲಿ ನಾನಾ ಇಲಾಖೆಗಳು ಸೇರಿವೆ. ಅದರಲ್ಲಿ ಡೈರೆಕ್ಟರ್ ಆಫ್ ಇನ್‌ಫರ್ಮೇಷನ್ ಇಲಾಖೆಯೂ ಸೇರಿದೆ, ಅದು ಏಕೆ ಸೇರಿದೆ ಗೊತ್ತಾಗಲಿಲ್ಲ. ವೆಟರಿನರಿ ಇಲಾಖೆ, ವೆಟರಿನರಿ ಕಾಲೇಜೂ ಸೇರಿದೆ. ವಿದ್ಯಾ ಇಲಾಖೆಗೆ ಸಂಬಂಧಪಟ್ಟಿದ್ದನ್ನು ಬೇರ್ಪಡಿಸುವುದು ಒಳ್ಳೆಯದು. ಸಂಸ್ಕೃತ ಕಾಲೇಜೂ ನಿಮ್ಮ ಇಲಾಖೆಯಲ್ಲಿ ಸೇರಿಕೊಂಡು ಬಿಟ್ಟಿದೆ. ವಿದ್ಯಾ ಸಂಸ್ಥೆಗಳನ್ನು ಬೇರ್ಪಡಿಸಿ ಅವುಗಳ ಆಡಳಿತವನ್ನು ವಿದ್ಯಾ ಇಲಾಖೆಗೆ ವಹಿಸುವುದು ಒಳ್ಳೆಯದು. ಇದು ಹಳೇ ಶಾನುಭೋಗರ ಕಡತ ಇದ್ದ ಹಾಗೆ ಇದೆ ; ಇದರಲ್ಲಿ ಪರಿವರ್ತನೆ ಕಾಣುವುದಿಲ್ಲ. ಈ ಇಲಾಖೆಗಳು ಹೆಚ್ಚಾಗಿವೆಯೇ ಹೊರತು, ಸರ್ಕಾರಿ ಲೆಕ್ಕದ ಕ್ರಮದಲ್ಲಿ ಪರಿವರ್ತನೆಯಾಗುತ್ತಾ ಇಲ್ಲ. ಆದ್ದರಿಂದ ಈ ಕಾಲೇಜುಗಳನ್ನು ಬೇರ್ಪಡಿಸಿ, ಒಂದೇ ಕಡೆ ಸರಿಯಾದ ಲೆಕ್ಕ ಸಿಗುವಂತೆ ಮಾಡುವುದು ಒಳ್ಳೆಯದು.

ಮುಜರಾಯಿ ಇಲಾಖೆ ವಿಷಯದಲ್ಲಿ, " ಮಿಸಲೇನಿಯಸ್ " ಬಗ್ಗೆ, ಏನೇನೋ ಕೆಲವೊಂದು ವಿಷಯಗಳನ್ನು ಹೇಳಬೇಕೆಂದಿದ್ದ. ಈಗ ಸಮಯವಿಲ್ಲದೆ ಯಿರುವುದರಿಂದ, ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಇವತ್ತು ಇಲ್ಲಿ ಇಟ್ಟಿರುವ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ.

ಇವತ್ತಿನ ಬೇಡಿಕೆಗಳಲ್ಲಿ ಅನಿಮಲ್ ಹಸ್ಬೆಂಡರಿಗೆ ಸಂಬಂಧಪಟ್ಟ ಖಾತೆ ಸಹ ಇದೆ. ಅನಿಮಲ್ ಹಸ್ಬೆಂಡರಿಗೆ ಸಂಬಂಧಪಟ್ಟ ಮಾನ್ಯ ಸಚಿವರು ದೆಹಲಿಯಲ್ಲಿ ಇರುವಾಗ ಬಹಳ ಪರಿಷ್ಕೃತ ರೀತಿಯಲ್ಲಿ ಈ ಇಲಾಖೆಯ ಬಗ್ಗೆ ಯೋಚಿಸುತ್ತಿದ್ದರು. ಅವರು ನಮ್ಮ ರಾಜ್ಯಕ್ಕೆ ಬಂದಮೇಲೆ ಆ ಅನುಭವ, ಪ್ಲಾನವನ್ನು ಉಪಯೋಗಿಸಿಕೊಂಡು, ಆ ಸ್ಕೀಮುಗಳನ್ನು ಇಲ್ಲಿ ಕಾರ್ಯಗತ ಮಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆಂದು ಹೇಳುವುದಕ್ಕೆ ಬಹಳ ಸಂತೋಷವಾಗುತ್ತದೆ. ಉದಾಹರಣೆಗೆ ಅವರು 1957ನೆ ಇಸವಿಯಲ್ಲಿ ಅಲ್ಲಿಂದ ಬಂದಾಗ, ಹಾಲು, ಮೊಸರು, ಬೆಣ್ಣೆಗಳ ಅವಶ್ಯಕತೆಯನ್ನು ಪೂರೈಕೆ ಮಾಡಬೇಕೆಂದು ಹಾಹಾಕಾರವಿತ್ತು. ಇವರ ಸ್ವಂತ ಪ್ರಯತ್ನದಿಂದ ಬೆಂಗಳೂರಿನಲ್ಲಿ ಒಳ್ಳೆಯ ಹಾಲು, ಮೊಸರು, ಬೆಣ್ಣೆಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತಿದೆ. ಮಿಲ್ಕ್ ಸಪ್ಲೈ ಸ್ಕೀಮನ್ನು ವ್ಯವಸ್ಥಿತವಾಗಿ ಕೈಗೊಂಡು ಕೆಲವು ಕಡೆ ಮಾಡಿದ್ದಾರೆ. ಮಂಗಳೂರಿನಲ್ಲಿ ಮಿಲ್ಕ್ ಸಪ್ಲೈ ಸ್ಕೀಮಿಗೆ 2,40,000 ರೂಪಾಯಿ ಒದಗಿಸಿದ್ದಾರೆ ಇದು ಸಾಲದು, ಇನ್ನೂ ಹೆಚ್ಚಿನ ಹಣ ಒದಗಿಸಿ ತೀವ್ರ ಗತಿಯಲ್ಲಿ ಹೆಚ್ಚು ಹಾಲು, ಬೆಣ್ಣೆ, ಮೊಸರು ಸಿಗುವಂತೆ ಆಗಬೇಕು ಅಂತ ಹೇಳಿ ಒಂದು ಮಾತನ್ನು ಹೇಳುತ್ತೇನೆ.

ಮೊನ್ನೆ ಇಲ್ಲಿ ಉತ್ತರ ಹೇಳುತ್ತಾ 25 ಸಾವಿರ ಜಾನುವಾರಿಗೆ ಒಂದು ಗೋ ಆಸ್ಪತ್ರೆ ತೆಗೆಯಲು ಯೋಜನೆ ಇದೆಯೆಂದು ಹೇಳಿದರು. ಮಲೆನಾಡು ಪ್ರದೇಶಗಳಲ್ಲಿ, ಕೋಸ್ಟ್ ಲೈನಿನಲ್ಲಿ, 10 ಚದುರ ಮೈಲಿಗೆ ಎಷ್ಟು ಜಾನುವಾರು ಇರಬೇಕೋ, ಅಷ್ಟು 20-30 ಚದುರ ಮೈಲಿಯಲ್ಲಿ ಇರುತ್ತವೆ. ಏಕೆಂದರೆ ಅಲ್ಲಿ ಮನೆಗಳು ಬಹಳ ದೂರ ದೂರ ಇರುತ್ತವೆ. ಹದಿನೈದು ಸಾವಿರಕ್ಕೆ ಒಂದು ಆಸ್ಪತ್ರೆಯನ್ನು ಮಾಡುವಂಥ ಅವಕಾಶವನ್ನು ಇಂಥ ಪ್ರದೇಶಗಳಲ್ಲಿ ಮಾಡಿಕೊಡಬೇಕು. ಇಂಥ ಪ್ರದೇಶಗಳಲ್ಲಿ ಜಾನುವಾರುಗಳಿಗೆ ರೋಗ ಬಂದರೆ ಸಂಬಂಧಪಟ್ಟ ಆಸ್ಪತ್ರೆಯ ಆಫೀಸರು ಬಹಳ ದೂರ ಬೇಗನೆ ಹೋಗಲಿಕ್ಕೆ ಆಗುವುದಿಲ್ಲ. ತೆರೆದಿರುವಂಥ ವೆಟರ್ನರಿ ಹಾಸ್ಪಿಟಲ್ಲುಗಳಲ್ಲಿ ಡಾಕ್ಟರುಗಳು ಇಲ್ಲ. ಯಾವ ಯಾವ ಆಸ್ಪತ್ರೆಗಳಲ್ಲಿ ಡಾಕ್ಟರುಗಳು ಇಲ್ಲವೋ, ಅಲ್ಲಿ ಅವರನ್ನು ಇನ್ನು ಒಂದು ವರ್ಷದಲ್ಲಿಯಾದರೂ ಕೂಡಲೆ ನೇಮಿಸಿ, ಈ ಆಸ್ಪತ್ರೆಗಳು ನಿಜವಾಗಿ ಪ್ರಯೋಜನಕರವಾಗುವಂತೆ ಮತ್ತು ಅವುಗಳನ್ನು ತೆರೆದ ಉದ್ದೇಶ ಸಾರ್ಥಕವಾಗುವಂತೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಇನ್ನು ಅನಿಮಲ್ ಹಸ್ಬೆಂಡರಿ ಸಂಬಂಧದಲ್ಲಿ ಹೇಳುವಾಗ "other schemes" ಅಂತ ಹೇಳಿ, ಅದಕ್ಕೆ 5,85,000 ರೂಪಾಯಿ ಒದಗಿಸಿದ್ದಾರೆ. ನಮ್ಮ ಜಿಲ್ಲೆಯಲ್ಲಿ ನಮ್ಮ ಕಾನ್‌ಸ್ಟಿಟ್ಯೂಯನ್ಸಿಗೆ ಗೋ ಆಸ್ಪತ್ರೆ ಎಷ್ಟೋ ಸಾಲಿನಿಂದ ಕೇಳುತ್ತಾ ಇದ್ದೇವೆ. ಅದು ಬಹಳ ಅಗತ್ಯವಿದೆ. ಆದ್ದರಿಂದ ಈ ವರ್ಷದಲ್ಲಿಯೇ ಅಲ್ಲಿಗೆ ಒಂದು ಗೋ ಆಸ್ಪತ್ರೆ ಒದಗಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಕೊಯಿಲಾ ಕ್ಯಾಟಲ್ ಫಾರಂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡುತ್ತಾ ಇದೆ. ಅದಕ್ಕೆ 3-4 ಮೈಲಿ ದೂರದಿಂದ, ಉಪ್ಪಿನಂಗಡಿಯಿಂದ ಎಲೆಕ್ಟ್ರಿಕ್ ಲೈನು ಬರಬೇಕು. ಈ ನಾಲ್ಕು ಮೈಲಿ ಲೈನು ಹಾಕಿ, ವಿದ್ಯುಚ್ಛಕ್ತಿ ಒದಗಿಸಿದರೆ, ಪಕ್ಕದಲ್ಲಿ ಹರಿಯುವ ನೀರನ್ನು ಉಪಯೋಗಿಸಿ 600-700 ಎಕರೆ ಭೂಮಿಯಲ್ಲಿ ಹಸಿ ಹುಲ್ಲು ಬೆಳೆಸಿ, ಜಾನುವಾರುಗಳಿಗೆ ಹೆಚ್ಚು ಹುಲ್ಲಿನ ಉತ್ಪತ್ತಿ ಪಡೆಯಲಿಕ್ಕೆ ಸಾಧ್ಯವಾಗುತ್ತದೆ.

ನಮ್ಮ ಜಿಲ್ಲೆಯಲ್ಲಿ ದನಗಳ ದೊಡ್ಡಿ ಈಗೀಗ ಬಹಳ ಕಡಿಮೆಯಾಗಿದೆ. ಕಳ್ಳದನಗಳನ್ನು ಸೇರಿಸುವಂತಹ ದೊಡ್ಡಿ ಇಲ್ಲದೇ ಅವಕ್ಕೆ ಸರಿಯಾದ ಪೋಷಣೆ ಇಲ್ಲದೇ ಅವು ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ಇವೆ. ಆದಕಾರಣ ಪ್ರತಿ ಗ್ರಾಮದಲ್ಲೂ ದನಗಳ ದೊಡ್ಡಿ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

10-30 A.M.

ಶ್ರೀಮಾನ್ ಮಾದಯ್ಯ ಗೌಡರು ಬೆಣಚುಕಲ್ಲು ಇರುವ ಪ್ರದೇಶವನ್ನು ಜಾನುವಾರುಗಳಿಗೆ ಕೊಡಿ ಎಂದು ಹೇಳಿದರು. ಬಡಜನರು ಜಮೀನು ಇಲ್ಲದೇ ಜಮೀನು ಪಡೆದುಕೊಳ್ಳಬೇಕೆಂದು ಬಹಳ ಆತುರವಾಗಿದ್ದಾರೆ. ಒಂದು ಎಕರೆ ಭೂಮಿಯನ್ನಾದರೂ ಪಡೆದುಕೊಳ್ಳಬೇಕೆಂದು ಅವರಲ್ಲಿ ಆತುರ ಇರುವುದು ನಮಗೆ ಗೊತ್ತಿದೆ. ಜಾನುವಾರುಗಳಿಗೆ ಕೊಡಬಾರದು ಅಂತ ಅಲ್ಲ. ಏನೂ ಬೆಳೆಯದೇ ಇರುವ ಪ್ರದೇಶವನ್ನು ಜಾನುವಾರುಗಳಿಗೆ ಕೊಟ್ಟು ಅಲ್ಲಿ ಗೋಶಾಲೆಯನ್ನು ಇಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಯಾರು ಜಮೀನನ್ನು ತೆಗೆದುಕೊಂಡು ಅದನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳಿ ಮುಂದೆ ಬರುತ್ತಾರೆಯೋ ಅವರಿಗೆ ನೀರಾವರಿ ಮುಂತಾದ ಸಹಾಯಗಳನ್ನು ಒದಗಿಸಿಕೊಟ್ಟು, ಅಲ್ಲಿ ಅವರು ಕೃಷಿ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಸರಕಾರದವರಿಗೆ ಹೇಳಲು ಬಯಸುತ್ತೇನೆ. ಜನರಲ್ಲಿ ದರಖಾಸ್ತು ಮೂಲಕ ಜಮೀನು ಪಡೆಯಬೇಕೆಂಬ ಆತುರ ಬಹಳವಾಗಿದೆ. ಅಂತಹ ಸಮಯದಲ್ಲಿ ಜಮೀನನ್ನು ಅವರಿಗೆ ಕೊಟ್ಟರೆ ಹೆಚ್ಚು ಪ್ರಯೋಜನವಾಗುತ್ತದೆ. ಶ್ರೀಮಾನ್ ಗೋಪಾಲ ಗೌಡರು ಹೇಳಿದಂತೆ ದರಖಾಸ್ತಿನ ಆತುರ ವಿಪರೀತವಾಗಿದೆ. ಅದರಲ್ಲೂ ನಮ್ಮ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಇದೇ ಅಸೆಂಬ್ಲಿಯಲ್ಲಿ ಹಿಂದೆ ಒಂದು ಪ್ರಶ್ನೆಯನ್ನು ಕೇಳಿದಾಗ ಮೂರು ವರ್ಷದಿಂದ 9 ಸಾವಿರಕ್ಕೂ ಮಿಕ್ಕು ಅರ್ಜಿಗಳು ಬಂದು ಅವು ಪೆಂಡಿಂಗ್‌ನಲ್ಲಿ ಇವೆ ಎಂದು ತಿಳಿದುಬಂದಿದೆ. ಹಿಂದೆ ನಮ್ಮಲ್ಲಿ ಬೇಕಾದಷ್ಟು ಜಮೀನು ಇತ್ತು. ಆಗಿನ ಕಾಲದಲ್ಲಿ ಯಾರು ಕೇಳಿದರೂ ಜಮೀನು ಕೊಡಬಹುದಾಗಿತ್ತು. ಆಗ ಯಾರೂ ಕೇಳುತ್ತಲೇ ಇರಲಿಲ್ಲ. ಈಗ ನಿಜವಾಗಿಯೂ ಕೂಡ ಅದರ ಅವಶ್ಯಕತೆ ಬಂದಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ಪುತ್ತೂರು ತಾಲ್ಲೂಕಿನಲ್ಲಿ ನಮ್ಮ ಸಂಸ್ಥಾನಕ್ಕೆ ಹತ್ತಿರ ಇರುವ ಕೇರಳ ಪ್ರಾಂತದಿಂದ ಅನೇಕ ಜನರು ಬಂದು ಭೂಮಿಯನ್ನು ಪಡೆದುಕೊಂಡು ವರ್ಗದಾರರನ್ನು ಇಟ್ಟುಕೊಂಡಿದ್ದಾರೆ. ಅಲ್ಲೇ ಇದ್ದ ಜನರು ಯಾರಿದ್ದಾರೆ ಅವರಿಗೆ ಭೂಮಿಯನ್ನು ಪಡೆಯುವುದಕ್ಕೆ ಕಷ್ಟವಾಗಿದೆ. ಫಾರೆಸ್ಟ್ ಬೇಕಾದಷ್ಟು ಇದೆ. ಮರ ಇಲ್ಲದ ಪ್ರದೇಶ ನೀರು ಇಲ್ಲದ ಪ್ರದೇಶವನ್ನು ರೆವಿನ್ಯೂ ಇಲಾಖೆಗೆ ಬಿಟ್ಟುಕೊಟ್ಟು ಅದನ್ನು ಕೃಷಿ ಮಾಡಲು ಜನರಿಗೆ ಕೊಡುವಂತಹ ಒಂದು ಏರ್ಪಾಡನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಲ್ಯಾಂಡ್ ರಿಫಾರಂಸ್ ಅಂತ ಈಗಾಗಲೇ ಎಲ್ಲಾ ಕಡೆಯೂ ಪ್ರಚಾರ ಮಾಡಿ ಅದು ಇನ್ನೂ ಸ್ಥಗಿತ ರೂಪದಲ್ಲೇ ಇದೆ. ಯಾವುದೇ ಒಂದು ನಿಶ್ಚಿತವಾದ ರೂಪದಲ್ಲೂ ಕೂಡ ಬರಲಿಲ್ಲ. ಹೀಗೆ ಮಧ್ಯಾಂತರದಲ್ಲಿ ಇದ್ದರೆ ಭೂಮಾಲೀಕರಿಗೂ ಮತ್ತು ಭೂಮಿಯನ್ನು ಉಳುಮೆ ಮಾಡತಕ್ಕ ರೈತರಿಗೂ ಬಹಳ ಅನಾನುಕೂಲವಾಗಿದೆ. ಆದಕಾರಣ ಸರಕಾರದವರು ಭೂಮಿಯಲ್ಲಿ ಉಳುಮೆ ಮಾಡತಕ್ಕ ವ್ಯವಸಾಯಗಾರರು ಯಾರಿದ್ದಾರೆ ಅವರು ಭೂಮಿಯನ್ನು ಕೊಡಬೇಕೆಂದು ಕೇಳಿದರೆ ಅವರಿಗೆ ಹೆಚ್ಚು ಹೆಚ್ಚು ದರಖಾಸ್ತಿನಲ್ಲಿ ಭೂಮಿಯನ್ನು ಕೊಟ್ಟಿದ್ದೇ ಆದರೆ ಅವರು ಅಲ್ಲೇ ಇರುವುದಕ್ಕೆ ಒಂದು ಅವಕಾಶವಾಗುತ್ತದೆ, ಮತ್ತು ಅವರು ಬೇರೆ ಕಡೆಗೆ ಹೋಗಿ ಮತ್ತೆ ಸರ್ಕಾರದವರನ್ನು ಭೂಮಿ

ಯನ್ನು ಕೊಡಿ ಎಂದು ಕೇಳುವುದು ತಪ್ಪುತ್ತದೆ ಮತ್ತು ಸರಕಾರದವರಿಗೆ ಬರುತ್ತಾ ಇರುವ ದೂರು ಕಡಿಮೆಯಾಗುತ್ತದೆ. ಹೆಚ್ಚು ಆಹಾರ ಉತ್ಪಾದನೆ ಮಾಡುವುದಕ್ಕೂ ಕೂಡ ಸಹಕಾರಿಯಾಗುತ್ತದೆ ಎಂದು ನಾನು ಹೇಳುತ್ತೇನೆ.

ಗ್ರಾಮಾಧಿಕಾರಿಗಳ ರದ್ದಿಯಾತಿ ಪ್ರಶ್ನೆ ಇನ್ನೂ ಇತ್ಯರ್ಥವಾಗದೇ ಇನ್ನೂ ಅದು ಸ್ಥಗಿತ ವಾಗಿಯೇ ಇದೆ. ಆ ಪ್ರಶ್ನೆ ಹೈಕೋರ್ಟಿನಿಂದ ಸುಪ್ರೀಂ ಕೋರ್ಟಿನವರೆಗೂ ಹೋಗಿದೆ. ಶ್ರೀಮತಿ ನಾಗರತ್ನಮ್ಮನವರು ಏನು ಹೇಳಿದರೋ ಅದಕ್ಕೆ ವಿರುದ್ಧವಾದ ಪರಿಸ್ಥಿತಿ ನಮ್ಮ ಕಡೆ ಇದೆ. ಅಲ್ಲಿ ಗ್ರಾಮಾಧಿಕಾರಿಗಳು ಅವರಿಗೆ ವಂಶಪಾರಂಪರ್ಯವಾಗಿ ಇದ್ದ ಹಕ್ಕನ್ನು ಕಿತ್ತುಕೊಳ್ಳುತ್ತಾ ಇದ್ದೀರಿ ಎಂದು ಹೇಳಿ ಅವರು ಅನ್ಯಾಯವನ್ನೇ ಮಾಡುತ್ತೇವೆ ಎಂದು ಎದುರು ಎದುರಿಗೇ ಹೇಳುತ್ತಾ ಇದ್ದಾರೆ. ಯಾರಾದರೂ ಅಧಿಕಾರಿಗಳು ಅವರನ್ನು ತಡೆಗಟ್ಟಿದರೆ ಅವರಿಗೆ ಗ್ರಾಮಾಧಿಕಾರಿಗಳು ಈ ರೀತಿ ಚಾಲೆಂಜ್ ಕೊಡುತ್ತಾರೆ. ರೈತರಿಗೆ ಯಾವ ಒಂದು ಅನುಕೂಲ, ದರಖಾಸ್ತು ಕೂಡ ಸಿಕ್ಕದಂತೆ ಆಗಿದೆ. ಅವರ ಹತ್ತಿರ ಹೋದ ರಿಕಾರ್ಡುಗಳನ್ನು ಜಾಗ್ರತೆ ಫೈಸಲು ಮಾಡುವುದಿಲ್ಲ. ಸರ್ವೇ ಸೆಟ್ಲ್‌ಮೆಂಟ್ ಕೂಡ ಇದರ ದೆಶೆಯಿಂದಾಗಿ ನಿಧಾನವಾಗುತ್ತಾ ಇದೆ, ಮೊದಲು ಯಾವ ಕಂದಾಯ ಇತ್ತೋ ಅದಕ್ಕೆ ಸುಮಾರು 8-10 ಪಟ್ಟು ಇವರುಗಳು ಸರಿಯಾದ ಲೆಕ್ಕ ಕೊಡದೇ ಇರುವುದರಿಂದ ಜಾಸ್ತಿಯಾಗುವ ಸಂಭವ ಇದೆ ಎಂದು ತಿಳಿದು ಬರುತ್ತಾ ಇದೆ. ಹೀಗಾದ ಪಕ್ಷದಲ್ಲಿ ಹೆಚ್ಚು ಆಹಾರ ಉತ್ಪನ್ನ ಮಾಡತಕ್ಕ ರೈತರಿಗೆ ಒಂದು ವಿಧದಲ್ಲಿ ನಿರಾಶೆಯಾಗುವಂತಹ ಪರಿಸ್ಥಿತಿ ಇದೆ, ಆದ್ದರಿಂದ ಇದನ್ನೆಲ್ಲಾ ವಿಮರ್ಶೆ ಮಾಡಿ ಸರ್ವೇ ಸೆಟ್ಲ್‌ಮೆಂಟ್ ಮಾಡುವಾಗ ಭೂ ಕಂದಾಯ ವನ್ನು ನಿಗದಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರೈತರು ನಿರಾಶರಾಗುವಂತೆ ಮಾಡಬಾರ ದೆಂದು ಸರಕಾರದವರಲ್ಲಿ ನನ್ನ ವಿನಂತಿ.

ಇನ್ನು ವಿಲೇಜ್ ಅಕೌಂಟೆಂಟ್‌ಗಳನ್ನು ನೇಮಕ ಮಾಡುವ ವಿಷಯದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೀರಿ. ಅವರಿಗೆ ತರಪೇತು ಕೊಟ್ಟಿರುವುದು ಎಷ್ಟುಷ್ಟಕ್ಕೂ ಸಾಲದು. ಈಗಾಗಲೇ ನಮ್ಮ ಕಡೆ ಪಂಚಾಯ್ತಿಯಲ್ಲಿ ಅವರು ಇದ್ದ ಕಡೆ ಮಿಸ್‌ಅಪ್ರೋಪ್ರಿಯೇಷನ್ ಆಗಿ ತುಂಬಾ ತೊಂದರೆಯಾಗುತ್ತಾ ಇದೆ. ಪಂಚಾಯ್ತಿ ಕೆಲಸವೂ ಕೂಡ ಬಹಳ ಸ್ಥಗಿತವಾಗಿದೆ. ಆದ್ದರಿಂದ ಅವರಿಗೆ ಸರಿಯಾದ ತರಪೇತು ಕೊಟ್ಟು, ಅವರನ್ನು ಒಳ್ಳೆಯ ದಕ್ಷರನ್ನಾಗಿ ಮಾಡಿ ಕೆಲಸ ಕಾರ್ಯ ಗಳನ್ನು ನಡೆಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ತಹಸೀಲ್ದಾರರ ವಿಚಾರವನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು. ನಾನೂ ಸಹ ಅಸಿಸ್ಟೆಂಟ್ ಕಮಿಷನರ ಒಂದು ಹುದ್ದೆಯನ್ನು ತೆಗೆದು ತಹಸೀಲ್ದಾರರಿಗೇ ಹೆಚ್ಚು ಅಧಿಕಾರವನ್ನು ಕೊಟ್ಟು, ಹೆಚ್ಚು ಸಿಬ್ಬಂದಿಯನ್ನು ಕೊಟ್ಟು ಅವರಿಗೆ ಒಂದು ವ್ಯಾನನ್ನೂ ಸಹ ಕೊಟ್ಟರೆ ಕೆಲಸ ಒಳ್ಳೆಯ ರೀತಿಯಲ್ಲಿ ಆಗುತ್ತದೆ. ಮತ್ತು ಡೆಪ್ಯೂಟಿ ಕಮಿಷನರಿಗೂ ಹೆಚ್ಚು ಅನುಕೂಲವಾಗಬಹುದು. ಈಗಿರುವಂತೆ ಅಸಿಸ್ಟೆಂಟ್ ಕಮಿಷನರಲ್ಲಿ ರೆಕಾರ್ಡ್ ಉಳಿದು ತೊಂದರೆಯಾಗುವುದಕ್ಕಿಂತ ತಹಸೀ ಲ್ದಾರರೇ ನೇರವಾಗಿ ಡೆಪ್ಯೂಟಿ ಕಮಿಷನರಿಗೆ ರಿಕಾರ್ಡುಗಳನ್ನು ಕಳುಹಿಸುವಂತೆ ಮಾಡಿದರೆ ಅನುಕೂಲವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಎರಡು ಮೂರು ತಾಲ್ಲೂಕುಗಳು ಬಹಳ ದೊಡ್ಡ ತಾಲ್ಲೂಕುಗಳು ಇವೆ. ಉದಾಹರಣೆಗೆ ಪುತ್ತೂರು ತಾಲ್ಲೂಕು ತೆಗೆದುಕೊಂಡರೆ ಅದು ಬಹಳ ದೊಡ್ಡ ತಾಲ್ಲೂಕು. ಅದೇ ರೀತಿ ಬೆಳ್ತಂಗಡಿ ತಾಲ್ಲೂಕೂ ಸಹ ಇದೆ. ಸೂಳ್ಯವನ್ನು ಒಂದು ತಾಲ್ಲೂಕನ್ನಾಗಿ ಮಾಡಬೇಕೆಂದು ನಿಶ್ಚಯ ಮಾಡಿದ್ದರೂ ಸಹ ಅದು ಇನ್ನೂ ಸ್ಥಗಿತವಾಗಿಯೇ ಉಳಿದಿರುವುದು ಬಹಳ ಅಸಮಾಧಾನಕರವಾಗಿದೆ. ಅಷ್ಟೇ ಅಲ್ಲದೆ ಪುತ್ತೂರು ತಾಲ್ಲೂಕಿನಲ್ಲಿ ಸ್ಪೆಷಲ್ ತಹಸೀಲ್ದಾರರು ಇದ್ದರೂ ಅವರನ್ನು ತೆಗೆದು ಅಲ್ಲಿದ್ದ ಸಿಬ್ಬಂದಿಯನ್ನೂ ಕೂಡ ಕಡಿಮೆ ಮಾಡಿದ್ದೀರಿ. ಹೀಗೆ ಮಾಡಿರುವುದರಿಂದ ಅಲ್ಲಿ ಕೆಲಸ ಮಾಡುವುದಕ್ಕೆ ಬಹಳ ಅನಾನುಕೂಲವಾಗಿದೆ. ಈ ರೀತಿ ಮಾಡಿರುವುದು ಸರಿಯೇ ಎಂದು ಕೇಳುತ್ತೇನೆ. ಅಲ್ಲಿಗೆ ಬರತಕ್ಕ ದರಖಾಸ್ತು ಮುಂತಾದುವನ್ನು ಫೈಸಲು ಮಾಡಲು ಇನ್ನೂ ಎರಡು ವರ್ಷಗಳಾದರೂ ಅಲ್ಲಿ ಸ್ಪೆಷಲ್ ತಹಸೀಲ್ದಾರರು ಇರುವಂತಹ ವ್ಯವಸ್ಥೆಯನ್ನು ಮಾಡಿ ಅಲ್ಲಿನ ಕೆಲಸ ಕಾರ್ಯಗಳು ಸುಸೂತ್ರವಾಗಿ ಆಗುವಂತೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ರಿಜಿಸ್ಟ್ರೇಷನ್ ಆಫೀಸು ವಿಷಯದಲ್ಲಿ ಒಂದು ಮಾತು ಹೇಳಬೇಕೆಂದರೆ ನಮ್ಮ ಸೂಳ್ಯದ ರಿಜಿಸ್ಟ್ರಿ ಆಫೀಸು 1913 ರಲ್ಲಿ ತೆರೆದು ಅದರ ಕಟ್ಟಡ ಬಹಳ ಹಳೆಯದಾಗಿದೆ, ಅಭದ್ರವಾಗಿದೆ. ಆದ್ದರಿಂದ ಒಳ್ಳೆಯ ಕಟ್ಟಡವನ್ನು ಕಟ್ಟಿ ಅಲ್ಲಿರತಕ್ಕ ರೆಕಾರ್ಡುಗಳು ಬಂದೋಬಸ್ತಾಗಿರುವಂತೆ ಮಾಡಬೇಕು. ಮತ್ತು ರೆಕಾರ್ಡು ಇಡುವ ಕ್ರಮದಲ್ಲಿ ಮದರಾಸ್ ಪ್ಯಾಟರ್ನಿನಂತೆ ರೆಕಾರ್ಡು ಗಳನ್ನು ಫೈಲ್ ಮಾಡುತ್ತಾ ಇದ್ದರು. ಅದು ಒಳ್ಳೆಯ ಚೆನ್ನಾಗಿತ್ತು. ಇತ್ತೀಚೆಗೆ ಇಟ್ಟಿರುವ ರೆಕಾರ್ಡ್‌ಗಳಿಗೆ ಪುಟಗಳ ಸಂಖ್ಯೆಯನ್ನೇ ಸರಿಯಾಗಿ ಹಾಕಿರುವುದಿಲ್ಲ. ಅದರಿಂದ ಒಂದು ಕಾಗದ ತೆಗೆದು ಮತ್ತೊಂದು ಕಾಗದ ಸೇರಿಸತಕ್ಕ ಸಂದರ್ಭಕ್ಕೆ ಅವಕಾಶ ಇರುತ್ತದೆ. ಆ ರೀತಿ ಆಗದಂತೆ

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಬಂದೋಬಸ್ತು ಮಾಡಿ ಒಳ್ಳೆಯ ರೀತಿಯಲ್ಲಿ ರೆಕಾರ್ಡುಗಳನ್ನು ಭದ್ರವಾಗಿ ಇಡಬೇಕಾದರೆ ಗಟ್ಟಿಯಾದ ಕಾಗದದಿಂದ ಬೈಂಡ್ ಮಾಡಿದಂತಹ ಪುಸ್ತಕ ಇರಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಸಮಯ ಮಾತನಾಡಲಿಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಉಪಾಧ್ಯಕ್ಷರೇ, ಈ ದಿನ ನಮ್ಮ ಮುಂದೆ ಭೂ ಕಂದಾಯ, ಪಶು ಸಂಗೋಪನೆ, ರಿಜಿಸ್ಟ್ರೇಷನ್, ಸ್ಟ್ಯಾಂಪ್, ಕ್ಷಾಮ ಪರಿಹಾರ ಮತ್ತು ಜಹಿನಾನ್ದಾರಿ ಪದ್ಧತಿ ರದ್ದು ಮಾಡುವುದಕ್ಕೆ ಸಂಬಂಧಪಟ್ಟ ಪರಿಹಾರ, ಇಷ್ಟು ವಿಷಯ ಇದೆ. ಇಷ್ಟೂ ವಿಷಯಗಳ ಮೇಲೆ ನನಗೆ ಕೊಟ್ಟಿರುವ ಕಾಲದಲ್ಲಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಭೂಕಂದಾಯದ ವಿಷಯದಲ್ಲಿ ಪಶು ಸಂಗೋಪನೆಯ ವಿಷಯದಲ್ಲಿ ಎರಡು ಮಾತನ್ನು ಹೇಳಬೇಕೆಂದು ಪ್ರಯತ್ನ ಪಡುತ್ತೇನೆ. ಇವತ್ತು ರಾಜ್ಯದಲ್ಲಿ ಈ ಭೂ ಕಂದಾಯದ ರಾಜಸ್ವ ಮಂತ್ರಿಗಳು ಏನಿದ್ದಾರೆ ಅವರ ಈ ಹುದ್ದೆಗಳನ್ನು ವಜಾ ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ರೆವಿನ್ಯೂ ಮಿನಿಸ್ಟರ್ ಎನ್ನುವುದೇ ಬೇಕಿಲ್ಲ. ಈ ರಾಜ್ಯದಲ್ಲಿ ಸುಮ್ಮನೆ ಅವರನ್ನು ಹೆಸರಿಗೆ ರೆವಿನ್ಯೂ ಮಿನಿಸ್ಟರ್ ಎಂದು ಇಟ್ಟುಕೊಂಡು ಯಾವ ಅಧಿಕಾರವೂ ಅವರಿಗೆ ಇಲ್ಲದೆ, ಅವರು ಒಬ್ಬ ದೊಡ್ಡ ಶ್ಯಾನುಭೋಗರ ಹಾಗೆ ಖಾತ ಖಿರದಿ, ಪಹಣಿ, ಆಣೆವಾರಿ ಮಾಡುತ್ತಾ ಇದ್ದಾರೆ. ಈ ಒಂದು ಖಾತೆಯನ್ನು ವಜಾ ಮಾಡಿ ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ವಿದ್ಯಾ ಖಾತೆಯನ್ನು ಬೇರ್ಪಡಿಸಿದ ಹಾಗೆ ಬೇರ್ಪಡಿಸಿ ಬೇರೆ ಬೇರೆ ಇಲಾಖೆಗಳಿಗೆ ಇದನ್ನು ವರ್ಗಾವಣೆ ಮಾಡಿದರೆ ಅವರ ಆ ಒಂದು ಜಾಗ ಇಲ್ಲದ ಹಾಗೆ ಮಾಡಿದರೆ ಒಂದು ಸಂಖ್ಯೆ ಕಡಿಮೆ ಆಗಬಹುದೋ ಏನೋ ಎಂದು ನನ್ನ ಆಶೆ.

ಏಕೆ ಇದನ್ನು ಹೇಳುತ್ತಿದ್ದೇನೆಂದರೆ ತಹಶೀಲ್ದಾರರು, ಅಸಿಸ್ಟೆಂಟ್ ಕಮಿಷನರು, ಜಿಲ್ಲಾಧಿಕಾರಿಗಳು ಮತ್ತು ಡಿವಿಜನಲ್ ಕಮಿಷನರ ಮೇಲೆ ತಮಗೆ ಅಧಿಕಾರವಿಲ್ಲ. ಆ ಅಧಿಕಾರಿಗಳಲ್ಲಿ ಅನೇಕರು ಐ.ಎ.ಎಸ್. ಅಧಿಕಾರಿಗಳು. ಅವರ ಮೇಲೆ ಮುಖ್ಯಮಂತ್ರಿಗಳಿಗೆ ಮತ್ತು ಚೀಫ್ ಸೆಕ್ರೆಟರಿಗಳಿಗೆ ಅಧಿಕಾರವಿದೆ, ರೆವಿನ್ಯೂ ಸಚಿವರಿಗೆ ಅಧಿಕಾರವಿಲ್ಲ. ಕಂದಾಯ ಸಚಿವರಿಂದ ಜನರಿಗೆ ಫಲ ಸಿಕ್ಕಬೇಕಾದರೆ ಅಧಿಕಾರಿಗಳ ಮೂಲಕ ಸಿಕ್ಕಬೇಕು. ಒಬ್ಬ ಡೆಪ್ಯುಟಿ ಕಮಿಷನರು ಸರಿಯಾಗಿ ಕೆಲಸ ನಿರ್ವಹಿಸದಿದ್ದರೆ ಅವರನ್ನು ಬೇರೆ ಕಡೆಗೆ ವರ್ಗ ಮಾಡುವುದಕ್ಕೂ ಕೂಡ ಕಂದಾಯ ಮಂತ್ರಿಗಳಿಗೆ ಅಧಿಕಾರವಿಲ್ಲ. ಅಂಥವರ ಮೇಲೆ ಚೀಫ್ ಸೆಕ್ರೆಟರಿಗಳು ಮತ್ತು ಮುಖ್ಯಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು. ಇದರಿಂದ ಅಧಿಕಾರಿಗಳು ಸಚಿವರ ವಿಷಯದಲ್ಲಿ ಲಘುವಾಗಿ ಮಾತನಾಡಲು ಅವಕಾಶವಾಗಿದೆ. ಆದುದರಿಂದ ಕಂದಾಯ ಮಂತ್ರಿಗಳ ಹುದ್ದೆ ಏಕಿರಬೇಕೆಂದು ನಾನು ಕೇಳುತ್ತಿದ್ದೇನೆ. ಸಚಿವರು ವಾರ್ನಿಂಗ್ ಕೊಟ್ಟರೂ ಕೂಡ ಜಿಲ್ಲಾಧಿಕಾರಿಗಳು ಸರಿಯಾಗಿ ಕೆಲಸ ಮಾಡದಿದ್ದರೆ ಅವರಿದ್ದು ಪ್ರಯೋಜನವೇನು ? ಮುಜರಾಯಿ ಕಮಿಷನರ ಸಹಾಯದಿಂದ ದೇವಸ್ಥಾನಗಳಲ್ಲಿ ಪೂಜೆ ಮಾಡಿಸಲು ಅವರು ಇರಬೇಕೆ ? ನಮ್ಮ ಮಿತ್ರರಾದ ಮಾದಪ್ಪಗೌಡರು ಹೇಳಿದಂತೆ ಹಿಂದೆ ಅವರಿಗೆ ಬಹಳ ಗೌರವ, ಪುರಸ್ಕಾರ ಇತ್ತು, ಅಧಿಕಾರಿಗಳು ಸ್ವಲ್ಪ ಗೌರವ ಕೊಡುತ್ತಿದ್ದರು. ಮಹಾರಾಜರಿದ್ದಾಗ ಕೌನ್ಸಿಲರುಗಳಿದ್ದಾಗ ಕಂದಾಯ ಶಾಖೆ ವಹಿಸಿರುವವರಿಗೆ ಬಹಳ ಗೌರವವಿತ್ತು. ಈ ದಿವಸವೇನಿದೆ ? ದರಖಾಸ್ತು ಅರ್ಜಿ ಅವರಿಗೆ ಬರಬಹುದು. ಆದರೆ ಬಂದ ಮೇಲೆ ಅವರು ಮಾಡುವುದೇನು ? Forwarded to the D. C. for needful ಎಂದೇನಾದರೂ ಬರೆದು ಕಳುಹಿಸುತ್ತಾರೆ. ಸಿದ್ದಯ್ಯನವರು ರೆವಿನ್ಯೂ ಸಚಿವರಾಗಿದ್ದಾಗ I agree ಎಂದೋ ಅಥವಾ I do not agree ಎಂದೋ ಎರಡು ಪಂಕ್ತಿ ಬರೆಯುತ್ತಿದ್ದರು. ಕಡಿದಾಳ್ ಮಂಜಪ್ಪನವರು if the land is available and rules permit may be given ಎಂದು ಬರೆಯುತ್ತಿದ್ದರು. ಈ ಕೆಲಸ ಮಾಡುವುದಕ್ಕೇಕೆ ಇವರಿರಬೇಕು ? ಇದನ್ನು ಹೇಳುವುದು ಈ ರಾಜ್ಯದಲ್ಲಿ ರೆವಿನ್ಯೂ ಮಂತ್ರಿಗಳ ಸ್ಥಾನ ಎಷ್ಟು ಕೆಳಗಿಳಿಯಿತು, ಅವರ ಸ್ಥಾನಮಾನವೇನಾಗಿದೆ ಎಂದು ತಿಳಿಸುವುದಕ್ಕೆ. ಇದನ್ನು ನೋಡಿದರೆ ದುಃಖವಾಗುತ್ತದೆ. ಅವರಿಗೆ ಶ್ಯಾನುಭೋಗ, ತೋಟಿ, ತಳವಾರ, ಪಟೇಲ, ರೆವಿನ್ಯೂ ಆಫೀಸರು—ಇವರುಗಳಲ್ಲಿ ಯಾರಮೇಲೂ ಸಹ ಸರಿಯಾಗಿ ಬಿಗಿ ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ. ಆದುದರಿಂದ ಈ ಖಾತೆ ತೆಗೆಯುವುದೇ ಒಳ್ಳೆಯದೆಂದು ನಾನು ಅಭಿಪ್ರಾಯ ಪಡುತ್ತೇನೆ.

ಈ ಸಚಿವರು ಅಧಿಕಾರಕ್ಕೆ ಬಂದಮೇಲೆ ಭೂ ಸುಧಾರಣೆ ಕೆಲಸ ಬಹಳ ಮುಗ್ಗಿಗೆ ಬಿದ್ದಿದೆ. ಮದ್ರಾಸಿನ ಈ ಸಂಬಂಧವಾದ ಕಾನೂನು ಡಿಫೆಕ್ಟೀವ್ ಎಂದು ಸುಪ್ರೀಂ ಕೋರ್ಟ್ ತೀರ್ಮಾನ ಕೊಟ್ಟಿತು. ನೀವೇನು ಮಾಡಿದಿರಿ ? ಇಲ್ಲಿ ಭೂಸುಧಾರಣೆ ಮಾಡುವಾಗ ನ್ಯೂನತೆಯಿದೆಯೆಂದು ಹೇಳಿದರೆ ಕೇಳದೆ ತಮಗೆ ಬಹುಮತವಿದೆಯೆಂದು ಕಾನೂನಿಗೆ ಅಂಗೀಕಾರ ಪಡೆದುಕೊಂಡಿರಿ. ಈಗ

ಅದು ಡಿಫೆಕ್ಟಿವ್ ಎಂದು ಕಂಡು ಬಂದು ಜಾರಿಗೆ ತರುವುದಕ್ಕೇ ಅವಕಾಶವಾಗಿರುವುದಿಲ್ಲ. ನೀವು ಭೂಸುಧಾರಣೆ ಹೆಸರಿನಲ್ಲಿ ದೊಡ್ಡ ಜಮೀನುದಾರರಿಗೆ, ಭೂಮಾಲೀಕರಿಗೆ ಅನುಕೂಲ ಮಾಡಿ, ಬಡಜನರಿಗೆ ಬರೀ ಆಶೆ ತೋರಿಸಿದಿರಿ. ಹರಿಜನರಿಗೆ, ಗಿರಿಜನರಿಗೆ, ಜಮೀನಿಲ್ಲದವರಿಗೆ, ಕಡಮೆ ಜಮೀನಿರುವವರಿಗೆ ಜಮೀನು ಕೊಡಿಸುತ್ತೇವೆಂದು ಹೇಳಿ ಇದುವರೆಗೆ ಏನೂ ಮಾಡಲಿಲ್ಲ. ಇದನ್ನು ಜನರು ನೋಡಿ ಬೇರೆ ಮಾರ್ಗ ಹಿಡಿದರು. ಖರಾಬು, ಸರ್ಕಾರಿ ಜಮೀನು, ಗೋಮಾಳ, ಅರಣ್ಯ ಪ್ರದೇಶ, ಅನಾಥರೈಜ್ಡ್ ಆಗಿ ಉಳುಮೆ ಮಾಡಲು ಪ್ರಾರಂಭಿಸಿದರು. ಸುಮಾರು ಎರಡು ಸಾವಿರ ಎಕರೆಗೆ ಮೇಲ್ಪಟ್ಟು ಅರಣ್ಯಪ್ರದೇಶವನ್ನು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆಂದು ನಾನು ಹಿಂದೆಯೇ ತಿಳಿಸಿದೆ. ಆದರೆ ಹರಿಜನರು, ಗಿರಿಜನರು, ಸವರ್ಣ ಹಿಂದೂಗಳು, ಜಮೀನಿಲ್ಲದಿರುವವರು ಆ ರೀತಿ ಮಾಡಿದ್ದಾರೆ, ಉದಾರ ನೀತಿ ಅನುಸರಿಸಬೇಕು ಎಂದು ಸುಮ್ಮನಿದ್ದಾರೆ. ಯಾರು ಪುಂಡಾಟವಾಡಿ ಉಳುಮೆ ಮಾಡುವುದಕ್ಕೆ ಪ್ರಾರಂಭಿಸಿದರೋ ಅವರಿಗೆ ಹೀಗೆ ಸಿಕ್ಕಿತು, ಬಡವರಿಗೆ ಜಮೀನಿಲ್ಲದವರಿಗೆ ಸಿಕ್ಕಲೇ ಇಲ್ಲ. ಆಂಧ್ರಪ್ರದೇಶದಿಂದ ಕೆಲವರು ಬಂದು ಸರ್ಕಾರಕ್ಕೆ ಸೇರಿದ 710 ಎಕರೆ ಅರಣ್ಯ ಪ್ರದೇಶವನ್ನು 3 ವರ್ಷದವರೆಗೆ ಬೆಳೆದಿದ್ದ ಗಿಡಗಳನ್ನು ಕತ್ತರಿಸಿ ಸಾಗುವಳಿ ಮಾಡುತ್ತಿದ್ದಾರೆ. ಇದನ್ನು ನೋಡಿದರೆ ಸರ್ಕಾರ ಇದೆಯೇ ಎಂಬ ಭಾವನೆ ಇದೆ. ಇದರ ಸಂಬಂಧ ದಲ್ಲಿ ಸಮಾಜ ಕಲ್ಯಾಣಶಾಖೆ ಮಂತ್ರಿಗಳು ಸ್ಟೇ ಆರ್ಡರು ಕೊಡಬೇಕೆಂದು ಹೇಳಿದರು ಎಂದು ರೆವಿನ್ಯೂ ಸಚಿವರು ಹಿಂದೆ ಹೇಳಿದರು. ಅರಣ್ಯಶಾಖೆ ಸಚಿವರೇನು ಹೇಳಿದರು ಎಂದರೆ ಮೂರು ಜನ ಮಂತ್ರಿಗಳು ಮಂತ್ರಿಮಂಡಲದಲ್ಲಿ ವ್ಯಾಜ್ಯವಾಡುವುದು ಸರಿಯಲ್ಲ, ಮೂರು ಜನರೂ ಅಜಮಾಯಿಷಿ ಮಾಡುತ್ತೇವೆ ಎಂದು ಹೇಳಿ 24 ತಿಂಗಳಾದುವು. ಏನು ಮಾಡಿದ್ದಾರೆ ? ಈಗ ಮನೆ ಕಟ್ಟಿದ್ದಾರೆ. ಹೀಗಾದರೆ ಸಚಿವರಿಗೆ ಗೌರವ ಉಳಿಯುತ್ತದೆಯೇ ಎಂದು ಕೇಳುತ್ತೇನೆ.

ನಮ್ಮ ಜಿಲ್ಲೆಯ ಡೆಪ್ಯುಟಿ ಕಮಿಷನರಿಗೆ ಕನ್ನಡ ಬರುವುದಿಲ್ಲ, ಇಂಗ್ಲೀಷ್ ತಿಳಿಯುವುದಿಲ್ಲ, ಏನೂ ಅರ್ಥವಾಗುವುದಿಲ್ಲ. ಇಂಥವರೇ ಸಿದ್ದಿಕಿ ಮುಂತಾದವರೇ ನಮ್ಮಲ್ಲಿಗೆ ಬರುತ್ತಿದ್ದಾರೆ. ಅವರಿಗೆ ಕಾನೂನು ಗಂಧವೇ ಇಲ್ಲ. ಈ ರಾಜ್ಯದಲ್ಲಿ ಕಾನೂನು ತಿಳಿದವರಿಲ್ಲವೇ ? ಒಳ್ಳೆಯ ಬುದ್ಧಿವಂತರನ್ನು ಅಲ್ಲಿಗೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಹಿಂದೆ ಹೀಗೆ ಹೇಳಿದಾಗ ಇನ್ನು ಎರಡು ವರ್ಷವಾಗಲಿ ಹಾಕುತ್ತೇವೆಂದು ಹೇಳಿದರು. 19 ಜಿಲ್ಲೆಗಳಿರುವಾಗ ತುಮಕೂರಿಗೆ ಇಂಥವರನ್ನೇಕೆ ಹಾಕುವುದು ? ಅಲ್ಲಿ 10-12 ಲಕ್ಷ ಜನರಿದ್ದಾರೆ, ಒಳ್ಳೆಯ ತಿಳುವಳಿಕಸ್ತರಿದ್ದಾರೆ. ಈಗಲಾದರೂ ಕಾನೂನು ತಿಳಿದ, ಒಳ್ಳೆಯ ದಕ್ಷರಾದವರನ್ನು ಹಾಕಲು ಮನಸ್ಸು ಮಾಡಿ. ಈ ವಿಚಾರ ದಲ್ಲಿ ಇನ್ನೇನೂ ಹೆಚ್ಚಾಗಿ ಹೇಳುವುದಿಲ್ಲ. ಅವರೆಷ್ಟು ರೆವಿನ್ಯೂ ಅಪೀಲುಗಳನ್ನು ಹಿಯರ್ ಮಾಡಿ ದ್ದಾರೆ ? ಎಷ್ಟು ಜಡ್ಜ್‌ಮೆಂಟ್ ಬರೆದಿದ್ದಾರೆ ? ಅವರು ಮಾಡುವ ಒಂದು ಟೆಕ್ನಿಕ್ ಏನೆಂದರೆ ಆಫೀಸ್ ನೋಟ್‌ನ ಮೇಲೆ ಏನಾದರೂ ಒಂದೆರಡು ಪಂಕ್ತಿ ಬರೆಯುವುದು, ಇನ್ನೇನೂ ಇಲ್ಲ. ಒಂದು ಪುಟ ಸಹ ಸರಿಯಾಗಿ ಬರೆಯಲು ಬಾರದು. ಯಾರಾದರೂ ಮಂತ್ರಿಗಳಿಗೆ ಸಮಾಧಾನಪಡಿಸಲು ಇಂಥ ತಲೆಯಿಲ್ಲದವರನ್ನು, ಬುದ್ಧಿಯಿಲ್ಲದವರನ್ನು ನಮ್ಮ ಮೇಲೆ ಹೇರಬಾರದೆಂದು ಅರಿಕೆ ಮಾಡುತ್ತೇನೆ.

ನನ್ನ ಸ್ನೇಹಿತರಾದ ಎಂ. ಆರ್. ಪಾಟೀಲರು ಈ ರಾಜ್ಯದಲ್ಲಿ ಸರ್ಛಾರ್ಜ್ ವಿಧಿಸುವುದು ಬೇಡ ವೆಂದು ಸಲಹೆ ಮಾಡಿದರು. ಅದು ಸೂಕ್ತವಾಗಿದೆ. ಭೂಕಂದಾಯ ಹಾಕಬೇಕಾದರೆ ಕೂಲಂಕಷ ವಾಗಿ ಪರಿಶೀಲಿಸಬೇಕು. ಯಾರಿಗೆ ಭೂ ಆದಾಯ 3 ಸಾವಿರ ರೂಪಾಯಿಗಳಿಗಿಂತ ಕಡಮೆ ಯಿದೆಯೋ ಅವರಿಗೆ ಕಂದಾಯ ಹಾಕಬಾರದು ದೊಡ್ಡ ದೊಡ್ಡ ಭೂಮಾಲೀಕರ ಮೇಲೆ ಕಂದಾಯ ಹಾಕಿ. ವಿದ್ಯಾಭ್ಯಾಸಕ್ಕಾಗಿ ರಿಯಾಯಿತಿ ತೋರಿಸುವಾಗ, $2\frac{1}{2}$-3 ಸಾವಿರ ರೂಪಾಯಿಗಳಿಗಿಂತ ಕಡಮೆ ವರಮಾನವಿರುವವರ ಮಕ್ಕಳಿಗೆ ಶುಲ್ಕದ ವಿನಾಯಿತಿ ಕೊಡಬೇಕೆನ್ನುವಾಗ ಈ ಭೂಕಂದಾಯ ಕೊಡುವವರಿಗೂ ಸಹ 3 ಸಾವಿರದೊಳಗೆ ಭೂಮಿಯಿಂದ ಉತ್ಪತ್ತಿಯಿರುವಾಗ ಕಂದಾಯ ವಿಧಿಸದೆ ರಿಯಾಯಿತಿ ತೋರಿಸಬೇಕೆಂದು ಕಂದಾಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಪಶು ಸಂಗೋಪನ ಇಲಾಖೆ. ನೀವು ಭೂಸುಧಾರಣೆ ಜಾರಿಗೆ ತರಬೇಕು ಎಂದು ಬರೀ ಬಾಯಲ್ಲಿ ಹೇಳುತ್ತೀರಿ. ಆದರೆ ಅದನ್ನು ಕೈಯಲ್ಲಿ ತರಲಿಕ್ಕೆ ಸಾಧ್ಯವಿಲ್ಲ. ಮತ್ತು ಅದೂ ಬರುವುದು ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನೀವು ಈ ದೇಶದಲ್ಲಿ ಪಶು ಸಂಪತ್ತನ್ನು ಹೆಚ್ಚು ಮಾಡ ಬೇಕು. ಅದಕ್ಕಾಗಿ ಗೋ ಸಂಪತ್ತನ್ನು ಹೆಚ್ಚಾಗಿ ಬೆಳಸಿ ಎಂದು ಜಾಸ್ತಿಯಾಗಿ ಸಹಾಯಗಳನ್ನು ಕೊಡುತ್ತೇವೆಂದು ಹೇಳಿ ತಾವು ಕೇಂದ್ರದಲ್ಲಿ ಮಂತ್ರಿಯಾಗಿದ್ದಾಗ ಹಾಲೆಂಡು ಇನ್ನಿತರ ಪರದೇಶ ಗಳಿಗೆ ಹೋಗಿ ಅಲ್ಲೆಲ್ಲಾ ನೋಡಿಕೊಂಡು ಬಂದಿದ್ದೇನೆ ಮತ್ತು ರಷ್ಯಾಕ್ಕೆ ಹೋಗಿ ಬಂದು ನೋಡಿದ್ದೇನೆ ಎಂದು ಹಿಂದೆ ಒಂದು ಸಾರಿ ಬಹಳವಾಗಿ ಈ ಸಭೆಯಲ್ಲೇ ಹೇಳಿದ್ದಿರಿ. ಆದರೆ ಈ ಪಶು ಸಂಗೋಪನ ಇಲಾಖೆಯೊಳಗೆ ಇರತಕ್ಕ ಅಧಿಕಾರಿಗಳನ್ನು ನೋಡುವುದಾದರೆ ಇದರಲ್ಲೇನೋ ರಾಜಕೀಯ ಇದೆ ಎಂದು ನನಗೆ ಕಾಣುತ್ತಿದೆ. ಒಬ್ಬ ಮುಖ್ಯಾಧಿಕಾರಿಗಳು ಇಡೀ ಸೌತ್ ಕ್ಯಾನರಾದ ಕಡೆ ಇರುವವರು ನನ್ನ ಹಿಂದೆ ಇದ್ದಾರೆ, ಹೈದರಾಬಾದು ಕರ್ಣಾಟಕದಿಂದ ಬಂದ ಜನ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನನ್ನ ಹಿಂದೆ ಇದ್ದಾರೆ ಎಂದು ಮುಖ್ಯ ಮಂತ್ರಿಗಳ ಮೇಲೆ ಮತ್ತು ರೆವೆನ್ಯೂ ಮಂತ್ರಿಗಳ ಮೇಲೆ ಕೈಹಾಕುತ್ತಿದ್ದರೆ ಅವರ ಸ್ಥಾನಮಾನವೇನು ? ಅದಕ್ಕೆ ಧಕ್ಕೆ ಬರಬಹುದೋ ಏನೋ ಎಂದು ನನಗೆ ಅನುಮಾನವಾಗುತ್ತಿದೆ. ಇಂತಹ ರಾಜಕೀಯ ಮಾಡುವವರನ್ನು ತಾವು ಹೇಗೆ ನಂಬುತ್ತೀರಿ ? ಪಶು ಸಂಪತ್ತನ್ನು ಅಭಿವೃದ್ಧಿಪಡಿಸಬೇಕು ಮತ್ತು ಎಲ್ಲ ವಿಧವಾದ ಸೌಕರ್ಯಗಳನ್ನೂ ಕೊಟ್ಟು ಕಾಪಾಡಬೇಕು, ಮತ್ತು ಬೆಂಗಳೂರಿನ ಸುತ್ತ ಮುತ್ತಲೂ ಜರ್ಸಿ ಬುಲ್ಸ್‌ಗಳನ್ನು ತರಿಸಿ ತಳಿಗಳನ್ನು ಬೆಳೆಯಲು ಬಹಳ ಉಗ್ರವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದರೆ ಅದು ಸಮಾಧಾನವಾಗುವುದಿಲ್ಲ. ರೆವೆನ್ಯೂ ಮಂತ್ರಿಗಳು ಇದಕ್ಕೆ ವ್ಯಾಜ್ಯ ಮಾಡುವುದು ಸರಿಯಲ್ಲ ಎಂದು ಹೇಳುತ್ತಾರೆ. ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡು ಇಲ್ಲಿ ಎಲ್ಲ ಚೆನ್ನಾಗಿ ನಡೆಯುತ್ತಿದೆ. ತಳಿಗಳು ಅಭಿವೃದ್ಧಿಗೋಸ್ಕರ ಕೈಗೊಂಡಿರತಕ್ಕ ವ್ಯವಹಾರವೇ ಇದು ಎಂದು ನಾನು ಕೇಳುತ್ತೇನೆ. ಬರೀ ಟೂರು ಮಾಡುವುದಕ್ಕೋಸ್ಕರ ರಾಜಕೀಯ ವ್ಯವಹಾರ ಮಾಡುತ್ತಿರುವ ಇಂತಹ ಅಧಿಕಾರಿಗಳ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಹಾಗೆ ಇನ್ನೂ ಮುಂದೆ ಹೋಗಿ ಹೆಬ್ಬಾಳ ಕಾಲೇಜುವರೆಗೆ ಹೋದರೆ ಕಾಲೇಜು ಒಳಗೇನೋ ಎಲ್ಲವೂ ಸರಿಯಾಗಿರುವಂತೇನೇ ನನಗೆ ಕಾಣುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಈ ರೀತಿಯಾದ ಅವ್ಯವಹಾರಗಳನ್ನು ನಡೆಸುವುದಕ್ಕೆ ಅವಕಾಶ ಕೊಡುವುದು ಅವರಿಗೆ ಗೌರವ ತರುವಂತಹುದಲ್ಲ. ಸರಕಾರದಲ್ಲಿರುವ ಒಂದು ಇಲಾಖಾ ಮುಖ್ಯಾಧಿಕಾರಿಗಳು ಹೀಗೆ ವ್ಯವಹಾರ ಮಾಡುತ್ತಿದ್ದರೆ ಇವರಿಗಿರತಕ್ಕ ಅಧಿಕಾರದ ವ್ಯಾಪ್ತಿಯೇನು ? ಇದರ ಮೇಲೆ ಇವರು ಇಲ್ಲದ್ದು ಎಷ್ಟು ಕೇಸುಗಳನ್ನು ಡಿಸ್‌ಪೋಸು ಮಾಡಿದ್ದಾರೆ, ಇವರಿಂದ ಎಷ್ಟು ತಪ್ಪುಗಳಾಗುತ್ತಿವೆ ಎನ್ನುವುದೊಂದನ್ನೂ ಸರಕಾರ ಸರಿಯಾಗಿ ಲೆಕ್ಕಕ್ಕೆ ತೆಗೆದುಕೊಂಡಂತೆ ಕಾಣುವುದಿಲ್ಲ. ಅಲ್ಲದೆ ಇಂತಹ ಇಲಾಖಾ ಮುಖ್ಯಾಧಿಕಾರಿಗಳು ಇನ್ನೂ ಒಂದು ವರ್ಷದ ಎಕ್ಸ್‌ಟೆನ್‌ಷನ್ ಪಡೆಯಲು ಹವಣಿಸುತ್ತಿದ್ದಾರೆಂದು ಕೇಳುತ್ತೇನೆ. ಇವರು ಇನ್ನು ಒಂದು ವರ್ಷ ಕಾಲ ಅನಿಮಲ್ ಹಸ್‌ಬೆಂಡ್ರಿ ಇಲಾಖೆಯಲ್ಲಿ ಇದ್ದು ಪಶು ಸಂಗೋಪನ ಖಾತೆಯಲ್ಲಿ ತಳಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾದೀತೇ ? ಇಂತಹ ಅಧಿಕಾರಿಗಳಿಗೆ ಖಂಡಿತವಾಗಿ ಎಕ್ಸ್‌ಟೆನ್‌ಷನ್ನು ಕೊಡಬಾರದು, ಹಾಗೆ ಕೊಟ್ಟರೆ ಈ ಇಲಾಖೆಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ (ಬಾಗೇವಾಡಿ).—ಸ್ವಾಮಿ, ಮಾನ್ಯ ಕಂದಾಯ ಮಂತ್ರಿಗಳು ಇಟ್ಟಿರುವ ಡಿಮ್ಯಾಂಡನ್ನು ಸ್ವಾಗತ ಮಾಡುತ್ತ, ಸರ್‌ಛಾರ್ಜು ಹಾಗೂ ಲ್ಯಾಂಡು ಮಾರ್ಟುಗೇಜು ಬ್ಯಾಂಕಿನ ಮೂಲಕ ಸಾಲಗಳನ್ನು ಕೊಡುವುದರ ಬಗ್ಗೆ ಸರಕಾರವನ್ನು ಅಭಿನಂದಿಸುತ್ತೇನೆ.

ನಮ್ಮ ಬಿಜಾಪುರ ಜಿಲ್ಲಾ ಬರಗಾಲದ ಜಿಲ್ಲೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ನಾವು ಯಾವಾಗಲೂ ಬರಗಾಲದ ವಿಷಯದ ಬಗ್ಗೆ ಮಾತನಾಡುತ್ತೇವೆ. ಅದಕ್ಕಾಗಿ ತಾವು ಬರಗಾಲ ಪರಿಹಾರದ ವಿಷಯವಾಗಿ ಕೆಲಸ ತೆಗೆದುಕೊಳ್ಳಬೇಕು. ನಮ್ಮ ಭಾಗದಲ್ಲಿ 18 ಇಂಚಿನಷ್ಟು ಮಳೆ ಕೂಡ ಬರುವುದಿಲ್ಲ, ಅಲ್ಲದೆ ನಮ್ಮ ಜಿಲ್ಲೆಗೆ ಬರಗಾಲ ಎನ್ನುವುದು ಎರಡು ವರ್ಷಕ್ಕೊಮ್ಮೆ ಬರುತ್ತಲೇ ಇರುತ್ತದೆ. ಅಲ್ಲಿ ಸುಮಾರು 8 ಆಣೆ ಬೆಳೆ ಕೂಡ ಬರುವುದಿಲ್ಲ. ನಮ್ಮ ಭಾಗದಲ್ಲಿ ಕೆರೆಗಳು ಹೆಚ್ಚಾಗಿ ಇಲ್ಲ. ಹಿಂದೆ ಸರಕಾರದವರು ಇಲ್ಲಿ ಹೇಳಿದಾಗ ನಮ್ಮ ಭಾಗದಲ್ಲಿರುವ ಸುಮಾರು 17 ಕೆರೆಗಳಿಗೆ ಎಸ್ಟಿಮೇಟುಗಳು ತಯಾರಾಗಿದ್ದವು ಅವುಗಳನ್ನು ಮಾಡಿದರೆ ನಮ್ಮ ಭಾಗದ ಜನಕ್ಕೆ ಬಹಳ ಅನುಕೂಲವಾಗುತ್ತವೆ. ನಮ್ಮಲ್ಲಿ 20 ಮೈಲಿಗೆ ಸಹ ಒಂದೊಂದು ಕೆರೆ ಇಲ್ಲ. ಇತರ ಭಾಗಗಳಲ್ಲಿರುವಂತೆ ಎರಡು ಮೂರು ಮೈಲಿಯೊಳಗಡೆ ಕೆರೆಗಳು ಇಲ್ಲ. ಆದುದರಿಂದ ನಮ್ಮ ಭಾಗದಲ್ಲಿ ಇರುವ ಕೆರೆಗಳನ್ನಾದರೂ ಇಚ್ಚು ಹೆಚ್ಚಾಗಿ ದುರಸ್ತು ಮಾಡಿಸಿಕೊಡಬೇಕು ಎಂದು ಕೇಳುತ್ತೇನೆ. ವಿಜಾಪುರ ಜಿಲ್ಲೆಯಲ್ಲಿ ಕೆಲವು ಕೆರೆಗಳ ಎಸ್ಟಿಮೇಟು ತಯಾರು ಮಾಡಿ ಕೊಟ್ಟರೆ ಸ್ವಲ್ಪಮಟ್ಟಿಗಾದರೂ ಬರಗಾಲದ ಭಾಗಗಳಿಗೆ ಅನುಕೂಲವಾಗುತ್ತದೆ. ಆದುದರಿಂದ ಇಲ್ಲಿ ಯಾವ ಯಾವ ಕೆರೆಗಳಾಗಬೇಕು ಎನ್ನುವುದಕ್ಕೆ ಸರ್ವೆ ಮಾಡಿಸಿ ಬೇಗನೆ ಎಸ್ಟಿಮೇಟು ಮಾಡಿಸಿಕೊಡಬೇಕೆಂದು ಸರಕಾರದಲ್ಲಿ ಕೇಳುತ್ತೇನೆ.

ಇನ್ನು ಬಾವಿಗಳಿಗಾಗಿ ವಿಜಾಪುರದ ಡಿವಿಜನಲ್ ಕಮಿಷನರು ಪಂಪುಸೆಟ್ಟುಗಳನ್ನು ಕೊಡಬೇಕೆಂದು ಮಾಡಿದ್ದಾರೆ. ನಮ್ಮ ಬಾಗೇವಾಡಿ ತಾಲ್ಲೂಕಾದಲ್ಲಿ ಬಿ. ಡಿ. ಓ. ಆಫೀಸಿನಲ್ಲಿ ಒಂದು ಬಾವಿಯ ಹಂಚುವಿಕೆಗೋಸ್ಕರ ಒಂದು ತಗಾಯಿ ಸಾಲದ ಮೀಟಿಂಗನ್ನು ಕೂಡಿಸಿದ್ದರು. ಅದರಂತೆ ಸರಕಾರದವರು 60 ಸಾವಿರದಷ್ಟು ಹಣ ಕೊಟ್ಟಿದ್ದರು ಎಂದು ಕೇಳುತ್ತೇನೆ. ಆದರೆ ಬಾವಿ ಮತ್ತು ಪಂಪುಸೆಟ್ಟುಗಳಿಗಾಗಿ ಹಣ ಬಹಳ ಜನ ಬೇಡುತ್ತಿದ್ದರು, 600 ಅರ್ಜಿಗಳು ಬಿ.ಡಿ.ಓ. ಮುಖಾಂತರ

ಮಂಜೂರಾಗಿದ್ದವು. 60 ಜನರಿಗೆ ಮಾತ್ರ ಕೊಡಲಿಕ್ಕಾಯಿತು. ಈ ಎಲ್ಲ ಬಾವಿಗಳನ್ನೂ ತೆಗೆದುಕೊಳ್ಳಲಿಕ್ಕೆ ಮತ್ತು ಪಂಪುಸೆಟ್ಟುಗಳಿಗೆ 14 ಲಕ್ಷ ರೂಪಾಯಿಗಳು ಬೇಕು. ಆದರೆ ಕಡಮೆ ಹಣ ಒದಗಿಸಿದರೆ ಯಾರಿಗೆ ಕೊಡಬೇಕು ? ಆದುದರಿಂದ ಇಲಾಖೆಯವರು ಆಯಾ ತಾಲ್ಲೂಕು ಬೋರ್ಡುಗಳವರಿಂದ ಎಷ್ಟು ಜನಕ್ಕೆ ಬಾವಿಗಳಿಗಾಗಿ ಬೇಡಿಕೆ ಬರುತ್ತದೋ ಅದರಂತೆ ಬಾವಿಗಳನ್ನೂ ಸ್ಯಾಂಕ್ಷನ್ನು ಮಾಡಬೇಕೆಂದು ಹೇಳುತ್ತೇನೆ. ಬೆಳಗಾಂ ಡಿವಿಜನ್ನಿನಲ್ಲಿ ಹೆಚ್ಚಿನ ಹಣ ಕೊಟ್ಟು ಬಾವಿಗಳನ್ನು ಮಾಡಿಸಿ ಕೊಟ್ಟರೆ ಬರಗಾಲದ ಕಷ್ಟಗಳನ್ನು ಜನರಿಗೆ ತಪ್ಪಿಸಲಿಕ್ಕೆ ಸಹಾಯವಾದೀತು. ಅದರಿಂದ ಬಾವಿಯ ನೀರನ್ನು ಪಯೊಗಿಸಿಕೊಂಡು ಬೆಳೆ ಮಾಡಲು ಅನುಕೂಲವಾಗುತ್ತದೆ. ಆದರೆ ನಮ್ಮ ಭಾಗದಲ್ಲಿ ಬರಗಾಲಕ್ಕಾಗಿ ರೋಡು ಕೆಲಸಗಳನ್ನು ಮಾಡಲು ಸಾಕಾದಷ್ಟು ಹಣ ಕೊಡುತ್ತಿಲ್ಲ. ಪಂಪುಸೆಟ್ಟುಗಳಿಗೂ ಸಾಕಾಗುವಷ್ಟು ಹಣ ಸಿಕ್ಕುತ್ತಿಲ್ಲ ಅಲ್ಲದೆ ಹಿಂದೆ ಬರಗಾಲದಲ್ಲಿ ಕೆಲವು ರೋಡುಗಳನ್ನು ಮಾಡಬೇಕೆಂದು ತೆಗೆದು ಮಾಡಿದ್ದ ರೋಡುಗಳು ಮಳೆ ಬಂದಾಗ ಅವು ಪೂರ್ತಿಯಾಗಿ ಕೊಚ್ಚಿ ಹೋದವು. ಆದುದರಿಂದ ಒಳ್ಳೆಯ ರೋಡುಗಳನ್ನಾದರೂ ಬೇಗನೆ ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ತಾಳೀಕೋಟೆಯ ಭಾಗದಲ್ಲಿ ಸರ್ಪಾಮ ಇಮ್ಮಾನಕ ಜಮೀನುಗಳಿಗೆ ರೈತರಿಗೆ ಜಮೀನುಗಳ ಮೇಲೆ ಸಾಲಗಳು ಸರಿಯಾಗಿ ಸಿಗುತ್ತಿಲ್ಲ. ಬಾಗೇವಾಡೀ ಭಾಗದಲ್ಲೂ ರೈತರಿಗೆ ಸಾಲ ಸಿಕ್ಕುತ್ತಿಲ್ಲ. ಅಲ್ಲದೆ ನಮ್ಮ ಭಾಗದ ರೈತರಿಂದ ಹೆಚ್ಚು ಕಂದಾಯ ಉತ್ಪತ್ತಿಯಾಗುತ್ತದೆ. ಇದರಿಂದ ಇವರುಗಳಿಗೆ ಅನುಕೂಲ ಮಾಡಿಕೊಡಬೇಕು. ಈಗಾಗಲೇ ಮಾನ್ಯ ಸದಸ್ಯರಾದ ಪಾಟೀಲ್‌ರವರು ಹೇಳಿದ ಹಾಗೆ ಕನ್‌ಸಾಲಿಡೇಷನ್ನು ಬಾಗೇವಾಡಿ ಹಾಗೂ ಇಂಡೀ ತಾಲ್ಲೂಕಿನಲ್ಲಿ ಮಾಡಿರುವುದರಿಂದ ಅಲ್ಲಿರುವ ಒಂದು ಭೂಮಿಯ ಮೇಲೂ ರೈತರಿಗೂ ಸಾಲಗಳು ಸಿಗುತ್ತಿಲ್ಲ. ಸರಕಾರದೊಳಗೆ ನಾನು ವಿನಂತಿ ಮಾಡುವುದೇನೆಂದರೆ ಈ ಕಾಯಿದೆಯನ್ನು ನಮ್ಮ ಜಿಲ್ಲೆಯಲ್ಲಿ ಎಲ್ಲಿಯೂ ಪ್ರಾರಂಭಿಸಬೇಡಿರಿ. ಇದ್ದದ್ದನ್ನು ಸಹ ತೆಗೆದರೆ ಅನುಕೂಲವಾಗುತ್ತದೆ. ನಮ್ಮ ಜಿಲ್ಲೆಗೆ ಬಾವಿಯ ಸಲುವಾಗಿ ತಗಾಯಿ ಸಾಲಗಳನ್ನು ಕೊಡಿಸಿದರೆ ಇಲ್ಲಿನ ಜನಕ್ಕೆ ಅನುಕೂಲ ಮಾಡಿದ ಹಾಗಾಗುತ್ತದೆ. ನಮ್ಮಲ್ಲಿ ಮಳೆ ಬರುವುದು ಕಷ್ಟ ಅಲ್ಲದೆ ಇಲ್ಲಿ ಕಡಮೆ ಧಾನ್ಯ ಬರುತ್ತಿದೆ. ಬಿಜಾಪುರದಲ್ಲೇ ಈಗ ಜೋಳ ಒಂದು ಚೀಲಕ್ಕೆ 50 ರೂ. ನಂತಾಗಿದೆ. ಗೋಧಿ ಜೋಳ ಬೆಳೆಯಲು ಅನುಕೂಲವಾಗುವಂತೆ ಬಾವಿಗಳನ್ನು ಮಾಡಿಸಿಕೊಟ್ಟರೆ ಅನುಕೂಲವಾಗುತ್ತದೆ. ಬಿಜಾಪುರ ಜಿಲ್ಲೆಯಿಂದ ಆರಿಸಿಬಂದಿರುವ ಎಂ.ಎಲ್.ಎ. ಯವರೆಲ್ಲ ನನಗೆ ಮಾತನಾಡಲು ಹೇಳಿರುವುದರ ಸಲುವಾಗಿ ನಮ್ಮ ವಿಜಾಪುರ ಜಿಲ್ಲೆ ಬರಗಾಲ ಜಿಲ್ಲೆಯಾದುದರಿಂದ ನನಗೆ Famine Demand ಮೇಲೆ ಮಾತನಾಡಲು ಅವಕಾಶಕೊಟ್ಟುದರ ಸಲುವಾಗಿ ನಾನು ಅಧ್ಯಕ್ಷರಿಗೆ ವಂದಿಸುತ್ತೇನೆ.

11 A.M.

ಶ್ರೀ ಟಿ. ಕೆ. ಕಂಬ್ಳಿ (ಕುಂದಗೋಳ್).—ಸ್ವಾಮಿ, ಈ ದಿವಸ ನಮ್ಮ ಮಂತ್ರಿಗಳು ಸಭೆಯ ಮುಂದಿಟ್ಟಿರತಕ್ಕ ಆರು ಡಿಮ್ಯಾಂಡ್‌ಗಳನ್ನೂ ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆ ಸ್ವಾಗತಿಸಿದ ನಂತರ ನಾನು ಸರ್ಕಾರದವರಿಗೆ ನನ್ನ ಒಂದೆರಡು ಸಲಹೆಗಳನ್ನು ಕೊಡ ಬಯಸುತ್ತೇನೆ. ಈ ಕೆಲವು ನಮ್ಮ ಸ್ನೇಹಿತರು ಸರ್ಕಾರವನ್ನು ಟೀಕಾ ಮಾಡಿದರು ಆದರೆ ಹಾಗೆ ಟೀಕಾ ಮಾಡಲೇಬೇಕು ಅನ್ನುವವರ ಪೈಕಿ ನಾನೂ ಒಬ್ಬ. ಆದರೆ ನಾವು ಮಾಡತಕ್ಕ ಟೀಕಾ ಒಂದು ವಿಧಾಯಕವಾಗಿರಬೇಕೇ ವಿನಾ ಅದು ಒಂದು ವಿಘಾತಕವಾಗಿರಬಾರದು.

ಈಗ ಭೂ ಕಂದಾಯದೊಳಗೆ ಒಂದು ಸರ್ಛಾರ್ಜ್ ಅಂತ ಮಾಡಿದ್ದಾರೆ. ಈ ವರ್ಷ ಅದನ್ನು ಕೈಬಿಡಬೇಕೆಂದು ಮಾಡಿದ್ದಾರೆ. ಅದನ್ನು ನಾನೂ ಸ್ವಾಗತ ಮಾಡುತ್ತೇನೆ. ಆದರೆ ಈ ಹಿಂದೆ ಕೆಲವು ದೇಶೀ ಅರಸರ ಕಾಲದಿಂದಲೂ ಕೆಲವು ಜಮೀನುಗಳ ಕಂದಾಯ ಬಹಳ ದುಬಾರಿ ಆಗಿದೆ. ಇಂಥ ಕೆಲವು ಹಳ್ಳಿಗಳಲ್ಲಿ ಎಲ್ಲಿ ಈ ಕಂದಾಯ ದುಪ್ಪಟಾಗಿರುತ್ತದೋ ಅಂಥ ಕಡೆಗಳಲ್ಲಿ ಈ ಸರ್ಛಾರ್ಜನ್ನು ವಸೂಲ್ಮಾಡಬಾರದೆಂದು ಹೇಳಲಾಗಿತ್ತು. ಆದರೆ ಅಲ್ಲೀ ಸಹಾ ಅದನ್ನೀಗ ವಸೂಲ್ಮಾಡುತ್ತಿದ್ದಾರೆ. ಸರ್ಕಾರಕ್ಕೆ ಇದನ್ನು ಸೂಟ್‌ಬಿಡಲಿಕ್ಕೆ ಇನ್ನು ಸಾಧ್ಯವಾಗಿಲ್ಲ. ಇದಕ್ಕೆ ಸರಿಯಾದ ಮಾರ್ಗವೆಂದರೆ ಭೂಮಿಯನ್ನು ಜಾಗ್ರತೆಯಾಗಿ ರೀರಿವಿಜನ್ ಮಾಡಿದರೆ ಅನುಕೂಲವಾಗುತ್ತದೆ. ಒಂದೇ ಅಕ್ಕಪಕ್ಕದಲ್ಲಿರತಕ್ಕ ಜಮೀನುಗಳಿಗೆ ಒಂದಕ್ಕೆ ಮೂರು ರೂಪಾಯಿ ಕಂದಾಯ ವಿದ್ದರೆ, ಅದರ ಪಕ್ಕಕ್ಕೆ ಇರತಕ್ಕ ಜಮೀನಿಗೆ ಆರು ರೂಪಾಯಿ ಕಂದಾಯವಿರುತ್ತದೆ. ಇದರಿಂದ ರೈತರ ಉತ್ತೇಜನಕ್ಕೆ ಧಕ್ಕೆ ಬರುತ್ತದೆ. ಅಲ್ಲಿ ಇನ್ನೂ ರೀರಿವಿಜನ್ ಆಗದೆ 4-5 ಡಿವಿಜನ್‌ಗಳು ಹಾಗೇ ಉಳಿದಿವೆ. ಅಲ್ಲಿಗೆ ಸರ್ಕಾರದವರು ರೀರಿವಿಜನ್ ಮಾಡಿ ಅನಂತರ ಕಂದಾಯವನ್ನು ಅಲ್ಲಿ ವಿಧಿಸಬೇಕೆಂದು ಹೇಳುತ್ತೇನೆ. ಈಗ ಸರ್ಕಾರದವರು ಲೆಕ್ಕ ಹಾಕುತ್ತಿರುವ. ಆಣೇವಾರಿ ಬಹಳ ಹಳೇ ಕಾಲದ್ದು. ರೆವಿನ್ಯೂ ಇಲಾಖೆ ಇತರ ಎಲ್ಲಾ ಇಲಾಖೆಗಳಿಗೂ ಒಂದು ತಾಯಿ ಇಲಾಖೆ

(ಶ್ರೀ ಟಿ. ಕೆ. ಕಂಬ್ಳಿ)

ಇದ್ದಂತೆ. ಆದುದರಿಂದ ಈ ಆಣೇವಾರಿಯನ್ನು ಯಾವ ತರಹೆಯಿಂದ ನೋಡಿದರೂ ಇದು ಈ ರೆವಿನ್ಯೂ ಇಲಾಖೆಯ ಮೇಲೆ ಒಂದು ಅಸಂಬದ್ಧವಾದ ಟ್ಯಾಕ್ಸನ್ನು ವಸೂಲ್ಮಾಡುತ್ತಿರುವಂತೆ ಕಾಣುತ್ತದೆ. ಮಳೆಬಾರದಿದ್ದಾಗ ಕಂದಾಯವನ್ನು ವಸೂಲ್ಮಾಡಬಾರದೆಂದು ಹೇಳಿದೆ. ಈಗಿನ ಈ ಆಣೇವಾರಿ ಒಂದು ಸೈಂಟಿಫಿಕ್ಕಾಗಿಲ್ಲವಾದ್ದರಿಂದ ರೈತನಿಗೆ ಬಹಳ ಕಷ್ಟ ಉಂಟಾಗಿದೆ. ಇನ್ನಾದರೂ ಈ ಆಣೇವಾರಿಯನ್ನು ಸರ್ಕಾರದವರು ಒಂದು ಸೈಂಟಿಫಿಕ್ಕಾಗಿ ಮಾಡಬೇಕೆಂದು ಅಗದೀ ವಿನಯದಿಂದ ಕೇಳಿಕೊಳ್ಳುತ್ತೇನೆ. ಇನ್ನು ಪಟೇಲ್ ಶ್ಯಾನುಭೋಗರ ನೇಮಕವನ್ನು ರದ್ದುಮಾಡಿ ಬೇರೆಯವರನ್ನು ನೇಮಕ ಮಾಡತಕ್ಕ ಬಗ್ಗೆ ಇಲ್ಲಿಯವರೆಗೂ ಒಂದು ತಡೆ ಬಂದು ಅದು ಹಾಗೇ ನಿಂತುಹೋಗಿದೆ. ಆ ವಿಚಾರದಲ್ಲಿ ಸರ್ಕಾರದವರು ಕೂಡಲೇ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳಬಯಸುತ್ತೇನೆ. ಇನ್ನು ನಮ್ಮಲ್ಲಿ ಆ ಸ್ಮೈಮನ್ ಸ್ಕೀಮಿನಿಂದ ರೈತರಿಗೆ ಬಹಳ ಆತಂಕ ವುಂಟಾಗಿದೆ. ಕೆಲವು ಸೂಟುಗಳನ್ನು ಬಿಟ್ಟರೆ ಇನ್ನುಳಿದ ಕೆಲವು ಜಿಲ್ಲೆಗಳಲ್ಲಿ ಕೆಲವು ಕೇಸುಗಳಲ್ಲಿ ಬಹಳ ಅನ್ಯಾಯವಾಗಿದೆ. 20-30 ವರ್ಷಗಳಿಂದ ಕೆಲವು ಹಾಗೇ ನಿಂತಿವೆ. ಅವುಗಳನ್ನು ಸೂಟ್ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಸಬ್‌ರಿಜಿಸ್ಟ್ರಾರ್ ಕಛೇರಿಯ ವಿಷಯವನ್ನು ಹೇಳಬೇಕೆಂದರೆ ಅಲ್ಲಿ ಯಾವ ಅನುಕೂಲವೂ ಇಲ್ಲ. ಒಂದೊಂದು ಕಾಪಿಯನ್ನು ತೆಗೆದುಕೊಳ್ಳಬೇಕೆಂದರೆ 6 ತಿಂಗಳು ಹಿಡಿಯುತ್ತದೆ. ಈ ಹಿಂದೆ ಬೊಂಬಾಯಿ ಸರಕಾರದಲ್ಲಿದ್ದಾಗ ಹೀಗಾಗುತ್ತಿರಲಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ಒಬ್ಬ ರೈತ ಒಂದು ಟ್ರ್ಯಾಕ್ಟರನ್ನು ತೆಗೆದುಕೊಳ್ಳಲು ತನ್ನ ಜಮೀನಿನ ಒಂದು ಕ್ರಯಪತ್ರದ ಕಾಪಿಗೆ ಹಾಕಿದರೆ ಅದು 6 ತಿಂಗಳಾದರೂ ಸಿಕ್ಕುವುದಿಲ್ಲ. ಆದರೆ ನಮ್ಮ ಕಂದಾಯದ ಮಂತ್ರಿಗಳು ಏನೇನೋ ಹೊಸ ಕಾನೂನುಗಳನ್ನು ಮಾಡುತ್ತಿದ್ದಾರೆ. ಆದರೆ ಇಂಥಾದ್ದನ್ನು ಸರಿಪಡಿಸಲಿಕ್ಕಾಗಿಲ್ಲ. ಇನ್ನು ನಾವು ಬೊಂಬಾಯಿನಲ್ಲಿದ್ದಾಗ ಅಲ್ಲಿ ಒಂದು ಫೋಟೋ ಸಿಸ್ಟಂ ಬೇರೆ ಇತ್ತು. ಅದು ಇಲ್ಲಿಲ್ಲ. ಇಲ್ಲಿಯೂ ಅದನ್ನು ತಾವು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಇನ್ನು ಪಶುಸಂಗೋಪನದ ವಿಚಾರಕ್ಕೆ ಬಂದರೆ ನಾವು ಇದರಲ್ಲಿ ಕಾಲಕ್ಕೆ ತಕ್ಕಂತೆ ಹೊಸ ಪದ್ಧತಿಗಳನ್ನು ಅನುಸರಿಸಬೇಕು ಪ್ರಾಣಿಗಳಲ್ಲಿ ಆಹಾರಕ್ಕೆ ಬರತಕ್ಕದ್ದು ಎಂದರೆ ಈ ಕುರಿ ಒಂದು ಪ್ರಾಣಿಯಿದೆ. ಈ ಜಾತಿಯಲ್ಲಿ ಬರೀ ಮಟನ್ ಕುರಿಗಳೇ ಬೇರೆ ಇವೆ. ಅವುಗಳನ್ನು ನಮ್ಮ ಮೈಸೂರು ಸರ್ಕಾರ ಹೆಚ್ಚಿಗೆ ತರಿಸಿ ಇಲ್ಲಿ ಅನುಕೂಲ ಕಲ್ಪಿಸಬೇಕೆಂದು ಹೇಳುತ್ತೇನೆ ಇವುಗಳಿಂದ ಗೊಬ್ಬರವೂ ಸಹಾ ದೊರೆಯುತ್ತದೆ. ಆದರೆ ಇವುಗಳಿಗೆ ಸರಿಯಾದ ಒಂದು ಆಸ್ಪತ್ರೆಯಿಲ್ಲ. ಇದಕ್ಕೆ ಒಂದು ಟೂರಿಂಗ್ ಆಸ್ಪತ್ರೆಯನ್ನಾದರೂ ಏರ್ಪಡಿಸಬೇಕೆಂದು ಹೇಳುತ್ತೇನೆ.

ಇನ್ನು ಬರಗಾಲದ ಕಾಂಗಾರಿಗಳ ವಿಚಾರವನ್ನು ಹೇಳಬೇಕಾಗಿದೆ: ನಮ್ಮ ಧಾರವಾಡ ಜಿಲ್ಲೆಯಲ್ಲಿ ಅಲ್ಲಲ್ಲೇ ಕೆಲವು ಭಾಗದಲ್ಲಿ ಬರಗಾಲ ಬಿದ್ದಿದೆ. ಅಲ್ಲಿ ಕೂಡಲೇ ಬರಗಾಲ ಕಾಂಗಾರಿಗಳನ್ನು ಕೈಗೊಳ್ಳಬೇಕೆಂದು ಹೇಳಿ ನನಗೆ ಈ ನಾಲ್ಕು ಮಾತುಗಳನ್ನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಈ ಭೂಮಿಯ ವಿಚಾರ ಪೂರ್ವಕಾಲದಲ್ಲಿ ಹೇಗಿತ್ತೋ ಈಗಲೂ ಹಾಗೇ ಇದೆ. ಭೂಮಿಯನ್ನು ಮಾಯಾಜಾಲ ಮಾಡಿ ಸೃಷ್ಟಿಸಿ ಕೊಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಆದರೆ ಯಾವ ಒಬ್ಬ ಪೊಲಿಟಿಕಲ್ ಸಫರರ್‌ಗೆ ಜಮೀನಿರುವುದಿಲ್ಲವೋ ಅಂಥವನಿಗೆ ಜಮೀನನ್ನು ಕೊಡಬೇಕೆಂಬುದು ನ್ಯಾಯವಾದ್ದೇ. ಒಬ್ಬ ಪೊಲಿಟಿಕಲ್ ಸಫರರ್ ಎಂಬಾತನಿಗೆ ಮೊದಲೇನಾದರೂ ಜಮೀನಿತ್ತೋ, ಆತನಿಗೆ ಪೊಲಿಟಿಕಲ್ ಸಫರರ್ ಎಂದು ಹೇಳಿ ಎಷ್ಟು ಸಾರ್ತಿ ಜಮೀನನ್ನು ಕೊಡಲಾಗಿದೆ, ಅವನು ಹೀಗೆ ಜಮೀನನ್ನು ಪಡೆದುಕೊಂಡು ಎಷ್ಟಾವರ್ತಿ ಮಾರಾಟ ಮಾಡಿದ್ದಾನೆ ಎಂಬುದನ್ನೆಲ್ಲಾ ವಿಮರ್ಶೆಮಾಡಿ ಕೊಟ್ಟರೆ ಅದೊಂದು ರೀತಿ. ಆದರೆ ಹೀಗೆ ಮಾಡುತ್ತಿಲ್ಲ. ಒಬ್ಬನು ಈ ಊರಲ್ಲಿ ತಾನು ಪೊಲಿಟಿಕಲ್ ಸಫರರ್ ಎಂದು ಹೇಳಿ ಜಮೀನನ್ನು ಪಡೆದು, ಆನಂತರ ಅದನ್ನು ಅಲ್ಲಿ ಮಾರಾಟಮಾಡಿಬಿಟ್ಟು. ಅನಂತರ ಇನ್ನೊಂದೂರಿಗೆ ಹೋಗಿ ಅಲ್ಲಿ ಮತ್ತೆ ಅರ್ಜಿ ಹಾಕುತ್ತಾನೆ: ತಾನು ಪೊಲಿಟಿಕಲ್ ಸಫರರ್ ಎಂತ. ಅಲ್ಲಿಯೂ ಜಮೀನನ್ನು ಪಡೆದು ಅದನ್ನೂ ಮಾರಾಟಮಾಡಿ ಆನಂತರ ಇನ್ನೊಂದು ತಾಲ್ಲೂಕಿಗೆ ಹೊರಡುತ್ತಾನೆ. ಹೀಗೆ ಕೆಲವರಿಗೆ ಇದು ಖಾಯಂ ಉದ್ಯೋಗವಾಗಿಬಿಟ್ಟಿದೆ. ಆದ್ದರಿಂದ ಸರ್ಕಾರದವರು ಕೂಡಲೇ ಈ ವಿಚಾರಕ್ಕೆ ನಿಗಾಕೊಡಬೇಕೆಂದು ಹೇಳುತ್ತೇನೆ.

ಇನ್ನು ಕೋ-ಆಪರೇಟೀವ್ ಫಾರ್ಮಿಂಗ್ ವಿಚಾರಕ್ಕೆ ಬಂದರೆ-ಇವುಗಳಲ್ಲಿ ಕೆಲಸಮಾಡುತ್ತಿರುವ ಜನರು ಯಾರು ? ಇದರಿಂದ ಯಾರಿಗೆ ಅನುಕೂಲವಾಗುತ್ತದೆ, ? ಇದರಲ್ಲಿ ಕೆಲವು ಇಂಟರೆಸ್ಟೆಡ್ ಜನರು ಸೇರಿಕೊಂಡು ಅಲ್ಲಿ ಬರತಕ್ಕ ಆದಾಯವನ್ನೆಲ್ಲಾ ತಿಂದು ಹಾಕುತ್ತಿದ್ದಾರೆ. 100-200

ರೂಪಾಯಿಗಳನ್ನು ಕೊಟ್ಟು ಎತ್ತುಗಳನ್ನು ತಂದಿದ್ದರೆ ಅವುಗಳಿಗೆ 600-800 ರೂಪಾಯಿಗಳ ಬೆಲೆ ಹಾಕಿ ಆ ಸೊಸೈಟಿಗಳ ಮೇಲೆ ಅಲ್ಲಸಲ್ಲದ ಸಾಲಗಳನ್ನು ಹೇರುತ್ತಿದ್ದಾರೆ. ಹೀಗೆ ತೋರುಗಾಣಿಕೆ ಒಂದು ಸೊಸೈಟಿ ಎಂತಮಾಡಿ ಸರ್ಕಾರದ ಹಣವನ್ನು ತಿಂದು ಹಾಕಬಾರದೆಂದು ಹೇಳುತ್ತೇನೆ. ಜಮೀನಿನಲ್ಲಿ ಭೂಕಂದಾಯದ ವ್ಯವಸ್ಥೆ ಬಹಳ ಉತ್ತಮವಾಗಬೇಕು. ಧಾರಣೆವಾಸಿಗಳು ಕಡಮೆಯಾಗಬೇಕು. ಎಲ್ಲಾ ಧಾರಣೆಗಳೂ ಜಾಸ್ತಿಯಾಗುತ್ತಲೇ ಇವೆಯೆಂದು ಎಲ್ಲರೂ ಹೇಳುತ್ತಾ ಇದ್ದಾರೆ. ಆದರೆ ಇತ್ತೀಚೆಗೆ ಭೂಕಂದಾಯವನ್ನು ವರ್ಷಂಪ್ರತಿ ಜಾಸ್ತಿಮಾಡಬೇಕೆಂದು ಹೇಳುವುದಕ್ಕೆ ಹೊರಟಿದ್ದಾರೆ. ನಾನು ಹೇಳುವುದೇನೆಂದರೆ ಭೂಕಂದಾಯವನ್ನು ಆದಷ್ಟು ಕಡಿಮೆ ಮಾಡಬೇಕು, ಏಕೆಂದರೆ ರೈತನಾದವನು ಏನು ಬೆಳೆದರೂ ಹೆಚ್ಚಿನ ಉತ್ಪತ್ತಿ ಬರುವುದಿಲ್ಲ. ಈಗ ಸರ್ಛಾರ್ಜು ವಜಾ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ಅದನ್ನು ಪ್ರತಿಸಲವೂ ಕೊಡಬೇಕೆಂದು ಹೇಳುತ್ತಿದ್ದಾರೆ. ರೈತನಿಗೆ ಧಾರಣೆವಾಸಿಗಳು ಕಡಿಮೆ ಮಾಡಬೇಕಾದರೆ ಅವನಿಗೆ ನ್ಯಾಯವಾಗಿ ಎಲ್ಲಾ ಸೌಲಭ್ಯಗಳನ್ನು ಕೊಡಬೇಕು ಮತ್ತು ಕಂದಾಯ ಕಮ್ಮಿಮಾಡಬೇಕು. ಮತ್ತು ಪ್ರತಿಸಲವೂ ಸರ್ಛಾರ್ಜು ವಜಾಮಾಡಬೇಕು. ಎಲ್ಲಿ ಮಳೆಬೆಳೆ ಕಮ್ಮಿಯಾಗಿದೆ ಎಂದು ಹೇಳಿದರೆ ಅಲ್ಲಿಗೆ ಸಾಕಷ್ಟು ಪರಿಹಾರಕೊಡಿ. ಗೋಕಟ್ಟೆಗಳನ್ನು ತೆಗೆಸಬೇಕು. ಬಾವಿಗಳನ್ನು ತೆಗೆಸಬೇಕು. ನೀರಾವರಿ ಬಾವಿಗಳಿಗೂ, ಮತ್ತು ಗೋಕಟ್ಟೆಗಳಿಗೂ ಹೆಚ್ಚಿಗೆ ಹಣವನ್ನು ಒದಗಿಸಬೇಕು. ಇದಕ್ಕಾಗಿ ತಾಲ್ಲೂಕು ಬೋರ್ಡಿನ ಅಧ್ಯಕ್ಷರು ಮತ್ತು ಬಿ.ಡಿ.ಓ. ಗಳು ಎಷ್ಟೇ ಪ್ರಯತ್ನಪಟ್ಟರೂ ಇನ್ನೂ ಅವು ನಮ್ಮ ತಾಲ್ಲೂಕಿಗೇ ಮಂಜೂರಾಗಿ ಬಂದಿಲ್ಲ. ಸುಮಾರು 8-10 ವರ್ಷಗಳಿಂದಲೂ ಇವು ಹಾಗೆಯೇ ಪೆಂಡಿಂಗ್‌ನಲ್ಲಿವೆ. ಹಿಂದೆ ಒಂದುಸಾರಿ ಮುಖ್ಯಮಂತ್ರಿಗಳು ನಮ್ಮ ತಾಲ್ಲೂಕಿಗೆ ಬಂದಾಗ ಇಲ್ಲಿ 15-20 ಗೋಕಟ್ಟೆಗಳನ್ನು ಮಾಡುತ್ತೇವೆಂದು ಹೇಳಿದ್ದರು. ಆದರೆ ಇವತ್ತಿನವರೆಗೂ ಸರ್ಕಾರ ಆ ಬಗ್ಗೆ ಏನೂ ಆರ್ಡರ್ ಜಾರಿಮಾಡಲಿಲ್ಲ. ಇದು ಎಷ್ಟರಮಟ್ಟಿಗೆ ಜಾರಿಯಾಗುತ್ತದೋ ನೋಡಬೇಕು.

[Mr. Speaker in the Chair.]

ಇನ್ನು ಸಬ್ ರಿಜಿಸ್ಟ್ರಾರ್ ವಿಷಯದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಹಿಂದೆ ಬ್ರಿಟಿಷರ ಕಾಲದಲ್ಲಿ ಮಾತ್ರ ಲಂಚ ಇತ್ತೆಂದು ಹೇಳುತ್ತಾರೆ. ಆದರೆ ಈಗ ಯಾವ ಆಫೀಸಿಗೇ ಹೋಗಿ ನೋಡಿ. ಅದಕ್ಕಿಂತ ಡಬ್ಬಲ್ ಆಗಿದೆ. ಅದು ಯಾವ ಕಾರಣದಿಂದಲೂ ಕಡಿಮೆಯಾಗಿಲ್ಲ. ಏನೋ ದುರದೃಷ್ಟವಶಾತ್ ಸದಸ್ಯರು ಜಮೀನುಗಳನ್ನು ಮಾರಾಟ ಮಾಡುವುದಕ್ಕೆ ಹೋಗಲಿಲ್ಲ. ಆದ್ದರಿಂದ ಅದನ್ನು ಯೋಚನೆಮಾಡಬೇಕು. ಫೋಡಿ ಡಿಪಾರ್ಟ್‌ಮೆಂಟ್ ರೀಕ್ಲಾಸಿಫಿಕೇಷನ್ ವಿಷಯವಾಗಿ ಹೇಳುವುದಾದರೆ, ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಜ್ಯ, ಅಪಹರಣ, ಕಳವು ಮುಂತಾದ ಸಣ್ಣಪುಟ್ಟ ವಾಜ್ಯಗಳಿಗೆ ಈ ಇಲಾಖೆಯೇ ಕಾರಣ. ಫೋಡಿ ಮಾಡುವಾಗ ಒಂದು ಲೆಕ್ಕಾಚಾರ ಹಾಕಿ ಲ್ಯಾಂಡ್ ರೆವಿನ್ಯೂ ಫೋಡಿಯಲ್ಲಿ ಯಾರು ಅನುಭವಸ್ಥರು ಇದ್ದಾರೋ ಅಂತಹವರಿಗೆ ಜಮೀನನ್ನು ಕೊಡಬೇಕು. ಅವರಿಗೆ ಸಂತೋಷವೆನಿಸಿದರೆ, ನೂರು ಎಕರೆಗಳನ್ನು ಸಾಗು ಮಾಡಿಕೊಡಬಹುದು. ಒಂದುವೇಳೆ ಬೇಡವಾಗಿದ್ದರೆ ಎರಡು ಎಕರೆಗಳನ್ನೂ ಕೂಡ ಕೊಡುವುದಿಲ್ಲ. ಜಮೀನನ್ನು ಎರಡು ವರ್ಷಗಳ ಕಾಲ ಉತ್ತುಬಿಟ್ಟರೆ ಅವನು ಚೆನ್ನಾಗಿ ಜಮೀನು ಮಾಡುತ್ತಾನೆಂದು ಒಂದು ಕಡೆ ಹೇಳುತ್ತೀರಿ. ಇನ್ನು ಕೆಲವು ಕಡೆಗಳಲ್ಲಿ ಉಳುವವರಿಗೆ ಜಮೀನು ಕೊಡುವುದಿಲ್ಲ. ಇದು ಬಹಳ ಅನ್ಯಾಯ. ಜಮೀನನ್ನು ಅನ್ಯಾಯ ರೀತಿಯಲ್ಲಿ ಫೋಡ್ ಮಾಡಿದರೆ ರೈತನಾದವನಿಗೆ ಹಕ್ಕು ಯಾವ ರೀತಿ ಬರುತ್ತದೆ ? ಇಂಥಾದ್ದನ್ನು ನಿರ್ಧರಿಸುವುದಕ್ಕೇ ಇವರ ಕೈಯಲ್ಲಿ ಸಾಧ್ಯವಾಗದಿದ್ದರೆ ಈ ಪ್ರಜಾಪ್ರಭುತ್ವದಲ್ಲಿ ಇವರಂತಹವರು ಇನ್ನೆಷ್ಟು ಜನ ಬಂದುಹೋಗಬೇಕೋ ಗೊತ್ತಿಲ್ಲ.

ಅಧ್ಯಕ್ಷರು.—ಎಷ್ಟು ಜನರು ಬಂದು ಹೋಗಬೇಕು ? I don't like that kind of criticism. I want members not to indulge in such kind of criticism.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇದುವರೆಗೆ 3-4 ರೆವಿನ್ಯೂ ಮಂತ್ರಿಗಳು ಬಂದು ಹೋದರು. ಈ ರೆವಿನ್ಯೂ ಖಾತೆಯನ್ನು ಸರಿಮಾಡುವುದಕ್ಕೆ ಇನ್ನುಮುಂದೆ ಯಾರ್‍ಯಾರು ಬಂದು ಹೋಗಬೇಕೋ ನೋಡೋಣ, ಇವರು ರೈತರ ಮಕ್ಕಳು ಎಂದು ಹೇಳುತ್ತಾ ರೈತರಿಗೆ ಅನ್ಯಾಯವಾಗಿ ಜಮೀನು ಫೋಡ್ ಮಾಡಿದ್ದಾರೆ. ಈಗ ರೀ-ಕ್ಲಾಸಿಫಿಕೇಷನ್ ಮಾಡುತ್ತೇವೆಂದು ಹೇಳುತ್ತಾರೆ. ಜಮೀನಿನ ಬಗ್ಗೆ ಯಾರಾದರೂ ದುಡ್ಡು ಕೊಟ್ಟರೆ ಅದರ ಲೆಕ್ಕ ಇಲ್ಲ. ಅದರಿಂದ ಏನು ಆದಾಯ ಬರುತ್ತದೆಂಬುದಕ್ಕೆ ಸರಿಯಾದ ಲೆಕ್ಕವಿಲ್ಲ. ಉದಾಹರಣೆಗೆ ಹೇಳುವುದಾದರೆ, ಸಾಮಾನ್ಯವಾಗಿ ಎರಡು ತೆಂಗಿನ ಮರಗಳಿದ್ದರೆ ಒಂದು ಮರಕ್ಕೆ 60 ಕಾಯಿಗಳು ಬಿಡುತ್ತವೆ ಎಂಬುದಾಗಿ ಅಂದಾಜುಮಾಡಿ ಕಂದಾಯ ನಿಗದಿಮಾಡುತ್ತಾರೆ. ಮರ ಹಾಕಿರಬೇಕು, ಆದರೆ ಅದರಿಂದೇನು ಫಲ ಬರುತ್ತದೆ ಎಂಬುದನ್ನು ಇವರು ನೋಡುವಹಾಗಿಲ್ಲ. ರೆವಿನ್ಯೂ ಮಂತ್ರಿಗಳಾಗಿ ಶ್ರೀಮಾನ್ ಎಂ. ಪಿ. ಪಾಟೀಲರು, ಶ್ರೀಮಾನ್

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ಕಡಿದಾಳ್ ಮಂಜಪ್ಪನವರು ಹಿಂದೆ ಇದ್ದರು. ಈಗ ಶ್ರೀಮಾನ್ ಕೃಷ್ಣಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾರೆ. ಆದರೆ ನಮಗೆ ಬೇಕಾದವರು ಯಾರೂ ಇಲ್ಲ. ಆ ರೀತಿ ಮುಂದೆ ಬರುವವರೂ ಇಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ಮುಂದೆ ಮಾನ್ಯ ಸದಸ್ಯರೇ ಆಗಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದನ್ನು ಅವರು ಹೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಸರ್ಕಾರದವರು ಕಂದಾಯ ಕಡಿಮೆ ಮಾಡುವುದಲ್ಲದೆ ಗೋಕಟ್ಟೆಗಳನ್ನು ಆದಷ್ಟು ಜಾಗ್ರತೆ ಮಾಡಬೇಕು. ಪುರಾತನ ಕಾಲದಿಂದಲೂ ಕಾಡನ್ನು ಸಂರಕ್ಷಣೆ ಮಾಡುತ್ತೇವೆಂದು ಬಾಯಲ್ಲಿ ಹೇಳುತ್ತಲೇ ಇದ್ದಾರೆ. ಆದರೆ ಎಲ್ಲಿ ನೋಡಿದರೂ ಒಂದು ಮರ ಇಲ್ಲ. ಅಂತಹ ಜಮೀನುಗಳನ್ನು ಸುಮ್ಮನೆ ಅರಣ್ಯ ಇಲಾಖೆಯವರು ಇಟ್ಟುಕೊಳ್ಳುವುದಕ್ಕೆ ಬದಲು ಅದನ್ನು ಅಭಿವೃದ್ಧಿ ಮಾಡಬೇಕು, ಇಲ್ಲದಿದ್ದರೆ ರೆವಿನ್ಯೂ ಇಲಾಖೆಗೆ ಅದನ್ನು ಕೊಟ್ಟು ಆ ಜಮೀನುಗಳನ್ನು ಹಂಚಬೇಕು. ಒಂದು ಗರಿಕೆ ಹುಲ್ಲೂ ಸಹ ಬೆಳೆಯುವುದಕ್ಕೆ ಅವಕಾಶವಿಲ್ಲದ ಇರತಕ್ಕ ಜಮೀನನ್ನು ಗೋಮಾಳಕ್ಕೋಸ್ಕರ ಏತಕ್ಕೆ ಬಿಟ್ಟಿದ್ದೀರಾ ? ಮರಗಿಡಗಳನ್ನು ಬೆಳೆಸುವುದಕ್ಕೆ ವ್ಯವಸ್ಥೆಮಾಡಿ, ಇಲ್ಲದಿದ್ದರೆ ಆ ಜಮೀನನ್ನು ವ್ಯವಸಾಯಕ್ಕೋಸ್ಕರ ಜನರಿಗೆ ಕೊಟ್ಟುಬಿಡಿ. ಪಾಶ್ಚಾತ್ಯದೇಶಕ್ಕೆ ಸರ್ಕಾರದ ಹಣದಿಂದ ಹೋಗಿಬಂದಿದ್ದಾರೆ. ಅಲ್ಲಿ ಬೇಕಾದಷ್ಟು ಹಾಲನ್ನು ಮೆಷಿನ್ನುಗಳಿಂದ ಕರೆಯುವುದರಿಂದ ಯಥೇಚ್ಛವಾಗಿ ಹಾಲು ದೊರೆಯುತ್ತದೆ. ಆದರೆ ಇಲ್ಲಿ ಒಂದು ಹೊರೆ ಹುಲ್ಲು ತರಬೇಕಾದರೆ ಎಷ್ಟೋ ಶ್ರಮವಾಗುತ್ತದೆ. ಅಂದಮೇಲೆ ಅವರು ದನಗಳನ್ನು ಯಾವರೀತಿ ಸಾಕಬೇಕು ? ತಾನು ಉಡತಕ್ಕ ಬಟ್ಟೆ ಮಾರಿ ಹುಲ್ಲು ಕೊಳ್ಳುತ್ತಾನೆ. ಅವನು ಸಾಲವನ್ನು ಕೊಡದಿದ್ದರೆ ಅವನ ಮೇಲೆ ಡಿಕ್ರಿ ಮಾಡುತ್ತಾರೆ, ಫೈನ್ ಹಾಕುತ್ತಾರೆ, ಒಂದು ಸೇರು ಹಾಲನ್ನು ಕರೆಯಬೇಕಾದರೆ ಎಷ್ಟು ಹುಲ್ಲನ್ನು ತರಬೇಕೆಂಬುದನ್ನು ಲೆಕ್ಕಹಾಕುವ ಸ್ಥಿತಿಗೆ ಬಂದಿದೆ. ಇವರು ಮಾಡತಕ್ಕ ನಾಟಕದ ಭಾಷಣ ಗ್ರಾಮಾಂತರ ಜನಗಳು ಕೇಳಿದ್ದಾರೆ. ರೈತರು ಅದರಿಂದಲೇ ತೃಪ್ತಿ ಹೊಂದಬೇಕಾಗಿದೆ. ಇವರು ವಾಗ್ದಾನ ಮಾಡಿದಂತೆ ಯಾವ ಕಾರ್ಯವನ್ನೂ ಕಾರ್ಯಗತ ಮಾಡಿಲ್ಲ. ಬೆಂಗಳೂರು ಸುತ್ತುಮುತ್ತಲೂ ಹಾಲು ಸರಬರಾಜು ಮಾಡುವುದಕ್ಕೆ ಏರ್ಪಾಡು ಮಾಡಿದ್ದಾರೆ. ಅದು ಹೇಗಿದೆಯೆಂದರೆ ತಕ್ಷಣ ರೋಗ ಬಂದು ಎಲ್ಲ ದನಗಳೂ ಸಾಯುವ ವ್ಯವಸ್ಥೆಮಾಡಿದ್ದಾರೆ.

ಇನ್ನು ಸರ್ವೆ ಇಲಾಖೆಯಲ್ಲಿರುವ ಶ್ಯಾನುಭೋಗರು ಮತ್ತು ಪಟೇಲರ ವಿಷಯ. ಇವರು ಎಷ್ಟೋ ಸಾರಿ ತಮ್ಮ ಕರ್ತವ್ಯದಲ್ಲಿ ಇರಬೇಕೇ ಬೇಡವೇ ಎಂಬ ಬಗ್ಗೆ ಚರ್ಚೆ ಸಾಕಷ್ಟು ನಡೆದಿದೆ. ಈ ಒಂದು ವಿಚಾರವನ್ನು ಸರ್ಕಾರದವರು ಆದಷ್ಟು ಜಾಗ್ರತೆಯಾಗಿ ತೀರ್ಮಾನಮಾಡಿ ರೈತರ ಸಾಲ ಸೋಲ ಪತ್ರ ವ್ಯವಹಾರ ದಾಖಲಾತಗಳಿಗೆ ಶ್ಯಾನುಭೋಗರು ಮತ್ತು ಪಟೇಲರು ನೆರವಾಗಬೇಕೋ ಬೇಡವೋ ಎಂಬುದನ್ನು ಕೂಡಲೇ ನಿರ್ಧರಿಸಬೇಕೆಂದು ಹೇಳಿ ನನಗೆ ಈ ದಿನ ಮಾತನಾಡಲು ಇಷ್ಟು ಹೊತ್ತು ಅವಕಾಶವನ್ನು ಕೊಟ್ಟದ್ದಕ್ಕಾಗಿ ನಾನು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri L. B. BIRJE (Khanapur).—[Spoke in Marathi.]

†ಶ್ರೀ ಎಸ್. ರುದ್ರಪ್ಪ (ಕಲ್ಗಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರುವ ರೆವಿನ್ಯೂ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಈಗ ನಮ್ಮಲ್ಲಿ ಗುಲ್ಬರ್ಗಾ ಡಿವಿಜನ್ ಇದೆ. ಇದರಲ್ಲಿ ಬೀದರ್, ರಾಯಚೂರು ಮತ್ತು ಗುಲ್ಬರ್ಗ ಜಿಲ್ಲೆಗಳು ಇವೆ. ಈಗ ಈ ಡಿವಿಜನ್ ಕಿತ್ತಿಹಾಕಿ, ಬೇರೆ ಒಂದು ಡಿವಿಜನ್ ಮಾಡಬೇಕೆಂದು ಸರ್ಕಾರದ ನಿರ್ಣಯವಾಗಿದೆ ಎಂದು ನಮಗೆ ತಿಳಿದು ಬಂದಿದೆ. ಗುಲ್ಬರ್ಗ ಡಿವಿಜನ್ ತೆಗೆದು ರಾಯಚೂರು ಬಳ್ಳಾರಿ ಈ ಜಿಲ್ಲೆಗಳನ್ನೊಳಗೊಂಡ ಒಂದು ತುಂಗಭದ್ರಾ ಡಿವಿಜನ್ ಮಾಡಬೇಕೆಂದು ಸಲಹೆ ಇದೆ. ತುಂಗಭದ್ರಾ ಜಲಾಶಯದ ಕೆಳಗಡೆ ಇರತಕ್ಕ ಭೂಮಿಯನ್ನು ಅಭಿವೃದ್ಧಿ ಮಾಡಬೇಕಾದರೆ, ಎರಡು ಜಿಲ್ಲೆಯನ್ನು ಒಂದುಗೂಡಿಸಿ ಒಂದು ಡಿವಿಜನ್ ಮಾಡತಕ್ಕದ್ದು ಅವಶ್ಯ ಮತ್ತು ಸಮಂಜಸವಾದದ್ದು. ಈಗ ಬಳ್ಳಾರಿಜಿಲ್ಲೆಯು ಬೆಂಗಳೂರು ಡಿವಿಜನ್‌ನಲ್ಲಿ ಇದೆ. ಆಡಳಿತದ ದೃಷ್ಟಿಯಿಂದ ಮತ್ತು ಜನರ ಹಿತ ದೃಷ್ಟಿಯಿಂದ ಎರಡು ಜಿಲ್ಲೆಗಳನ್ನು ಕೂಡಿಸಿ ಒಂದು ತುಂಗಭದ್ರಾ ಡಿವಿಜನ್ ಮಾಡುವುದು ಒಳ್ಳೆಯದು. ಆದರೆ ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳನ್ನು ಬೆಳಗಾಮ್ ಡಿವಿಜನ್ನಿಗೆ ಸೇರಿಸುವುದು ತಪ್ಪು. ಗುಲ್ಬರ್ಗಾ ಜಿಲ್ಲೆ ಮತ್ತು ಬೀದರ್ ಜಿಲ್ಲೆ ಇವುಗಳನ್ನು ಬೆಳಗಾಮ್ ಡಿವಿಜನ್‌ಗೆ ಸೇರಿಸುವುದು ಆಡಳಿತ ದೃಷ್ಟಿಯಿಂದ ಮತ್ತು ಜನರ ಹಿತದೃಷ್ಟಿಯಿಂದ ಒಳ್ಳೆಯ ಕಾರ್ಯವಲ್ಲ ಎಂದು ನಾನು ಹೇಳಬಯಸುತ್ತೇನೆ. ಇದರಿಂದ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿರತಕ್ಕ ಜನಗಳಿಗೆ ಕಳವಳ

ಉಂಟಾಗಿದೆ. ಈಗಾಗಲೇ ಬೆಳಗಾಮ್ ಡಿವಿಜನ್‌ನಲ್ಲಿ ನಾಲ್ಕು ಜಿಲ್ಲೆಗಳಿವೆ. ಮತ್ತೆ ಈಗ ಈ ಎರಡು ಜಿಲ್ಲೆಗಳನ್ನು ಬೆಳಗಾಮ್ ಡಿವಿಜನ್ನಿಗೆ ಸೇರಿಸಿದರೆ 6 ಜಿಲ್ಲೆಗಳಾಗುತ್ತವೆ. ಬೆಳಗಾಮ್ ಡಿವಿಜನ್ನಿನ ಸೈಜು ಕೇರಳಾ ಸ್ಟೇಟಿನ ಎರಡರಷ್ಟಾಗುತ್ತದೆ. ಆದ್ದರಿಂದ ಅದು ಆಡಳಿತದ ದೃಷ್ಟಿಯಿಂದ ಬಹಳ ಅನ್ವೀಲ್ಡಿಯಾಗುತ್ತದೆ. ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳವರು ಬೆಳಗಾಮ್ ಜಿಲ್ಲೆಗೆ ಹೋಗ ಬೇಕಾದರೆ ನೇರವಾದ ರಸ್ತೆಗಳಾಗಲೀ ರೈಲ್ವೆಗಳಾಗಲೀ ಸೌಕರ್ಯ ಇಲ್ಲ. ಆದ್ದರಿಂದ ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳನ್ನು ಬೆಳಗಾಮ್ ಡಿವಿಜನ್ನಿಗೆ ಸೇರಿಸಬಾರದು. ಗುಲ್ಬರ್ಗ, ಬೀದರ್ ಮತ್ತು ಬಿಜಾಪುರ ಈ ಜಿಲ್ಲೆಗಳನ್ನು ಸೇರಿಸಿ ಒಂದು ಡಿವಿಜನ್ ಮಾಡಬೇಕು ಎಂದು ನನ್ನ ಸೂಚನೆ ಇದೆ.

ಇನ್ನು ಪಶುಸಂಗೋಪನೆ ವಿಷಯದಲ್ಲಿ ಹೇಳುವುದಾದರೆ ಗುಲ್ಬರ್ಗಾದಲ್ಲಿ ಒಂದು ಮಿಲ್ಕ್ ಸಪ್ಲೈ ಸೆಂಟರನ್ನು ಸ್ಥಾಪನೆ ಮಾಡುವುದಕ್ಕೋಸ್ಕರ ಅದನ್ನು ಮಂಜೂರು ಮಾಡಿ ಸುಮಾರು ಎರಡು ವರ್ಷಗಳಾಯಿತು ; ಆದರೂ ಸಹ ಅದನ್ನು ಅಲ್ಲಿ ಸ್ಥಾಪನೆಮಾಡುವುದಕ್ಕೆ ಇನ್ನೂ ಯಾವ ಕಾರ್ಯ ಕ್ರಮವನ್ನೂ ತೆಗೆದುಕೊಂಡಿಲ್ಲ. ಆದರೆ ಬೇರೆ ಭಾಗಗಳಲ್ಲಿ ಮಿಲ್ಕ್ ಸಪ್ಲೈ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೋಸ್ಕರ ಅತಿ ವೇಗದಿಂದ ಕೆಲಸಗಳು ನಡೆದಿವೆ. ನಮ್ಮ ಭಾಗದಲ್ಲಿ ಆ ಬಗ್ಗೆ ಅಲಕ್ಷ್ಯ ಮಾಡಿದ್ದಾರೆ ಎಂದು ನಾನು ಹೇಳಬಯಸುತ್ತೇನೆ.

ಇನ್ನು ನಮ್ಮ ಭಾಗದಲ್ಲಿ ಕೀ ವಿಲೇಜ್ ಯೋಜನೆಯನ್ನು ಮಂಜೂರು ಮಾಡಿ ಎರಡು ವರ್ಷಗಳಾ ಯಿತು. ಆದರೂ ಸಹ ಆ ಯೋಜನೆಯನ್ನು ಇನ್ನೂ ಕಾರ್ಯಗತ ಮಾಡಿಲ್ಲ. ಆ ಕಾರ್ಯ ಅಲ್ಲಿ ಬಹಳ ಮಂದಗತಿಯಿಂದ ನಡೆದಿದೆ. ಆದ್ದರಿಂದ ಸರ್ಕಾರದವರು ಮಂಜೂರುಮಾಡಿರುವ ಕೀ ವಿಲೇಜ್ ಯೋಜನೆಯ ಬಗ್ಗೆ ಹೆಚ್ಚು ಗಮನಕೊಟ್ಟು ಅದನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರ ಬೇಕೆಂದು ನಾನು ಸೂಚಿಸುತ್ತೇನೆ.

ಇನ್ನು ಮೂರನೆಯದಾಗಿ ಈಗ ಮೈಸೂರು ಮತ್ತು ಧಾರವಾಡಗಳಲ್ಲಿ ಸ್ಟಾಕ್‌ಮನ್ ಟ್ರೈನಿಂಗ್ ಸೆಂಟರುಗಳಿವೆ. ನಮ್ಮ ಭಾಗದವರು ಅಲ್ಲಿಗೆ ಟ್ರೈನಿಂಗ್ ತೆಗೆದುಕೊಳ್ಳುವುದಕ್ಕೆ ಹೋಗಲು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಗುಲ್ಬರ್ಗಾ ಡಿವಿಜನ್‌ನಲ್ಲಿ ಒಂದು ಸ್ಟಾಕ್‌ಮನ್ ಟ್ರೈನಿಂಗ್ ಸೆಂಟರನ್ನು ತೆರೆಯಬೇಕೆಂದು ನಾನು ಸರ್ಕಾರಕ್ಕೆ ಸೂಚಿಸುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಭೀಮಣ್ಣ (ಭಾಲ್ಕಿ).—ಮಾನ್ಯ ಸಭಾಪತಿಯವರೇ, ಈ ದಿವಸ ಈ ಸಭೆಯ ಮುಂದಿಟ್ಟಿರುವ ಬೂಕಂದಾಯ ಡಿಮ್ಯಾಂಡನ್ನು ನಾನು ವಿರೋಧಿಸುತ್ತೇನೆ. ಇದಕ್ಕೆ ಕಾರಣ ವೇನೆಂದರೆ ಈಗ್ಗೆ ಮೂರು ವರ್ಷಗಳಿಂದಲೂ ನಾನು ಇಲ್ಲಿ ಬಡ್ಜೆಟ್ಟನ್ನು ನೋಡುತ್ತಿದ್ದೇನೆ. ಈಗ ಮೂರನೇ ವರ್ಷದ ಬಡ್ಜೆಟ್ಟಿನಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ಹಣವನ್ನು ಒದಗಿಸಿರುವುದನ್ನು ನೋಡಿದರೆ ನನಗನ್ನಿಸುತ್ತದೆ, ಅಲ್ಲಿ ಜನಗಳು ಇದ್ದಾರೆಯೋ ಅಥವಾ ಇಲ್ಲವೋ ಎನ್ನುವ ಕಲ್ಪನೆ ಸರ್ಕಾರಕ್ಕೆ ಬಂದಹಾಗೆ ನನಗೆ ಕಾಣುತ್ತದೆ. ಈಗ ಉದಾಹರಣೆಗೆ ಒಂದು ಮಾತನ್ನು ನಾನು ಹೇಳುವುದಾದರೆ ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಪಬ್ಲಿಕ್ ವರ್ಕ್ಸ್ ಇಲಾಖೆಯ ಬೇಡಿಕೆಯ ಮೇಲೆ ಉತ್ತರವನ್ನು ಕೊಡುವಾಗ ಹೈದರಾಬಾದ್ ಕರ್ನಾಟಕಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದ್ದೇವೆ, ಎಷ್ಟು ಅನ್ಯಾಯವನ್ನು ಮಾಡಿದ್ದೇವೆ ಎನ್ನತಕ್ಕ ವಿಷಯವನ್ನು ಹೇಳಿದರು. ಹಳೆಯ ಮೈಸೂರಿಗೆ 42 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಗುಲ್ಬರ್ಗಾ ಜಿಲ್ಲೆಗೆ 4 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಅವರಿಗೆ ಅನ್ಯಾಯಮಾಡಿ ನಿಮಗೆ ನ್ಯಾಯವನ್ನು ದೊರಕಿಸಿ ಕೊಟ್ಟಿದ್ದೇವೆ. ಎಂದು ಒತ್ತಿಹೇಳಿದರು. ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಹೇಳುವುದಾದರೆ ಪ್ರತಿಯೊಬ್ಬರನ್ನೂ ಸಮ ದೃಷ್ಟಿಯಿಂದ ನೋಡಬೇಕು. ಒಬ್ಬರು ಹೆಚ್ಚು ಇನ್ನೊಬ್ಬರು ಕಡಿಮೆ ಎಂದು ನೋಡಬಾರದು. ಅವರಿಗೆ ನಮ್ಮ ವಿಷಯದಲ್ಲಿ ಒಳ್ಳೆಯ ಭಾವನೆಇಲ್ಲ. ಅವರನ್ನು ನಾನು ದೂರಬೇಕು ಎನ್ನುವ ಭಾವನೆಯಿಂದ ನಾನು ಹೇಳುತ್ತಿಲ್ಲ. ಆಮೇಲೆ ವಿದ್ಯಾಖಾತೆಯ ಮಂತ್ರಿಗಳಾದ ಶ್ರೀಮಾನ್ ಕಂಠಿಯವರು ಹೇಳಿದರು ಶ್ರೀಮಾನ್ ಅಣ್ಣಾರಾಯರ ಕಾಲದಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ಶಾಲೆಗಳ ವಿಷಯದಲ್ಲಿ ಹಾಗೆ ಮಾಡಿದ್ದಾರೆ ಆದರೆ ಈಗ ನನ್ನ ಕಾಲದಲ್ಲಿ ಹೀಗೆ ಮಾಡಿದ್ದೇನೆ ಎಂದು ಹೇಳಿದರು. ಆಮೇಲೆ ನಮ್ಮ ಗೃಹಸಚಿವರಾದ ಶ್ರೀಮಾನ್ ಆರ್. ಎಂ. ಪಾಟೀಲ್ ಅವರು ಲಾ ಅಂಡ್ ಆರ್ಡರ್ ವಿಷಯದಲ್ಲಿ ಹಾಗೆ ಮಾಡುತ್ತೇನೆ ಹೀಗೆ ಮಾಡುತ್ತೇನೆ, ವಿರೋಧಪಕ್ಷದವರಿಗೆ ಯಾವುದೇ ಅನ್ಯಾಯ ನಡೆದಿದ್ದರೂ ಅವರಿಗೆ ಕಾಣುವುದಿಲ್ಲ ಎಂದು ಅವರು ಹೇಳಿ ದರು. ಇದನ್ನೆಲ್ಲಾ ನೋಡಿದರೆ ನನಗಾದರೂ ಅನಿಸುತ್ತದೆ ಹೈದರಾಬಾದ್ ಕರ್ನಾಟಕದವರಿಗೆ ಸರ್ಕಾರವೇ ಇಲ್ಲ ಎಂದು ಹೇಳಬೇಕಾಗಿದೆ.

(ಶ್ರೀ ಎಸ್. ಭೀಮಣ್ಣ)

11-30 A.M.

ಭೂಕಂದಾಯದ ವಿಷಯದಲ್ಲಿ ಹೇಳಬೇಕಾದರೆ 20 ವರ್ಷಕ್ಕೆ ಮೊದಲು ನಮ್ಮಲ್ಲಿ ಜಹಗೀರು ದಾರರು ಮತ್ತು ಪಾಯಗದಾರರಿದ್ದರು. ಆ ಕಾರಣ ಭೂಕಂದಾಯ ಬಹಳ ಹೆಚ್ಚಾಗಿತ್ತು; ಎಂದರೆ ಎರಡರಷ್ಟು ಇತ್ತು. ಅದನ್ನು ಕಡಮೆ ಮಾಡುವ ಸಲುವಾಗಿ ಎಷ್ಟೋ ಹೋರಾಟ ನಡೆಯಿತು. ಸಸ್ಪೆನ್ಷನ್ ಆಫ್ ಲ್ಯಾಂಡ್ ರೆವೆನ್ಯೂ ಮಾಡಬೇಕೆಂದು ಹೋರಾಟ ನಡೆಯಿತು. ಭೂಕಂದಾಯವನ್ನು ಸಸ್ಪೆಂಡ್ ಮಾಡಿದರು. ನಾನು ಇಲ್ಲಿಗೆ ಬಂದಾಗಿನಿಂದಲೂ ಹೇಳುತ್ತಿದ್ದೇನೆ. ಸರ್ಕಾರ ಅದನ್ನು ವಿಚಾರ ಮಾಡಲಿಕ್ಕೆ ತಯಾರಿಲ್ಲ. ಅದರಿಂದ ಎಷ್ಟು ಹಣ ನಮ್ಮದು ಲುಕ್ಸಾನಾಗಿದೆ ಎಂದು ಹೇಳುತ್ತಿದ್ದೇನೆ. ಹೈದರಾಬಾದು ಕರ್ಣಾಟಕದಲ್ಲಿ ಎಷ್ಟು ಜನ ಜಹಗೀರುದಾರರು ಮತ್ತು ಪಾಯಗದಾರರು ಅಲ್ಲಿಯ ರೈತರಿಂದ ಎಷ್ಟು ಭೂಕಂದಾಯವನ್ನು ವಸೂಲ್ಮಾಡಿದ್ದಾರೆ, ಸಸ್ಪೆಂಡ್ ಆಗಿರುವ ಮೊತ್ತವೇನಿದೆ ಅದನ್ನು ಹಿಡಿದುಕೊಂಡರೆ, ಜಹಗೀರುದಾರರಿಗೆ ಕಾಂಪನ್‌ಸೇಷನ್ ಮೊತ್ತ ಏನು ಕೊಡಬೇಕಾಗಿದೆ ಅದರಲ್ಲಿ ಒಂದು ಕೋಟಿ ರೂಪಾಯಿಗಳನ್ನು ಅವರ ಕಡೆಯಿಂದ ತೆಗೆದು ಕಿಸಾನರ ಕಡೆಗೆ ಕೊಡಬೇಕಾಗಿ ಬರುತ್ತದೆ ನಾನು ಎರಡು ವರ್ಷದಿಂದ ಈ ಸಭೆಯಲ್ಲಿ ಈ ವಿಚಾರವನ್ನು ಹೇಳುತ್ತಿದ್ದೇನೆ. ಹೈದರಾಬಾದಿನ ಎಷ್ಟು ಜನ ಶಾಸನ ಸಭಾ ಸದಸ್ಯರಿದ್ದಾರೆ ಅವರೆಲ್ಲ ಹೇಳಿದ್ದಾರೆ. ಆದರೂ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ಈಸಿ ಹಣವನ್ನು ಇನಾಂದಾರರಿಗೆ ವ್ಯರ್ಥವಾಗಿ ಕೊಡಬೇಕಾಗಿದೆ. ಆದ್ದರಿಂದ ಶ್ರೀಮಾನ್ ಕೃಷ್ಣಪ್ಪನವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ: ಈಗ ಲಾದರೂ ಇದನ್ನು ವಿಚಾರಮಾಡಿ ಕಾಂಪನ್‌ಸೇಷನ್ ಕೊಡುವಾಗ ನಾನು ಹೇಳಿದಂತೆ ಮಾಡಿದರೆ ಒಳ್ಳೆಯದಾಗುತ್ತದೆ.

ಸರ್ಚಾರ್ಜ್ ವಿಷಯದಲ್ಲಿ ಮಾನ್ಯ ರೆವನ್ಯೂ ಮಂತ್ರಿಗಳಿಗೆ ಅವರು ಭಾಲ್ಕಿಗೆ ಬಂದಿದ್ದಾಗ ತಿಳಿಸಿದ್ದೇನೆ. ಅವರು ಪ್ರವಾಸ ಬಂದಾಗ ಒಂದು ವಿಚಿತ್ರ ನಡೆಯಿತು. ಸಹಸ್ರಾರು ಜನರು ಅವ ರನ್ನು ಕಂಡು ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಲು ಕಾದಿದ್ದರು. ಆದರೆ ನಮ್ಮ ಮಂತ್ರಿಗಳು ಅವರ ಕಾರ್ಯಕ್ರಮವನ್ನು ತಕ್ಷಣ ಬದಲಾಯಿಸಿಕೊಂಡು ಮಾರನೆಯ ದಿವಸ ಅಲ್ಲಿಗೆ ಬಂದರು. ಆಗ ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ತಾಲ್ಲೂಕು ಬೋರ್ಡ್ ಮೆಂಬರುಗಳು ಇಷ್ಟು ಜನ ಮಾತ್ರ ಇದ್ದರು. ಆಗ ನಾನು ಅವರಿಗೆ ನಮ್ಮ ಭಾಗದ ಪರಿಸ್ಥಿತಿಯನ್ನು ತಿಳಿಸಿದ್ದೇನೆ. ಸರ್ಚಾರ್ಜ್ ವಸೂಲ್ಮಾಡುವಾಗ ಐದು ಎಕರೆಗಳಿಗಿಂತ ಕಡಿಮೆ ಇದ್ದರೆ ವಸೂಲ್ಮಾಡಬಾರದು ಎಂದು ಇದ್ದರೂ ಕೂಡ ಶ್ಯಾನುಭೋಗರು ಮತ್ತು ಪಟೇಲರು ಅದನ್ನೆಲ್ಲ ವಸೂಲ್ಮಾಡಿ ತಿಂದು ಹಾಕಿದ್ದಾರೆ. ಇದರ ಬಗ್ಗೆ ದೂರುಗಳನ್ನು ಕೊಟ್ಟರೂ ಸರಿಯಾಗಿ ತನಿಖೆ ಮಾಡುತ್ತ ಇಲ್ಲ.

ಭೂಕಂದಾಯದ ಬಗ್ಗೆ ಸಸ್ಪೆಂಡ್ ಮಾಡಿರುವುದು ಏನಿದೆ ಅದನ್ನು ರೈಟ್ ಆಫ್ ಮಾಡಿ ಈಗ ಕಾಂಪನ್‌ಸೇಷನ್ ಇನಾಂದಾರರಿಗೆ ಏನು ಕೊಡಬೇಕಾಗಿದೆ ಅದನ್ನು ಕಡಮೆ ಮಾಡಬೇಕು. ಈ ಬಗ್ಗೆ ಒಂದು ಆರ್ಡರ್ ಹೊರಡಿಸಬೇಕು. ಮತ್ತು ಅಲ್ಲಿನ ಭಾಗದ ಜನಗಳಿಗೆ ಅನ್ಯಾಯವನ್ನು ಸರಿ ಪಡಿಸಬೇಕು. ಇದನ್ನೆಲ್ಲ ಮಾಡದೆ ಹೋದರೆ ಕಿಸಾನರು ಒಂದು ಚಳುವಳಿ ಮಾಡಿ, ತಮಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಳ್ಳಲು ಪ್ರಯತ್ನ ಮಾಡುತ್ತಾರೆ. ಈ ರೀತಿ ಆಗುವುದಕ್ಕೆ ಮಾನ್ಯ ಮಂತ್ರಿಗಳು ಅವಕಾಶ ಕೊಡಬಾರದು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Sri N. O. SAMAJI (Belgaum II).—Spoke in Marathi.

†ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೆ, ಭೂಕಂದಾಯ ಹಾಗೂ ಪಶುಸಂಗೋಪನೆ ಬೇಡಿಕೆಗಳ ಮೇಲೆ ಮಾತನಾಡುವಾಗ ಒಂದೆರಡು ವಿಷಯಗಳನ್ನು ಒತ್ತಿ ಹೇಳಬಯಸುತ್ತೇನೆ. ಮಾನ್ಯ ಕಂದಾಯ ಮಂತ್ರಿಗಳು ಅಧಿಕಾರಕ್ಕೆ ಬಂದಮೇಲೆ ರೈತರಿಗೆ ಕಂದಾ ಯದ ಹೊರೆ ಕಡಮೆಯಾಗುತ್ತದೆಂದು ರೈತರು ನಿರೀಕ್ಷಿಸಿದ್ದರು, ಅವರಿಗೆ ನಿರಾಶೆಯಾಗಿದೆ. 1961-2 ನೆಯ ಇಸವಿಯಿಂದ ಶೇಕಡ 33 ರಿಂದ 75 ರವರೆಗೆ ಕಂದಾಯ ಹೆಚ್ಚಾಗಿದೆ ಇದರ ಪರಿಣಾಮ ವಾಗಿ ರೈತರಿಗೆ ಕಂದಾಯದ ಹೊರೆ ಹೆಚ್ಚಿ ಸುಮಾರು ಎರಡು ಲಕ್ಷ ರೂಪಾಯಿಗಳ ಮೇಲೆ ನಮ್ಮ ಒಂದು ತಾಲ್ಲೂಕಿನಲ್ಲಿ ಬಾಕಿ ನಿಂತಿದೆ. ರೈತರ ಗೋಳು ಹೆಚ್ಚಾಗಿದೆ, ಕಂದಾಯದ ಬಾಕಿಗಾಗಿ ಜಮೀನನ್ನು ಹರಾಜು ಹಾಕುತ್ತಿದ್ದಾರೆ, ದನಗಳನ್ನು ಹರಾಜು ಹಾಕುತ್ತಿದ್ದಾರೆ, ಬೇರೆ ಆಸಿ ಪಾಸ್ತಿ ಇಲ್ಲದ ಜನರ ಸ್ಥಿತಿಯಂತೂ ಬಹಳ ಕಷ್ಟವಾಗಿದೆ. ಇನ್ನು ಬೆಟರ್‌ಮೆಂಟ್ ಲೆವಿ ಯಾವ ಗಳಿಗೆಯಲ್ಲಿ ಅದು ಒಪ್ಪಿಗೆ ಪಡೆಯುತ್ತದೆಯೋ ಗೊತ್ತಿಲ್ಲ. ಹಿಂದಿನಿಂದ ಕೊಡಬೇಕಾದರೆ ರೈತರಿಗೆ ಹೊರಲಾರ ದಷ್ಟು ಹೊರೆಯಾಗುತ್ತದೆ. ರೈತರಿಗೆ ಒಂದು ಅವಕಾಶ ಕೊಡಬೇಕು. ಕಂದಾಯದ ಬಾಕಿಯನ್ನು

5 ಸಮಕಂತುಗಳಲ್ಲಿ ಕೊಡುವ ಹಾಗೆ ಮಾಡಬೇಕೆಂದು ವಿನಿಯದಿಂದ ಕೇಳಿಕೊಳ್ಳುತ್ತೇನೆ. ಕಟ್ಟಡಗಳ ಮೇಲಿನ ತೆರಿಗೆಯನ್ನ ಕಂತುಗಳಲ್ಲಿ ಕೊಡಬಹುದೆಂದು ಹಣಕಾಸಿನ ಮಂತ್ರಿಗಳು ಹೇಳಿದ್ದಾರೆಂದು ಪತ್ರಿಕೆಗಳಲ್ಲಿ ಓದಿದೆ. ಅದೇ ರೀತಿ ಭೂಕಂದಾಯವನ್ನೂ ಕಂತುಗಳ ರೂಪದಲ್ಲಿ ಕೊಡಲು ಅವಕಾಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ರೀಸರ್ವೆ ಮಾಡಿದಮೇಲೆ ಮುಂದೆ ಸರ್‌ಚಾರ್ಜನ್ನು ತೆಗೆದು ಹಾಕಿ ಭೂಕಂದಾಯವನ್ನು ಹೆಚ್ಚು ಮಾಡಬೇಕೆಂದು ಮಾಡಿದ್ದಾರೆ. ಈ ವಿಷಯವನ್ನು ಗಮನಿಸಿ, ರೀಸರ್ವೆ ಮಾಡುವಾಗ ಆಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕು. ಒಂದು ತಿಂಗಳೂ ನೀರಿಲ್ಲದಿರುವ ಕೆರೆಗಳ ಕೆಳಗೆ ಜಮೀನಿವೆ, ಒಂದು ಬೆಳೆಗೂ ನೀರು ಸಾಲದಿರುವ ಕೆರೆಗಳಿವೆ, ಎರಡು ಬೆಳೆಗಳಿವೆ. ಸಾಕಾಗುವಷ್ಟು ನೀರಿರುವ ಕೆರೆಗಳಿವೆ, ಸದಾ ವ್ಯವಸಾಯ ಮಾಡಲು ಸಾಕಾದಷ್ಟು ನೀರಿರುವ ಕೆರೆಗಳಿವೆ. ಹೀಗಿರುವಾಗ ಎಲ್ಲಕ್ಕೂ ಒಂದೇರೀತಿ ಮಾಡುವುದು ಸರಿಯಲ್ಲ. ಜಮೀನಿನಲ್ಲಿ ಬೆಳೆಯುವ ಬೆಳೆಯ ಮೇಲೆ ಕಂದಾಯವನ್ನು ಗೊತ್ತು ಮಾಡಬೇಕು. ರೀಸರ್ವೆ ಆದಮೇಲೆ ಒಂದಕ್ಕೆ ನಾಲ್ಕರಷ್ಟು ಕಂದಾಯ ಹೆಚ್ಚು ಹಾಕುವ ಸಂಭವವಿದೆ. ಬಾವಿಗಳನ್ನು ತೆಗೆದಿದ್ದೇವೆಂದು ಹೇಳಬಹುದು, ಆದರೆ ಅದರಿಂದ ಒಂದು ಬೆಳೆ ಆಗುತ್ತದೆಯೋ ಎರಡು ಬೆಳೆ ಆಗುತ್ತದೆಯೋ ಎನ್ನುವದನ್ನು ನೋಡಬೇಕು. ಕಂದಾಯವನ್ನು ಒಂದಕ್ಕೆ ನಾಲ್ಕರಷ್ಟು ಮಾಡುವುದು ಅನ್ಯಾಯ. ರೀಸರ್ವೆಯಿಂದ ಕಂದಾಯ ಹೆಚ್ಚಿ ಉತ್ಪತ್ತಿ ಜಾಸ್ತಿಯಾಗಬೇಕೆಂದು ಉದ್ದೇಶವಿದ್ದರೆ ಅದು ಸಾಧ್ಯವಿಲ್ಲ, ಖಂಡಿತವಾಗಿ ರೈತರಿಗೆ ತೊಂದರೆಯಾಗುತ್ತದೆ, ಅದನ್ನು ತಪ್ಪಿಸಬೇಕು. ಇದಕ್ಕೆ ಸರಕಾರ ಗಮನ ಕೊಡಬೇಕು. ಮೂರು ವರ್ಷದಿಂದ ಸರ್‌ಚಾರ್ಜು ಕೊಟ್ಟಿರುವುದಲ್ಲದೆ ಬೆಟರ್‌ಮೆಂಟ್ ಲೆವಿ ಬರುತ್ತಿರುವಾಗ ಇನ್ನು ಮುಂದೆ ಭೂಕಂದಾಯದಲ್ಲಿ ದೊಡ್ಡ ಬದಲಾವಣೆಯಾಗಬೇಕಾಗಿದೆ. ಮಂತ್ರಿಗಳು ಮನಸ್ಸುಮಾಡಿದರೆ ಬದಲಾಯಿಸಲು ಅವಕಾಶವಿದೆ. ಮೂರು ಸಾವಿರದ ಮೇಲೆ ಆದಾಯವಿದ್ದರೆ ಮಾತ್ರ ಕಂದಾಯ ತೆಗೆದುಕೊಳ್ಳ ಬೇಕೆಂದು ಹೇಳಿದರು, ಒಂದು ಸಾವಿರ ರೂಪಾಯಿಗೆ ಮೇಲ್ಪಟ್ಟು ಉತ್ಪತ್ತಿಯ ಮೇಲಿದ್ದರೆ ಅದಕ್ಕೆ ಮಾತ್ರ ಹಾಕಿದರೆ ರೈತರು ಬದುಕುತ್ತಾರೆ. ಅನಾವೃಷ್ಟಿ ಇರುವ ಕಡೆ ಕಂದಾಯ ಸರ್‌ಚಾರ್ಜನ್ನು ವಜಾ ಮಾಡಬೇಕು. ನಮ್ಮ ದೊಡ್ಡಬಳ್ಳಾಪುರದಲ್ಲಿ ಎರಡು ಸಾವಿರ ಎಕರೆಯಲ್ಲಿ ಬೆಳೆಯಿಲ್ಲ. ಇದರ ಮೇಲೆ ಸರ್‌ಚಾರ್ಜನ್ನು ಹಾಕಬಾರದು. ಈಗ ಬೆಟರ್‌ಮೆಂಟ್ ಲೆವಿ ಜಾರಿಗೆ ಬರುವುದಕ್ಕೆ ಮುಂದೆ ಈ ವಿಷಯದಲ್ಲಿ ನಿರ್ಧಾರ ತೆಗೆದುಕೊಂಡು ಒಂದು ಬೆಳೆ ಬರುವುದು, ಎರಡು ಬೆಳೆ ಬರುವುದು, ಕೆರೆಯಲ್ಲಿ ನೀರಿಲ್ಲದಿರುವುದು, ಇದನ್ನೆಲ್ಲ ನೋಡಿ ಅದರ ಮೇಲೆ ಕಂದಾಯ ಹಾಕುವಂತೆ ಮಾಡಬೇಕು.

ವಿಲೇಜ್ ಅಕೌಂಟೆಂಟ್ ಮತ್ತು ಗ್ರಾಮ ಪಂಚಾಯಿತಿ ಸೆಕ್ರೆಟರಿ ಎಂದು ನೇಮಕ ಮಾಡಿದ್ದಾರೆ. ಇದರಿಂದ ಎರಡು ಕೆಲಸವನ್ನೂ ಅವರು ಮಾಡುತ್ತಿಲ್ಲ. ಇದರ ಸಂಬಂಧವಾದ ಮಸೂದೆ ಸಭೆಯ ಮುಂದೆ ಬಂದಾಗಲೇ ನಾನು ಹೇಳಿದೆ. ಯಾರಾದರೂ ಕಳೆದ ಆರು ತಿಂಗಳಲ್ಲಿ 5 ನಯಾ ಪೈಸೆ ಕಂದಾಯವನ್ನು ವಸೂಲು ಮಾಡಿದ್ದರೆ ಇಟ್ಟುಕೊಳ್ಳಬಹುದು. ಆದರೆ ವಿಲೇಜ್ ಅಕೌಂಟೆಂಟ್ ಕೆಲಸವನ್ನು ನಿರ್ವಹಿಸುವುದಕ್ಕೇ ಶಕ್ತಿಯಿಲ್ಲದಿರುವಾಗ ಹೀಗೆ ಹೆಚ್ಚಿನ ಜವಾಬ್ದಾರಿ ಕೊಟ್ಟರೆ ಇದನ್ನು ಮಾಡಲು ಅವರಿಗೆ ಸಾಧ್ಯವೇ ? ಬೇಕಾದಷ್ಟು ಕೆಲಸವಿದೆ, ಕೆಲಸವಿಲ್ಲದಿದ್ದರೂ ಕೆಲಸವನ್ನುಂಟು ಮಾಡುವ ಶಕ್ತಿಯಿರುವುದರಿಂದ ಪಂಚಾಯಿತಿಯ ಸೆಕ್ರೆಟರಿಯ ಕೆಲಸಕ್ಕೆ ಬೇರೆಯವರನ್ನು ನೇಮಕ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಪಶುಸಂಗೋಪನ ಇಲಾಖೆಗೆ ಸಂಬಂಧಪಟ್ಟ ಹಾಗೆ ಎರಡು ಮಾತು ಹೇಳಬೇಕಾಗುತ್ತದೆ. ದೊಡ್ಡ ರೋಗ ಬಂದು ಬಹಳ ದನಗಳು ನಷ್ಟವಾಗಿವೆ. ಅದರಲ್ಲಿಯೂ ಬೆಂಗಳೂರು ಜಿಲ್ಲೆಯಲ್ಲಿ ರೈತರಿಗೆ ಅಪಾರ ನಷ್ಟವಾಗುತ್ತಿದೆ. ಕಳೆದ ಒಂದು ತಿಂಗಳಲ್ಲಿ ಸರಕಾರದವರು ಒಂದು ಏರ್ಪಾಡು ಮಾಡಿದರು ಆದರೆ ಅದು ಸಮರ್ಪಕವಾಗಿಲ್ಲ. ಈ ರೋಗ ಇತರ ತಾಲ್ಲೂಕುಗಳಿಗೂ ಹರಡುತ್ತಿದೆ. ಈ ನಷ್ಟವನ್ನ ತಪ್ಪಿಸುವುದಕ್ಕೆ ಹೆಚ್ಚು ಅಧಿಕಾರಿಗಳನ್ನಿಟ್ಟು ಇದರ ನಿವಾರಣೆಗೇನು ಮಾಡಬೇಕೋ ಅದನ್ನು ಮಾಡಿ ರೈತರಿಗಾಗುತ್ತಿರುವ ಅಗಾಧ ನಷ್ಟವನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸ್ವಾಮಿ, ಕ್ಷಾಮನಿವಾರಣೆಯ ಬಗ್ಗೆ ಅನೇಕರು ಪ್ರಸ್ತಾಪ ಮಾಡಿದ್ದಾರೆ. ಚಿತ್ರದುರ್ಗ, ಮೊಳಕಾಲ್ಮೂರು ಮುಂತಾದ ಚಿತ್ರದುರ್ಗ ಜಿಲ್ಲೆಯ ಪೂರ್ವ ಭಾಗದಲ್ಲಿ ನಾಲ್ಕಾರು ವರ್ಷಗಳಿಂದ ಮಳೆಯಿಲ್ಲದೆ ರೈತರಿಗಾಗಿರುವ ತೊಂದರೆ ಸರಕಾರಕ್ಕೆ ಗೊತ್ತಿದೆ. ಈ ವಿಷಯವನ್ನು ಪದೇಪದೇ ಸರಕಾರದ ಗಮನಕ್ಕೆ ತಂದಿದ್ದರೂ ಕೂಡ ಅಲ್ಲಿ ಖಾಯಂ ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದಿರುವುದು ವಿಷಾದಕರ. ಹೋದ ವರ್ಷ ಈ ಸಭೆಯಲ್ಲಿಯೂ ಹೊರಗೂ ಇದನ್ನು ಪ್ರಸ್ತಾಪ ಮಾಡಿದಾಗ ಇದಕ್ಕೆ ವಿಶೇಷ ಪ್ರಯತ್ನ ಮಾಡುತ್ತೇವೆ, ಅಲ್ಲಿ ಖಾಯಂ ಪರಿಹಾರದ ವ್ಯವಸ್ಥೆಯನ್ನು ಕೂಡಲೆ ಮಾಡುತ್ತೇವೆ ಎಂದು ಒಂದು ಯೋಜನೆಯನ್ನು ತಯಾರು ಮಾಡಿದರು. ಅದರ ಪ್ರಕಾರ ಬಾವಿಗಳನ್ನು ಸುಲಭ ದರದಲ್ಲಿ ಹೆಚ್ಚು ರಿಯಾಯಿತಿಯ ಮೇಲೆ ಜನರಿಗೆ ಒದಗಿಸುತ್ತೇವೆ ಎಂದು ಹೇಳಿದರು. ಆದರೆ ಇದುವರೆಗೂ ಮಾಡಿಲ್ಲ. ಸಾಮಾನ್ಯ

(ಶ್ರೀ ಬಿ. ಎಲ್. ಗೌಡ)

ಕಾನೂನು ಪ್ರಕಾರ ಏನು ಕೊಡಬೇಕೋ ಅದನ್ನು ಮಾತ್ರ ಕೊಟ್ಟರು, ಬರಗಾಲಕ್ಕೆ ತುತ್ತಾಗುತ್ತದೆಂಬ ದೃಷ್ಟಿಯಿಂದ ಏನು ಕೊಡಬೇಕೋ ಅದನ್ನು ಕೊಡಲಿಲ್ಲ. ಕಾಂಟೂರ್ ಬಂಡಿಂಗ್ ಮುಂತಾದುವು ಆಗಬೇಕೆಂದು ಯೋಜನೆಗಳನ್ನು ಮಾಡಿ ಕಳುಹಿಸಿದರೂ ಕೂಡ ಅದೆಲ್ಲವೂ ಕೋಲ್ಡ್ ಸ್ಟೋರೇಜ್‌ನಲ್ಲಿದೆ. ಖಾಯಂ ವ್ಯವಸ್ಥೆಯನ್ನೇಕೆ ಮಾಡಬಾರದು ? ನಿಜವಾಗಿಯೂ ಕ್ಷಾಮಪರಿಹಾರದ ಬಗ್ಗೆ ಸರಕಾರಕ್ಕೆ ಶ್ರದ್ಧೆಯಿದ್ದರೆ, ಕ್ಷಾಮವನ್ನು ಹೋಗಲಾಡಿಸಬೇಕೆಂಬ ಇಚ್ಛೆಯಿದ್ದರೆ ಏಕೆ ಇದುವರೆಗೂ ಪ್ರಯತ್ನ ಮಾಡಿಲ್ಲ ? ವರ್ಷ ವರ್ಷವೂ ಖರ್ಚು ಮಾಡುವ ಹಣವನ್ನು ಕೂಡಿದರೆ ಅದರ ಅರ್ಧ ಹಣದಲ್ಲಿ ಖಾಯಂ ವ್ಯವಸ್ಥೆಯನ್ನು ಮಾಡಬಹುದಾಗಿತ್ತು. ಆದುದರಿಂದ ಕೂಡಲೆ ಐದು-ಹತ್ತು ಎಕರೆಗೆ ಒಂದು ಬಾವಿ ತೋಡಿಸಿಕೊಡಬೇಕು ಎಂದು ಹೇಳುತ್ತೇನೆ. ಕೇಂದ್ರದಿಂದ ದೊರೆಯುವ ಸಹಾಯ ಪಡೆದು ಕೆಲಸ ಮಾಡಿಸಿಕೊಡಬೇಕು. ನಮ್ಮ ಪ್ರದೇಶದಲ್ಲಿ ನೀರಾವರಿ ಯೋಜನೆ ತೆಗೆದುಕೊಳ್ಳುತ್ತಾ ಇಲ್ಲ. ಮಂತ್ರಿಗಳನ್ನು ಕರೆದುಕೊಂಡು ಹೋಗಿ ತೋರಿಸಿದ್ದೇವೆ. ನಮ್ಮ ಚಳ್ಳಕೆರೆ ತಾಲ್ಲೂಕಿನಲ್ಲಿ ಅನೇಕ ನೀರಾವರಿ ಯೋಜನೆ ಕೆಲಸಗಳಿವೆ. ಹತ್ತಾರು ವರ್ಷಗಳಿಂದ ಸರ್ಕಾರದ ಮುಂದೆ ಮುಖ್ಯ ಬೇಡಿಕೆಗಳಿದ್ದರೂ ಕೂಡ ಯಾವ ಕೆಲಸ ಮಾಡಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಒಂದು ಕಾರ್ಯಕ್ರಮ ಹಾಕಿಕೊಂಡು ಒಂದು ಫೇಸ್ಡ್ ಪ್ರೋಗ್ರಾಂ ಪ್ರಕಾರ ಕೆಲಸ ನಡೆಸಿ ಕಾಯಂ ಪರಿಹಾರ ಒದಗಿಸಿಕೊಡಬೇಕೆಂದು ಬಹಳ ಒತ್ತಾಯ ಪೂರ್ವಕವಾಗಿ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಲ್ಯಾಂಡ್ ರೆವೆನ್ಯೂ.—ಕನ್ಸಾಲಿಡೇಷನ್ ಅಂಡ್ ಫ್ರಾಗ್ಮೆಂಟೇಷನ್ ಆಫ್ ಹೋಲ್ಡಿಂಗ್ಸ್ ವಿಚಾರ ಹೇಳಬೇಕಾಗಿದೆ. ಹಿಡುವಳಿ ಎಕನಾಮಿಕ್ ಆಗಿ ಇರಬೇಕು. ಹಿಡುವಳಿ ವಿಭಾಗವಾದರೆ ಉತ್ಪತ್ತಿ ಕಡಿಮೆಯಾಗುತ್ತದೆ. ಈ ಬಾಬಿಗೆ ಬಜೆಟ್ಟಿನಲ್ಲಿ ಎರಡು ಲಕ್ಷ ರೂಪಾಯಿ ಇಟ್ಟಿದ್ದಾರೆ ಇದು ಬಹಳ ಕಡಿಮೆ. ಹೆಚ್ಚು ಹಣ ಒದಗಿಸಿ ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇದಲ್ಲದೆ ಇನ್ನೊಂದು ವಿಷಯ ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಅನ್-ಎಕನಾಮಿಕ್ ಹೋಲ್ಡಿಂಗ್ ಇದ್ದರೆ ಕಂದಾಯ ಕೊಡಬಾರದು ಎಂದು ಸೂಚಿಸುತ್ತೇನೆ. ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಶ್ರೀಮಾನ್ ಕೃಷ್ಣಪ್ಪನವರು ಒಂದು ಘೋಷಣೆ ಮಾಡಬೇಕೆಂದು ಒತ್ತಾಯಪೂರ್ವಕ ಹೇಳುತ್ತೇನೆ.

ಇನ್ನು ಪಶು ಸಂಗೋಪನೆ ವಿಷಯ.—ನಮ್ಮ ದೇಶದಲ್ಲಿ ಒಳ್ಳೇ ತಳಿ ಇಲ್ಲ; ಒಳ್ಳೇ ತಳಿ ಸುಧಾರಣೆಗೆ ಮಾಡಿದ ಪ್ರಯತ್ನದಲ್ಲಿ ಸರಕಾರ ಮತ್ತು ಇಲಾಖೆ ವಿಫಲವಾಗಿದೆ ಎಂದು ವಿಷಾದದಿಂದ ಗಮನಕ್ಕೆ ತರುತ್ತೇನೆ. ಕಸಿಮಾಡಿ ತಳಿ ಸುಧಾರಣೆ ಮಾಡುವ ಯೋಜನೆ ಕಾಗದದ ಮೇಲೆ ಹಾಕಿಕೊಂಡಿದ್ದೀರಿ. ನಮ್ಮಲ್ಲಿರುವ ಅಮೃತ ಮಹಲ್ ಹಳ್ಳಿಕಾರ ತಳಿ ಅಭಿವೃದ್ಧಿಕಾರ್ಯ ಖಾಸಗಿಯವರು ವಹಿಸಿಕೊಂಡಿದ್ದಾರೆ. ಅವರು ಕೊಡುವ ಬೀಜದ ಹೋರಿ ನೋಡಿದರೆ ಅದು ಒಳ್ಳೆಯ ಜಾತಿ ಇಲ್ಲ. ಇದಕ್ಕೆ ಸರಕಾರ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆ ಇದೆ. ಆದರೆ ಒಂದು ರೂರಲ್ ವೆಟರಿನರಿ ಹಾಸ್ಪಿಟಲ್ ಕೊಟ್ಟಿಲ್ಲ. ಮಂತ್ರಿಗಳು ಸ್ವಜನಪಕ್ಷಪಾತದಿಂದ ತಮ್ಮ ಜನರು ಇರುವ ಕಡೆ ಕೊಡುತ್ತಾ ಇದ್ದಾರೆ.

ಅಧ್ಯಕ್ಷರು.—ಸ್ವಪಕ್ಷಪಾತ ಎಂದು ಹೇಳಿ.

ಶ್ರೀ ಬಿ. ಎಲ್. ಗೌಡ.—ಸ್ವಪಕ್ಷಪಾತದಿಂದ ಕೊಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ 30 ಮೈಲಿ ಪ್ರದೇಶದಲ್ಲಿ ಒಂದು ಹೋಬಳಿಯಲ್ಲಿ ಆಸ್ಪತ್ರೆ ಇಲ್ಲ. ಆದುದರಿಂದ ಈ ವಿಚಾರದಲ್ಲಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಯಾಕೆಂದರೆ ಜಿಲ್ಲಾ ಪರಿಷತ್ತಿನವರು, ಜಿಲ್ಲಾ ಮಂಡಳಿಯವರು ಶಿಫಾರಸ್ಸು ಮಾಡಿದ್ದರೂಕೂಡ ಅದನ್ನು ಕಡೆಗಣಿಸಿ ಬೇರೆ ತಾಲ್ಲೂಕಿಗೆ ಕೊಟ್ಟಿದ್ದಾರೆ. ನಮ್ಮ ಚಳ್ಳಕೆರೆ ತಾಲ್ಲೂಕಿಗೆ ಒಂದು ಆಸ್ಪತ್ರೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಕಾಲಾವಕಾಶ ಮುಗಿದಿದೆ. ಇನ್ನು ಸದಸ್ಯರು ಭಾಷಣ ಮಾಡದೆ ಬರಿ ಪಾಯಿಂಟ್ಸ್ ಮಾತ್ರ ಹೇಳಬೇಕು.

† ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಸ್ವಾಮಿ, ಐದು ಪರ್ಸೆಂಟ್ ಇಂಟರೆಸ್ಟ್ ಹಾಕಿದರೆ ಪೀನಲ್ ಇಂಟರೆಸ್ಟು ನೂರಕ್ಕೆ ನೂರು ಆಗುತ್ತದೆ. ತಗಾಯಿ ವಿಚಾರದಲ್ಲಿ ಇದನ್ನು ಪರಿಶೀಲಿಸಬೇಕು. ಇನಾಂ ಲ್ಯಾಂಡ್ಸಿನಲ್ಲಿ ಉತ್ಪತ್ತಿ ಹೆಚ್ಚಿಸಲು ಬಾವಿ ತೆಗೆಯಲು ಲಿಬರಲೈಸ್ಡ್ ಸ್ಕೀಂ ಮಾಡಿ ಜಾರಿಗೆ ತಂದು ಅನುಕೂಲ ಮಾಡಿಕೊಡಬೇಕು. ಸರಕಾರ ಪ್ರೋಹಿಬಿಷನ್ ಒಪ್ಪಿಕೊಂಡಿದೆ. ಪಾನನಿರೋಧ ಜಾರಿಗೆ ಬಂದ ಪ್ರದೇಶದಲ್ಲಿ ಮರ ಕಡಿದ ಪ್ರದೇಶ ಕಲ್ಟಿವೇಶನ್ನಿಗೆ ಕೊಟ್ಟು ಬಿಡ

ಬೇಕು. ಗೋಮಾಳ ಪ್ರದೇಶದ ಬಗ್ಗೆ ಪರಿಶೀಲನೆ ನಡೆಸಬೇಕು. ಗೋಮಾಳ ಪ್ರದೇಶ ಅತ್ಯಗತ್ಯ. ಇದರ ಮೇಲ್ವಿಚಾರಣೆ ರೆವೆನ್ಯೂ ಇಲಾಖೆಯಿಂದ ಅಗ್ರಿಕಲ್ಚರಲ್ ಇಲಾಖೆಗೆ ಬದಲಿಸಬೇಕು. ಸರ್ವೆ ಮಾಡುವುದಕ್ಕೆ ಮೊದಲು ಒಂದು ರೂಪಾಯಿ ಕೊಡುತ್ತಿದ್ದೆವು. ಈಗ 20 ರೂಪಾಯಿ ಕೊಡಬೇಕಾಗುತ್ತದೆ. ಇದರಲ್ಲಿ ರಿಯಾಯಿತಿ ಕೊಟ್ಟು ಕಂದಾಯ ಮಂತ್ರಿಗಳು ತಮ್ಮ ಒಳ್ಳೇ ಹೆಸರು ಉಳಿಸಿಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).—ಸ್ವಾಮಿ, ನಮ್ಮ ದೇಶದಲ್ಲಿ ಪಶುಗಳಿಗೆ ಆಪತ್ತು ಬಂದಿದೆ. ರೈತಾಪಿ ಜನರು ವ್ಯವಸಾಯದಲ್ಲಿ ಪಶುಗಳನ್ನೇ ಅವಲಂಬಿಸಿರುತ್ತಾರೆ. ಇಂದು ದೇಶದಲ್ಲಿ ಹೆಚ್ಚು ಆಹಾರ ಉತ್ಪತ್ತಿ ಮಾಡಬೇಕಾಗಿದೆ. ಎತ್ತು, ಎಮ್ಮೆ, ಹಸುಗಳಿಗೆ ರೋಗ ಬಂದು ಆಪತ್ತು ಬಂದಿದೆ. ಇದಕ್ಕೆ ಯೋಗ್ಯ ಕ್ರಮ ತೆಗೆದುಕೊಂಡು ರಕ್ಷಣೆ ಮಾಡಬೇಕು. ಮೊನ್ನೆ ರೋಗ ಬಂದ 18 ಹಸುಗಳಲ್ಲಿ 6 ಹಸುಗಳು ಹೋಗಿವೆ. ಇದರಿಂದ ರೈತರು ನಾಶವಾಗುವ ಪರಿಸ್ಥಿತಿ ಬಂದಿದೆ. ಸರ್ಕಾರ ಮುಂಜಾಗ್ರತೆ ವಹಿಸಿ ತಕ್ಕ ಕ್ರಮ ತೆಗೆದುಕೊಂಡು ಪರಿಹಾರ ಕೊಡುವ ಯೋಜನೆ ಮಾಡಬೇಕೆಂದು ರೆವೆನ್ಯೂ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಂಜೀವನಾಥ ಐಕಳ (ಸುರತ್‌ಕಲ್).—ಸ್ವಾಮಿ, ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಸ್ಟಾಕ್‌ಮೆನ್ ಅವರಿಗೆ ಯೋಗ್ಯ ಸಂಬಳ ಸಿಕ್ಕುತ್ತಾ ಇಲ್ಲ. ಸರಕಾರ ಇದಕ್ಕೆ ಗಮನ ಕೊಟ್ಟಿಲ್ಲ. ಪಶು ವೈದ್ಯಶಾಲೆಯಲ್ಲಿಯ ಸಿಬ್ಬಂದಿಯ ಶಿಕ್ಷಣಮಟ್ಟ, ಆಡಳಿತದಲ್ಲಿರುವ ಲೋಪ ದೋಷಗಳನ್ನು ಸರಿಪಡಿಸಬೇಕು ಎಂದು ಆಗಿಂದಾಗ್ಗೆ ಹೇಳುತ್ತಲೇ ಬಂದಿದ್ದೇವೆ. 1962ರಲ್ಲಿ 100 ವಿದ್ಯಾರ್ಥಿಗಳಲ್ಲಿ 12 ವಿದ್ಯಾರ್ಥಿಗಳು ಪಾಸಾಗಿದ್ದಾರೆ. 1963ರಲ್ಲಿ 150 ವಿದ್ಯಾರ್ಥಿಗಳಲ್ಲಿ 18 ಜನ ಪಾಸಾಗಿದ್ದಾರೆ. 1958ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನ್ ಮೂಲಕ ಅಡ್ವರ್ಟೈಜ್ ಮಾಡದೆ ಅಪ್ಲಿಕೇಷನ್ ಕಾಲ್‌ಫಾರ್ ಮಾಡದೆ ಟೆಂಪರರಿ ಅಂದರೆ ಹಂಗಾಮಿಯಾಗಿ 3 ಜನ ಪ್ರೊಫೆಸರ್ಸ್, 8 ಜನ ಲೆಕ್ಚರಸ್ ತೆಗೆದುಕೊಂಡಿದ್ದಾರೆ. ಇದರಿಂದ ಶಿಕ್ಷಣ ಮಟ್ಟಕ್ಕೆ ಧಕ್ಕೆ ಬಂದಿದೆ. ಇದಕ್ಕೆ ಗಮನ ಕೊಟ್ಟು ಸರಿಪಡಿಸಬೇಕು.

ಇನ್ನು ಸೀರಂ ಇನ್‌ಸ್ಟಿಟ್ಯೂಟ್‌ನಲ್ಲಿ ಫುಲ್ ಟೈಂ ಕೆಲಸ ಮಾಡತಕ್ಕಂಥವರು ಇಲ್ಲ. ಈಗ ಇರತಕ್ಕವರು ಪ್ರೊಫೆಸರ್ ಆಗಿರುವುದರಿಂದ ಎರಡೂ ಕಡೆ ಕೆಲಸ ಮಾಡಲು ಗಮನ ಕೊಡಬೇಕಾಗುತ್ತದೆ. ಇದನ್ನು ಸರಿಪಡಿಸಬೇಕು. ಈ ಡಿಪಾರ್ಟ್‌ಮೆಂಟ್‌ನಲ್ಲಿರುವ ಒಳಜಗಳ ಅನ್ಯಾಯ ಸರಿಪಡಿಸಬೇಕು. ಪ್ರಭಾವಕ್ಕೆ ಒಳಗಾಗಿ ಯೋಗ್ಯ ಅಧಿಕಾರಿಗಳಿಗೆ ನ್ಯಾಯ ದೊರಕುತ್ತಾ ಇಲ್ಲ. ಇದನ್ನು ಸರಿಪಡಿಸಬೇಕು.

ಪೌಲ್ಟ್ರಿ ಸ್ಕೀಮಿಗೆ ಅಮೇರಿಕದಿಂದ ಪಿ.ಎಲ್. 480ರ ಪ್ರಕಾರ ಸಹಾಯ ಸಿಕ್ಕಿದರೂ, ಅದನ್ನು ಉಪಯೋಗಿಸದೆ, poultry development ಕಾರ್ಯಕ್ರಮಗಳನ್ನು ಸೂಕ್ತವಾಗಿ ಜಾರಿಗೆ ತರದೆ ಇರುವಂಥಾದ್ದು.

ಸರ್‌ಛಾರ್ಜ್‌ನಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿನಾಯಿತಿ ಪಡಿಸಬೇಕೆಂದು ಹೇಳಿದರೂ ಮಾನ್ಯ ಮಂತ್ರಿಗಳು ಕೇಳದೆ ಇರುವರು.

12-00 NOON

ಶ್ರೀ ಬಿ. ಎಚ್. ಲಕ್ಷ್ಮಣ ಗೌಡ (ಬೇಲೂರು).—ಮೈಸೂರು ಡಿವಿಜನ್ನಿನಲ್ಲಿ ಇನಾಂ ರದ್ದಿಯಾತಿ ಕಾನೂನು ಪ್ರಕಾರ ರೈತರಿಗೆ ಭೂಮಿ ಸಿಗಬೇಕಾಗಿತ್ತು. ಇನಾಂದಾರರಿಗೆ ಕಾಂಪೆನ್‌ಸೇಷನ್ ದೊರೆಯಬೇಕಾಗಿತ್ತು. ಆದರೆ ರೈತರಿಗೆ ಭೂಮಿ ಇನಾಂದಾರರಿಗೆ ಕಾಂಪೆನ್‌ಸೇಷನ್ ಕೊಡುವುದರಲ್ಲಿ ಬಹಳ ಡಿಲೆ ಆಗಿದೆ. ರೈತರಿಗೆ ಜಮೀನು, ಇನಾಂದಾರರಿಗೆ ಕಾಂಪೆನ್‌ಸೇಷನ್ ಕೊಡುವ ಹಾಗೆ ಸರಕಾರ ಬೇಗ ಏರ್ಪಾಡು ಮಾಡಬೇಕು.

ನಗರ ಪ್ರದೇಶಗಳಲ್ಲಿ ಬಡವರಿಗೆ ಮನೆ ಕಟ್ಟುವುದಕ್ಕೆ ಜಾಗ ಸಿಗುತ್ತಾ ಇಲ್ಲ. ಮುನಿಸಿಪಾಲಿಟಿಯವರು ಇನ್‌ಕಂ ಬರುವುದನ್ನು ಮಾತ್ರ ವಿಚಾರ ಮಾಡುತ್ತಾರೆ. ಆದ್ದರಿಂದ ಬಡವರಿಗೆ ಸೈಟು ಕೊಡದೆ ಹರಾಜು ಮಾಡುತ್ತಾರೆ. ಅದರಿಂದ ಬಡವರಿಗೆ ಅನಾನುಕೂಲವಾಗಿದೆ. ಪಟ್ಟಣಗಳ ಸುತ್ತ ಮುತ್ತ ಇರುವ ಬಡವರಿಗೆ ರೆವೆನ್ಯೂ ಭೂಮಿಯನ್ನು ಕೊಟ್ಟು ಮನೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಬೇಕು.

ದರಖಾಸ್ತು ವಿಲೇವಾರಿಯಲ್ಲಿ ಬಡವರಿಗೆ ಮತ್ತು ಹರಿಜನರಿಗೆ ಅನ್ಯಾಯವಾಗುತ್ತಿದೆ. ಬಡವರ ಹೆಸರಿನಲ್ಲಿ ಖಮೀಮರು ಜಮೀನುಗಳನ್ನು ಹೊಡೆದುಕೊಳ್ಳುತ್ತಿದ್ದಾರೆ. ಇದರಿಂದ ಬಡವರಿಗೆ ಅನ್ಯಾಯವಾಗಿದೆ. ಸರಕಾರ ಇದನ್ನು ತೀವ್ರವಾಗಿ ವಿಚಾರ ಮಾಡಬೇಕು.

(ಶ್ರೀ ಬಿ. ಎಚ್. ಲಕ್ಷ್ಮಣಗೌಡ)

ವೆಟರಿನರಿ ಇಲಾಖೆಯಲ್ಲಿ promotion ಮತ್ತು ಅಪಾಯಿಂಟ್‌ಮೆಂಟುಗಳಲ್ಲಿ ಬಹಳ ಅನ್ಯಾಯ ನಡೆಯುತ್ತಾ ಇದೆ. ಇವರ ಬಗ್ಗೆ ಸರಕಾರ ಒಂದು ತನಿಖೆ ನಡೆಸಬೇಕು. ಅದನು ಹಿಂದೆ ಒಂದು ಸಾರಿಯೂ ಹೇಳಿದ್ದೇನೆ. ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು.

† ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಸ್ವಾಮಿ, ರೆವಿನ್ಯು ಇಲಾಖೆಯ ವಿಷಯಕ್ಕೆ ಮಾನ್ಯ ಸದಸ್ಯರು ಸುಮಾರು 15-20 ಜನ ಬಹಳ ಅನುಭವದಿಂದ ತಮ್ಮ ಸಲಹೆಗಳನ್ನು ಇವತ್ತು ಕೊಟ್ಟಿದ್ದಾರೆ. ಈ ಇಲಾಖೆಯ ವಿಷಯ ಬಹಳ ಟೀಕೆಗೆ ಬರುತ್ತದೆಂದು ರಾತ್ರಿ ಎಲ್ಲಾ ನಿದ್ರೆ ಬಂದಿರಲಿಲ್ಲ. ಏಕೆಂದರೆ ಕಳೆದ ವರ್ಷ ಈ ಇಲಾಖೆಯ ಚರಿತ್ರೆಯಲ್ಲಿಯೇ ಬಹಳ ಸಂದಿಗ್ಧವಾದ ವರ್ಷ ಅಂತ ನಾನು ತಿಳಿದುಕೊಂಡಿದ್ದೇನೆ. ರೆವಿನ್ಯು ಇಲಾಖೆ ಮೊದಲೇ ಅಷ್ಟು ಪಾಪ್ಯುಲರ್ ಆಗುವ ಇಲಾಖೆ ಅಲ್ಲ. ಏಕೆಂದರೆ ವಸೂಲಿ ಮಾಡುವ ಮನುಷ್ಯ ಯಾವತ್ತೂ ಪಾಪ್ಯುಲರ್ ಆಗುವುದು ಸಾಧ್ಯವಿಲ್ಲ. ಈಗ ಡೆವಲಪ್‌ಮೆಂಟ್ ಇಲಾಖೆ ಬಂದಮೇಲಂತೂ ಇದು ಬರೀ ವಸೂಲಿಮಾಡುವ ಇಲಾಖೆ ಆಗಿಹೋಯಿತು. ಮೊದಲೇನೇ ಕಂದಾಯ ವಸೂಲಿ ಮಾಡುವುದು; ಕಂದಾಯ ವಿಷಯಕ್ಕೆ ಗೊತ್ತೇ ಇದೆ, ಅಷ್ಟೇನೂ ಸುಲಭವಲ್ಲ. ಯಾವತ್ತೂ ಪೂರ್ವದಿಂದಲೂ, ಕಂದಾಯ ವಸೂಲಿ ಸುಲಭವಾಗಿ ನಡೆದಿಲ್ಲ ಅನ್ನುವುದು ಅನುಭವದಿಂದ ಗೊತ್ತಿದೆ. ಒಂದೆರಡು ಸರ್ತಿ ಹೇಳಿದ್ದೇನೆ: ರಾಮ ರಾಜ್ಯದಲ್ಲಿ ಭರತನಿಗೆ ಗಂಟೆ ಕಟ್ಟಿದ್ದರು ರೈತರು ಸೇರಿ; ಏಕೆಂದರೆ ಕಂದಾಯ ತಪ್ಪಿಸಿಕೊಳ್ಳುವುದಕ್ಕೆ. ಕಂದಾಯ ವಸೂಲಿ ಮಾಡುವುದಕ್ಕೆ ಭರತ ಅಲ್ಲಿಗೆ ಬರುತ್ತಿದ್ದಾನೆ ಎಂದು ಗೊತ್ತಾಗಲಿ ಎಂದು. ಹೀಗೆ ಪೂರ್ವದಿಂದಲೂ, ಚರಿತ್ರೆಯಲ್ಲಿ, ಕಂದಾಯ ವಸೂಲಿ ಮಾಡುವ ಕೆಲಸ, ಯಾವತ್ತೂ ಕೂಡ ಪಾಪದ ಕೆಲಸ, ಸಂತೋಷದ ಕೆಲಸವಲ್ಲ. ಈ ಇಲಾಖೆಯವರು ಬರೀ ಕಂದಾಯ ವಸೂಲು ಮಾಡದೆ, ಕಂದಾಯ ವಸೂಲಿ ಮಾಡುವುದರ ಜೊತೆಗೆ, ಡೆವಲಪ್‌ಮೆಂಟ್ ವರ್ಕುಗಳಿಗೆ ಸ್ವಲ್ಪ ಖರ್ಚು ಮಾಡುತ್ತಿದ್ದರು. ಈಗ ಕಂದಾಯ ವಸೂಲಿ ಮಾಡುವುದರಲ್ಲಿ ಬಂದ ಕೆಟ್ಟಹೆಸರನ್ನು ತೆಗೆದುಕೊಂಡು, ಅಲ್ಲಿ ಇಲ್ಲಿ ಒಳ್ಳೆಯ ಕೆಲಸಮಾಡಿ ಬರುತ್ತಿದ್ದ ಒಳ್ಳೆಯ ಹೆಸರನ್ನು ಈ ಇಲಾಖೆ ಕಳೆದುಕೊಳ್ಳುತ್ತಿದೆ. ಅಭಿವೃದ್ಧಿ ಕೆಲಸ ಮಾಡುವುದಕ್ಕೆ, ಡೆವಲಪ್‌ಮೆಂಟ್ ವರ್ಕ್ಸ್‌ಗೆ ಒಂದು ಇಲಾಖೆಯೇ ಆಗಿಹೋಗಿದೆ. ರಸ್ತೆ ಕೊಡುವ ವಿಷಯಕ್ಕಾಗಲಿ, ಊರಿಗೆ ಬಾವಿ, ಸ್ಕೂಲು ಕೊಡುವುದಕ್ಕಾಗಲಿ, ಗ್ರಾಮಕ್ಕೆ ನಿತ್ಯ ಜೀವನಕ್ಕೆ ಬೇಕಾದ ಯಾವುದೇ ಅನುಕೂಲ ಮಾಡುವ ಕೆಲಸವಾಗಲಿ, ಅದಕ್ಕೆ ಗಮನ ಕೊಡುವುದಕ್ಕೆ ಬೇರೆ ಇಲಾಖೆಯೇ ಆಗಿಬಿಟ್ಟಿದೆ. ತಾವೇ ಯೋಚನೆಮಾಡಿ, ಬರೀ ವಸೂಲಿ ಕೆಲಸ, ಜಪ್ತಿ, ಅಟ್ಯಾಚ್‌ಮೆಂಟ್ ತಂದು ಕಲೆಕ್ಷನ್ ಮಾಡುವ ಇಲಾಖೆಯಾಗಿದೆ. ಯಾವುದಾದರೂ ಡಿಪಾರ್ಟ್‌ಮೆಂಟಿಗೆ ಬರಬೇಕಾದ ಹಣ ಬಾಕಿ ಇದ್ದರೆ, ನಾವು ರೆವಿನ್ಯು ಇಲಾಖೆಯವರು ವಸೂಲು ಮಾಡುತ್ತೇವೆ; ಏಕೆಂದರೆ, ಯಾವ ಬಾಕಿ ಹಣವನ್ನು will be treated as arrears of land revenue ಎಂದು ಎಲ್ಲ ಕಾನೂನುಗಳಲ್ಲಿಯೂ ಮೆನ್‌ಷನ್ ಮಾಡಿಬಿಡುತ್ತಾರೆ. ಪಾಪ, ಇವತ್ತು ಯಾವ ತಾಲ್ಲೂಕು ತಹಸೀಲ್‌ದಾರನೇ ಆಗಲಿ, ಅವನಿಗೆ ವಸೂಲಿ ಕೆಲಸ ಬಹಳ ಇರುವುದರಿಂದ ಅವನು ಅಷ್ಟೊಂದು ಪಾಪ್ಯುಲರ್ ಆಗುವುದಕ್ಕೆ ಆಗುವುದಿಲ್ಲ. ಅದರಲ್ಲಿಯೂ ಹೋದ ಒಂದೆರಡು ವರ್ಷಗಳಲ್ಲಿ ಬಹಳ ವಸೂಲಿ ನಡೆದಿದೆ. ಮೊದಲನೆಯದಾಗಿ 1961-62ನೇ ಇಸವಿಯಲ್ಲಿ ಸರ್ಚಾರ್ಜು ಒಂದು ಆಯಿತು—25.30 ಪರ್ಸೆಂಟು ಸರ್ಚಾರ್ಜ್ ಆಯಿತು. ಕಾರಣವೇನೆಂದರೆ, ವಸೂಲಿ ಮಾಡಿರಲಿಲ್ಲ, ಬಿಟ್ಟುಬಿಟ್ಟಿದ್ದರು, ಅಕ್ಯೂಮಲೇಟ್ ಆಗಿತ್ತು. ಅದರ ಜೊತೆಗೆ 100 ಪರ್ಸೆಂಟ್ ಸರ್ಚಾರ್ಜ್ ಮಾನ್ಯ ಸಭೆಯ ಒಪ್ಪಿಗೆ ಪಡೆದುಕೊಂಡು ಈ ಎರಡು ವರ್ಷದಲ್ಲಿ ಹಾಕಿದ್ದೇವೆ. ಅದರ ಜೊತೆಯಲ್ಲಿ Defence Fund ಕಲೆಕ್ಷನ್ ಬಂದಿತು, ತಮಗೆ ಗೊತ್ತಿದೆ. ದೇಶ ಭಕ್ತಿಯಲ್ಲಿ ಮೈಸೂರು ಸಂಸ್ಥಾನಕ್ಕೂ ಕಡೆಯಾಗಿ ಉಳಿಯಲಿಲ್ಲ. 3½ ಕೋಟಿ ರೂಪಾಯಿ ನಮ್ಮ ಪ್ರಜೆಗಳು ಕೊಟ್ಟಿದ್ದಾರೆ. ಇದನ್ನು ಎಲ್ಲಾ ವಸೂಲು ಮಾಡಿದವರು ಮುಕ್ಕಾಲು ಭಾಗ ರೆವಿನ್ಯು ಆಫೀಸರುಗಳು, ಡೆಪ್ಯುಟಿ ಕಮಿಷನರುಗಳು, ತಹಸೀಲುದಾರರುಗಳು ಇವರೆಲ್ಲಾ ಒಟ್ಟಿಗೆ ಸೇರಿ ಮಾಡಿದರು. ಒಂದು ಕಡೆ ಹಿಂದಿನ ಸರ್ಚಾರ್ಜು ಜೊತೆಗೆ ಸೆಂಟ್‌ಪರ್ಸೆಂಟ್ ಸರ್ಚಾರ್ಜು, ಅದರ ಜೊತೆಗೆ ಈಗಿನ ಕಂದಾಯ ಎಲ್ಲಕ್ಕಿಂತಲೂ ಹೆಚ್ಚಾಗಿ ಡಿಫೆನ್ಸ್ ಫಂಡು. ಒಂದೇ ಸಲ ಇವುಗಳೆಲ್ಲಾ ನಡೆಯಬೇಕಾದರೆ, ಇದು ಬಹಳ ಕಷ್ಟತರವಾದ ಕೆಲಸ ಎನ್ನುವುದು ಎಲ್ಲರಿಗೂ ಅರ್ಥವಾಗುತ್ತದೆ.

ಈ ಎರಡು ವರ್ಷ ಅಷ್ಟು ಒಳ್ಳೆಯ ವರ್ಷಗಳಲ್ಲ. ನಮ್ಮ ಬೆಳೆ ಪರಿಸ್ಥಿತಿ ದೃಷ್ಟಿಯಿಂದ ಕಳೆದ 2 ವರ್ಷ ಅಷ್ಟು ಒಳ್ಳೆಯದಲ್ಲ. ಒಳ್ಳೆಯ ಬೆಳೆ ಆಗಿದೆಯೆಂದು ರೈತ ಈ ವರ್ಷ ಹೇಳಿದ್ದು ಎಲ್ಲಿಯೂ ಕೇಳಲಿಲ್ಲ. ರೈತನಿಗೆ ಬೆಳೆ ಅಷ್ಟಾಗಿ ಬರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ 3-4 ಕಂದಾಯ ವಸೂಲು ಮಾಡುವುದು ಕಷ್ಟಕರವಾದ ಕೆಲಸ. ಅದರ ಜೊತೆಗೆ ತಕಾವಿ ಲೋನುಗಳು ಅಕ್ಯೂಮಲೇಟ್ ಆಗಿವೆ.

ಬಾವಿಗಳಿಗೆ ಲಿಬರಲೈಸ್ಡ್ ಸ್ಕೀಮಿನಲ್ಲಿ ಲೋನು ತೆಗೆದುಕೊಂಡಿದ್ದಾರೆ. ರೈತರಿಗೆ ಹತ್ತಾರು ವರ್ಷಗಳಿಂದ. ಪ್ರಜಾಪ್ರಭುತ್ವ ಬಂದಮೇಲೆ, ಅನೇಕ ವಿಧದಲ್ಲಿ ಅನೇಕ ಸ್ಕೀಮುಗಳಿಗೆ ಲೋನುಗಳನ್ನು ಕೊಟ್ಟಿದ್ದಾರೆ. ಇವೆಲ್ಲಾ ಅಕ್ಯುಮುಲೇಟ್ ಆಗಿ ಬಂದಿವೆ ಬಹುಶಃ 30-35 ಕೋಟಿ ರೂಪಾಯಿ ರೈತರಿಂದ ವಸೂಲಿ ನಡೆಯಬೇಕಾಗಿದೆ ಈ ವಸೂಲಿ ಒಂದು ಕಡೆ ನಡೆಯಬೇಕು. ಇನ್ನೊಂದು ಕಡೆ ಬೆಳಗಾದರೆ ಟ್ರಂಕ್ ಕಾಲ್ ಬರುತ್ತಿರುತ್ತದೆ; ಕೋಯರ್ಸಿವ್ ಮೆಥಡ್ಸ್ ಉಪಯೋಗಿಸಿ ತಕಾವಿ ಲೋನು, ಮಗದೊಂದು ರೆವಿನ್ಯೂ ಅಧಿಕಾರಿಗಳು ವಸೂಲು ಮಾಡುತ್ತಿದ್ದಾರೆ, ಸ್ಟೇ ಆರ್ಡರ್ ಕೊಡಿ ಎಂದು ಫೋನ್ ನಮಗೆ ಬರುತ್ತದೆ. ಕೋಲಾರದ ಕಡೆಯಿಂದ, ತುಮಕೂರು ಕಡೆಯಿಂದ, ಎಲ್ಲ ಕಡೆಗಳಿಂದ, ರೈತರಿಗೆ ತುಂಬ ತೊಂದರೆ ಇರುತ್ತದೆ. ಈ ರೀತಿ ಹಿಂದಿನ ಬಾಕಿ ವಸೂಲು ಮಾಡುವುದರಿಂದ ಬಹಳ ಕಷ್ಟವಾಗಿದೆ. ಅವರಿಗೆ ಈ ವಸೂಲಿಯನ್ನು ನಿಲ್ಲಿಸಲು ಇನ್‌ಸ್ಟ್ರಕ್ಷನ್ ಕೊಡಿ ಎಂದು ಬೆಳಗಾದರೆ ಫೋನ್ ಮಾಡುತ್ತಾರೆ. ಇದೆಲ್ಲಾ ಬಲಾತ್ಕಾರದ ಕ್ರಮಗಳನ್ನು ಮಾಡಬೇಕಾಗಿರುವುದರಿಂದ ಈ ಇಲಾಖೆಯ ಆಫೀಸರುಗಳು ಅಷ್ಟೊಂದು ಪಾಪ್ಯುಲರ್ ಆಗುವುದಕ್ಕೆ ಆಗುವುದಿಲ್ಲ.

ಎರಡನೆಯದಾಗಿ ಈ ಇಲಾಖೆಯಲ್ಲಿ ತಮಗೆ ಗೊತ್ತಿದೆ, ಬಹಳ ಲೆತಾರ್ಜಿ ಇದೆ, ನಾನು ಒಪ್ಪಿಕೊಳ್ಳುತ್ತೇನೆ. ಅದು ಪೂರ್ವದಿಂದಲೂ ಬಂದಿದೆ. ಇದು ಬಹಳ ದೊಡ್ಡ ಇಲಾಖೆ. ಶ್ರೀ ಮಾದಪ್ಪ ಗೌಡರು ಹೇಳಿದ ಹಾಗೆ ಇದು ರಾಜ ಇಲಾಖೆ ಆಗಿತ್ತು. ರಾಜರು ಹೋದರು, ಅವರೂ ದುಃಖ ಪಡಲಿಲ್ಲ, ಈ ಇಲಾಖೆ ಹೋದರೂ ಯಾರೂ ದುಃಖಪಡುವುದಿಲ್ಲ. The idea is, the Department should wither away, Development Department improve ಆಗಬೇಕು. ಈ ಕಲೆಕ್ಷನ್ ಕೆಲಸವನ್ನು ಇಂಗ್ಲೆಂಡ್, ಫ್ರಾನ್ಸ್ ದೇಶಗಳಲ್ಲಿ ನಾನು ಸ್ಟಡಿ ಮಾಡಿದ್ದೇನೆ. ಅಲ್ಲಿ ಇಲ್ಲಿಯ ಹಾಗೆ ಪಟೇಲ ಶಾನುಭೋಗ ಕಲೆಕ್ಷನ್ ಮಾಡುತ್ತಾ ಇಲ್ಲ; ಮಾಡದೆ ಇಲ್ಲ. ಅವರು ಪೋಸ್ಟ್ ಆಫೀಸಿಗೆ ರೆಮಿಟ್ ಮಾಡುತ್ತಾರೆ, because they are very advanced. ಏನೇ ಕೊಡಬೇಕಾಗಿರಲಿ, ಲೋನ್ ಇನ್‌ಸ್ಟಾಲ್‌ಮೆಂಟಾಗಲಿ, ಕಂದಾಯದ ಇನ್‌ಸ್ಟಾಲ್‌ಮೆಂಟಾಗಲಿ, ಸರಕಾರಕ್ಕೆ ಕೊಡಬೇಕಾದ ಇನ್ಕಾಲ್ ಸಾಲವೇ ಆಗಲಿ, ಅಥವಾ ಯಾವ ಹಣವನ್ನು ಕೊಡಬೇಕಾಗಿದ್ದರೂ, ನೇರವಾಗಿ ಪೋಸ್ಟ್ ಆಫೀಸು ಮುಖಾಂತರ ಕಳುಹಿಸುತ್ತಾರೆ. There is no need for collector or collection. ಆ stage ನಮ್ಮ ದೇಶದಲ್ಲಿ ಬರುವಂಥ ಕಾಲದಲ್ಲಿ, ಇದು ಹೋಗಬಹುದು. ಅದು ಬರುವವರೆಗೆ, ಈ ರೆವಿನ್ಯು ಇಲಾಖೆ ಇರುತ್ತದೆ; ಇರಬೇಕಾಗುತ್ತದೆ.

ಆದರೆ ಈ ಇಲಾಖೆ ಎಷ್ಟು ಪಾಪ್ಯುಲರ್ ಆಗಿರಬೇಕೋ, ಅಷ್ಟು ಪಾಪ್ಯುಲರ್ ಆಗುವುದಕ್ಕೆ ಆಗುವುದಿಲ್ಲ. ಒಂದೇ ಸಲ ಆಗುವುದಿಲ್ಲ. ಹಿಂದಿನಿಂದಲೂ ಈ ಇಲಾಖೆಯಲ್ಲಿ ಅನೇಕ ಬದಲಾವಣೆಗಳು ಆಗಬೇಕಾಗಿತ್ತು. ಹಿಂದೆ 10 ವರ್ಷ ಕೇಂದ್ರದಲ್ಲಿ ಆಡಳಿತ ಅನುಭವ ಪಡೆದುಕೊಂಡು ಇಲ್ಲಿಗೆ ಬಂದೆ. ಈ ಎರಡು ವರ್ಷದಲ್ಲಿ ನನಗೆ ಆಗಿರುವಷ್ಟು ಅನುಭವ ನನಗೆ 10 ವರ್ಷದಲ್ಲಿ ಆಗಿಲ್ಲ ಎಂದುಕೊಂಡಿದ್ದೇನೆ. ರೆವಿನ್ಯೂ ಇಲಾಖೆಯಲ್ಲಿ ಅಷ್ಟೊಂದು ಬದಲಾವಣೆಯಾಗಬೇಕಾದ ಪರಿಸ್ಥಿತಿ ಬಂದಿದೆ. ನನ್ನ ಹಿಂದೆ ಮಂತ್ರಿಗಳಾಗಿದ್ದಂಥ ಶ್ರೀ ಮಂಜಪ್ಪಗೌಡರು ಬಹಳ ಉತ್ಸಾಹದಿಂದ, ಒಳ್ಳೆಯ ಉದ್ದೇಶದಿಂದ, ಕೆಲವು ಭಾರಿಭಾರಿ ಯೋಜನೆಗಳನ್ನು, ಬಿಲ್ಲುಗಳನ್ನು ಮಾಡಿಟ್ಟು ಹೊರಟು ಹೋದರು. ಮೊದಲನೆಯದು Abolition of hereditary rights of village officers. ಅವರು ನಮ್ಮ ರೆವಿನ್ಯು ಇಲಾಖೆಯ ಅಡಿಗಲ್ಲು. ಪಟೇಲ, ತೋಟಿ, ತಳವಾರ, ಶಾನುಭೋಗ ಈ ಇಲಾಖೆಗೆ ಅಡಿಗಲ್ಲು. ಶಾನುಭೋಗ, ಪಟೇಲನನ್ನು ಸರಿಯಾಗಿ ಇಟ್ಟುಕೊಳ್ಳದೆ ಇದ್ದ ರೈತ, ಪ್ರೈಮ್ ಮಿನಿಸ್ಟರಿಗೆ ಅರ್ಜಿ ಹಾಕಿಕೊಳ್ಳಲಿ, ಪ್ರಯೋಜನವಾಗುವುದಿಲ್ಲ; ಮತ್ತೆ ಪಟೇಲ ಶಾನುಭೋಗನಿಗೇ ರೆಫರೆನ್ಸ್ ಬರುತ್ತದೆ. ಆದರಿಂದ ಪಟೇಲ, ಶಾನುಭೋಗ, ತೋಟಿ ತಳವಾರ, ನೀರ್ಗಂಟಿ, ಇವರೆಲ್ಲಾ ನಮ್ಮ ರೆವಿನ್ಯು ಆಡಳಿತದಲ್ಲಿ ಮೂಲಾಧಾರಗಳು. ಇವರ ಬುಡಕ್ಕೇ ನಾವು ಕೊಡಲಿಪೆಟ್ಟು ಹಾಕುವ ಆಕ್ಟ್ ತಂದೆವು. ದೇಶದ ಹಿತದೃಷ್ಟಿಯಿಂದ ತಂದಿದ್ದೇವೆ. 7,000 ಜನ ಶ್ಯಾನುಭೋಗರು ಅಷ್ಟೇ ಜನ ಪಟೇಲರು. ಅವರಿಗೆ ಎರಡರಷ್ಟು ಇತರ ವಿಲೇಜ್ ಆಫೀಸರ್ಸ್‌ನ್ನು ತೆಗೆಯುತ್ತೇವೆ ಎಂದು ಹೇಳಿದ್ದೆವು. ಆದರೆ ಅವರನ್ನು ತೆಗೆಯುವುದಕ್ಕೆ ಕಾರಣಾಂತರದಿಂದ ಆಗಲಿಲ್ಲ ಎಂಬುದು ತಮಗೂ ಗೊತ್ತಿದೆ. ಹೈಕೋರ್ಟಿನವರು ಸ್ಟೇ-ಆರ್ಡರ್ ಕೊಟ್ಟರು. ಈಗ ಅದು ಸುಪ್ರೀಂ ಕೋರ್ಟಿಗೆ ಹೋಗಿದೆ, ಅವರು ನಮ್ಮ ಮಾತನ್ನು ಕೇಳುತ್ತಾ ಇಲ್ಲ. ಅನೇಕ ದೂರುಗಳು ಬರುತ್ತಾ ಇವೆ. ಕೆಲವು ಮಾನ್ಯ ಸದಸ್ಯರು ಪಟೇಲ್ ಶ್ಯಾನುಭೋಗರಿಗೆ ಆಫೀಸರ್ಸ್ ಬಯ್ಯುತ್ತಾರೆ ಎಂದು ಹೇಳಿದರು. ನನ್ನ ಹತ್ತಿರ ಬಂದಿರುವ ರಿಪೋರ್ಟ್ ಪ್ರಕಾರ ಡಿವಿಜನಲ್ ಕಮೀಷನರಿಗೇ ಶಾನುಭೋಗರು 'ಅರೇ ಹೋಗಯ್ಯ ಮಾಡೋಣ' ಎಂದು ಹೇಳಿರುವುದು ನನ್ನ ಗಮನಕ್ಕೆ ಬಂದಿದೆ.

Sri S. M. KRISHNA (Maddur).—Is the Supreme Court Stay Order a blanket stay order?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ಎಲ್ಲರಿಗೂ ಸ್ಟೇ ಕೊಟ್ಟಿದ್ದಾರೆ. ಆದ್ದರಿಂದ ಒಂದು ಕಡೆ ಅಸಮಾಧಾನದಿಂದ ಕೂಡಿರುವ ಅಧಿಕಾರಿವರ್ಗ, ಮತ್ತೊಂದು ಕಡೆ ಅವರ ಮೇಲೆ ಯಾವ ಅಧಿಕಾರವನ್ನೂ ಚಲಾಯಿಸಲು ಅವಕಾಶ ಇಲ್ಲದ ಅಡಳಿತವರ್ಗ; ಹೀಗಾಗಿ ಪಟೇಲ್ ಶಾನುಭೋಗರ ಹತ್ತಿರ ಕೆಲಸ ತೆಗೆದುಕೊಂಡು ಇಷ್ಟೊಂದು ವಸೂಲಿ ನಡೆಸಬೇಕಾದರೆ ಬಹಳ ಕಷ್ಟತರವಾದ ಕೆಲಸವಾಗಿದೆ. ಇದರ ಜೊತೆಗೆ ಕಾನೂನು ಬದಲಾವಣೆ ಬೇರೆ ಹೋದವರ್ಷ ಆಯಿತು. ಅದು ತಮಗೆ ಗೊತ್ತಿದೆ. 1880ರಲ್ಲಿ ಇದ್ದ ರೆವಿನ್ಯೂಕೋಡನ್ನು ಬದಲಾವಣೆಮಾಡಿ ಈಗ ಅದಕ್ಕೆ ಪ್ರೆಸಿಡೆಂಟರ ಒಪ್ಪಿಗೆ ದೊರೆತಿದೆ ಅದು ಇದೇ ಏಪ್ರೆಲ್ ಒಂದರಿಂದ ಜಾರಿಗೆ ಬರುತ್ತದೆ. ಅದೇ ರೀತಿಯಲ್ಲಿ ಇನ್ನು ಅನೇಕ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಕಾನೂನುಗಳೂ ಸಹ ಈಗ ಕಳೆದ ವರ್ಷದಲ್ಲಿ ಪಾಸ್ ಮಾಡಿದ್ದು ಆಯಿತು. ರೆವಿನ್ಯೂ ಇಲಾಖೆಗೆ ಯಾರು ಮೂಲಾಧಾರವೋ ಅವರ ನಿರುತ್ಸಾಹದಿಂದ, ಅವರು ಒಂದು ಅಕ್ಕರೆ ಇಲ್ಲದೆ ಮಾಡಿದ ಕೆಲಸದಿಂದ ದೇಶದಲ್ಲಿ ಬಹಳ ಅಸಮಾಧಾನ ಇದೆ ಎಂದು ನಾನು ಅಂದುಕೊಂಡಿದ್ದೆ. ಆದರೆ ಇಲ್ಲಿ ಬಂದು ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಟೀಕೆ ಇಲ್ಲವೇ, ಟೀಕೆಯಿಂದ ತಪ್ಪಿಸಿಕೊಂಡ ಮಿನಿಸ್ಟರು ಯಾರೂ ಇರಲಿಲ್ಲ. ಮಾನ್ಯ ಸದಸ್ಯರು ಯಾರೂ ಕೂಡ ಈ ಇಲಾಖೆಯ ವಿಷಯದಲ್ಲಿ ಅಷ್ಟೊಂದು ಟೀಕೆ ಮಾಡಲಿಲ್ಲ. ಅವರ ಅನುಭವದಿಂದ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಒಟ್ಟಿನಲ್ಲಿ ನಾನು ಹೇಳುವುದೇನೆಂದರೆ ಈ ಇಲಾಖೆಯಲ್ಲಿ ಬಹಳ ಲೆಥಾರ್ಜಿ ಇದೆ. ಅದನ್ನು ಸರಿಮಾಡಬೇಕಾದರೆ ಸ್ವಲ್ಪ ಕಷ್ಟ. ಏಕೆಂದರೆ ಅವು ಬೇಸಿಕ್ ಡಿಫೆಕ್ಟ್ಸ್. ಶ್ರೀಮಾನ್ ಮಾದಪ್ಪಗೌಡರು ನಾನು ಇನ್ಸ್‌ಪೆಕ್ಟ್ ಮಾಡುವುದಿಲ್ಲ ಎಂದು ಹೇಳಿದರು, ಒಪ್ಪಿಕೊಳ್ಳುತ್ತೇನೆ. ಸುಮಾರು ಎರಡು ವರ್ಷದಿಂದ, ಹಿಂದೆ ಶ್ರೀಮಾನ್ ಮಂಜಪ್ಪ ಗೌಡರು ಸರ್‌ಪ್ರೈಸ್ ವಿಸಿಟ್ ಕೊಡುವ ಸಿಸ್ಟಂ ಏನು ಇಟ್ಟುಕೊಂಡಿದ್ದರು, ಅದನ್ನು ಬದಲಾಯಿಸಿ ಡಿವಿಜನಲ್ ಕಮೀಷನರಿಗೇ ಅದನ್ನು ವಹಿಸಿದೆ. ಆದ್ದರಿಂದ ಅವರೇ ಸರ್‌ಪ್ರೈಸ್ ವಿಸಿಟ್‌ಮಾಡಿ ಅವರ ರಿಪೋರ್ಟನ್ನು ನನಗೆ ಕಳುಹಿಸುತ್ತಾ ಇದ್ದಾರೆ. ಅದನ್ನು ಅವರು ಪೇಪರ್ ಕೊಡುವುದಿಲ್ಲ. ತಾಲ್ಲೂಕು ಆಫೀಸಿಗೆ ಹೋಗಿ ಸರ್‌ಪ್ರೈಸ್ ವಿಸಿಟ್ ಕೊಡದಿದ್ದರೆ, ಅಗಿಂದಾಗ್ಗೆ ನೋಡದಿದ್ದರೆ, They regularly pay surprise visits to the taluks. Divisional officers are senior officers and they are meant for them. ದೆಹಲಿಯಲ್ಲಿ ಇದ್ದಾಗ ನನಗೆ ಅದು ಬಂತು ಎಂದು ಕಾಣುತ್ತದೆ.

I used to meet Divisional Commissioners once in two or three months and discuss with them various difficulties. ರೆವಿನ್ಯೂ ಮಿನಿಸ್ಟರು ಸರ್‌ಪ್ರೈಸ್ ವಿಸಿಟ್ ಮಾಡಬೇಕು. ನಾನೇ ಹೋದರೆ ಉತ್ತಮ ಎಂದು ಹೇಳುವುದನ್ನು ಒಪ್ಪುತ್ತೇನೆ. ನನಗೆ ಹೊಟ್ಟೆಕರಗ ತ್ತದೆ ಎಂದು ಹೇಳಿದರು. ಅದು ವಯಸ್ಸಿನಿಂದ ಬರುತ್ತದೆ, ನಮ್ಮ ತಾತನಿಗೂ ಹೊಟ್ಟೆ ಇತ್ತಂತೆ, ನಮ್ಮ ಅಪ್ಪನಿಗೂ ಇತ್ತು ನನಗೂ ಬಂದಿದೆ. ಸುಮಾರು 45 ವರ್ಷ ಆದರೆ ಹೊಟ್ಟೆ ಬರುತ್ತದೆ ಎಂದು ನಮ್ಮ ಅಪ್ಪ ಹೇಳುತ್ತಾ ಇದ್ದರು. ಮಾನ್ಯ ಸದಸ್ಯರ ತಿರುಗಾಡದೇ ಇದ್ದದ್ದರಿಂದ ಬರುತ್ತದೆ ಎಂದು ಹೇಳುವುದು ನಿಜವಾಗಿದ್ದರೆ ಪುನಃ ತಿರುಗಾಡುವುದನ್ನು ನಿಜವಾಗಿಯೂ ಶುರುಮಾಡುತ್ತೇನೆ (ನಗು !) ಸಾಧ್ಯವಾದಷ್ಟು ತಾಲ್ಲೂಕು ಆಫೀಸಿಗೆ ಸರ್‌ಪ್ರೈಸ್ ವಿಸಿಟ್ ಕೊಟ್ಟು ಯಾವಯಾವ ಕಡೆಗಳಲ್ಲಿ ಏನೇನು ನ್ಯೂನತೆ ಇದೆ ಅದನ್ನು ಸರಿಮಾಡುತ್ತೇನೆ. ಸಾಧ್ಯವಾದಷ್ಟು ತಾಲ್ಲೂಕು ಆಫೀಸುಗಳನ್ನು ನ್ಯಾಯವಾದ ದಾರಿಯಲ್ಲಿ ತರಬೇಕಾದ್ದು ನಿಜ. ಆದರೆ ಕೆಲವು ಬೇಸಿಕ್ ಛೇಂಜಸ್ ಆಗಬೇಕು. ಈಗ ಹೊಸ ಆಕ್ಟ್ ಬರುತ್ತಾ ಇದೆ. ಡಿಪಾರ್ಟ್‌ಮೆಂಟ್‌ಗಳೂ ಕೂಡ ರೀ ಆರ್ಗನೈಸ್ ಆಗುತ್ತಾ ಇವೆ. 35 ವರ್ಷದಿಂದಲೂ ಸರ್ವೇ ಸೆಟ್ಲ್‌ಮೆಂಟ್ ಆಗಿರಲಿಲ್ಲ. ಅವನ್ನು ಬೇರೆ ಈ ವರ್ಷವೇ ಮಾಡಬೇಕಾಯಿತು. ಎರಡು-ಮೂರು ವರ್ಷದಿಂದ ಮಾಡಿಸುತ್ತಾ ಇದ್ದೇವೆ. ಈ ವರ್ಷದಲ್ಲಿ ಮುಗಿಸಬೇಕಾಗುತ್ತದೆ. ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟನ್ನೂ ಕೂಡ ಸ್ವಲ್ಪ ರೀ ಆರ್ಗನೈಸ್ ಮಾಡಬೇಕು. ಈ ವಿಷಯದಲ್ಲಿ ಅನೇಕ ಸಲಹೆಗಳನ್ನೂ ಕೊಟ್ಟಿದ್ದಾರೆ. ಅಲ್ಲೂ ತೃಪ್ತಿಕರವಾಗಿ ನಡೆಯುತ್ತಿಲ್ಲ. ಬಹಳ ಮಿಸ್ ಅಪ್ರೋಪ್ರಿಯೇಷನ್ ಇದೆ. ರಿಜಿಸ್ಟ್ರಾರ್ಸ್‌ಗೆ ಪ್ರೋಮೋಷನಲ್ ಆಪರ್ಚ್ಯುನಿಟೀಸ್ ಇಲ್ಲ. ಅವರಲ್ಲಿ ಡಬ್ಬಲ್ ಗ್ರ್ಯಾಜ್ಯುಯೇಟ್ಸ್ ಲಾ ಗ್ರಾಜ್ಯುಯೇಟ್ಸ್ ಇದ್ದಾರೆ. ಅವರ ಜೊತೆಯವರು ಬೇರೆ ಇಲಾಖೆಯಲ್ಲಿದ್ದವರು ಡೆಪ್ಯುಟಿಕಮೀಷನರುಗಳಾಗಿದ್ದಾರೆ ಇವರುಗಳು ಮಾತ್ರ ರಿಜಿಸ್ಟ್ರಾರ್‌ಗಳಾಗಿಯೇ ಉಳಿದಿದ್ದಾರೆ. ಅದರಿಂದ ಫ್ರಸ್ಟ್ರೇಷನ್, ಡಿಸಪಾಯಿಂಟ್‌ಮೆಂಟ್, ಸ್ಟ್ಯಾಗ್ನೇಷನ್‌ಗೆ ಅವಕಾಶವಾಗಿ ಅಲ್ಲಿ ಕರಪ್ಷನ್ ಬರುತ್ತದೆ. ಆದ್ದರಿಂದ ಈ ಇಲಾಖೆಯನ್ನು ರೀ ಆರ್ಗನೈಸ್ ಮಾಡಿ ಅವರಿಗೆ ಪ್ರೊಮೋಷನಲ್ ಆಪರ್ಚ್ಯುನಿಟೀಸ್ ಕೊಟ್ಟು ಸರಿಪಡಿಸಬೇಕಾಗಿದೆ. ಇದರ ಜೊತೆಗೆ ರೆಕಾರ್ಡ್ ಕೀಪಿಂಗ್ ವಿಷಯದಲ್ಲಿ ಮದರಾಸ್ ಸಿಸ್ಟಂನ್ನು ಅನುಕರಣಮಾಡಬೇಕೆಂದು ಯೋಚನೆಮಾಡುತ್ತಾ ಇದ್ದೇವೆ. ಶ್ರೀಮಾನ್ ಕಂಬಳಿಯವರು ಫೋಟೋ ರಿಜಿಸ್ಟ್ರೇಷನ್ ಮಾಡಬೇಕೆಂದು ಹೇಳಿದರು. ಅದಕ್ಕಿಂತಲೂ

ಮುಂದೆ ಹೋಗಿ ಡಾಕ್ಯುಮೆಂಟನ್ನು ಫಿಲಂ ಫೋಟೋ ತೆಗೆಯುವ ವ್ಯವಸ್ಥೆ ಮಾಡಬೇಕೆಂದು ಯೋಚನೆಮಾಡುತ್ತಾ ಇದ್ದೇವೆ. ಪೂರ್ತಿ ಡಾಕ್ಯುಮೆಂಟಿನ ಫಿಲಂ ಫೋಟೋ ತೆಗೆದರೆ ಬೇಕಾದಾಗ ಅದನ್ನು ಮ್ಯಾಗ್ನಿಫೈ ಮಾಡಿಕೊಳ್ಳಬಹುದು. ಈರೀತಿ ರಿಜಿಸ್ಟ್ರೇಷನ್ ಇಲಾಖೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ಯೋಚನೆಮಾಡುತ್ತಾ ಇದ್ದೇವೆ.

ರೆವಿನ್ಯೂ ಇಲಾಖೆಯ ಮೇಲೆ ಬಂದಿರುವಂಥ ಎರಡನೆಯ ಟೀಕೆ ಎಂದರೆ ಮುಜರಾಯಿ ಇಲಾಖೆಗೆ ಸಂಬಂಧಪಟ್ಟದ್ದು. ಅದರಲ್ಲೂ ಕೂಡ ಪೂರ್ವದಿಂದಲೂ ಲೆಥಾರ್ಜಿ ಒಂದೇ ಸಮನಾಗಿ ಬಂದಿದೆ. ಫಾಲ್ಸ್ ಕ್ವೈರಿ ಹಾಕುವುದರಲ್ಲಿ ಅವರು ಟ್ರೈನ್‌ಅಪ್ ಆಗಿ ದೇವರ ಹಣಕೂಡ ಖರ್ಚುಮಾಡುತ್ತಾ ಇರಲಿಲ್ಲ. ಅನೇಕ ದೇವಸ್ಥಾನಗಳಲ್ಲಿ ಯಾತ್ರಾರ್ಥಿಗಳಿಗೆ ಅನುಕೂಲವಿಲ್ಲದೇ, ಅಲ್ಲಿಗೆ ಜನಗಳು ಹೋಗುವುದಿಲ್ಲ. ಅಲ್ಲಿ ಉತ್ಪನ್ನವೂ ಬರುವುದಿಲ್ಲ. ಹೀಗಾಗಿ ಅವು ಹಾಳಾಗುತ್ತಾ ಇವೆ. ಈ ಎರಡು ವರ್ಷದಲ್ಲಿ ಆ ಇಲಾಖೆಯನ್ನೂ ಕೂಡ ವ್ಯವಸ್ಥೆಮಾಡಿ ಒಂದು ದಾರಿಗೆ ತಂದಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಈ ಎರಡು ವರ್ಷದಲ್ಲಿ 40 ಲಕ್ಷ ರೂಪಾಯಿ ಕೆಲಸಮಾಡಿಸಿದ್ದೇವೆ. ಒಳ್ಳೆಯ ಛತ್ರಗಳನ್ನೂ ಕಟ್ಟಿಸುತ್ತಾ ಇದ್ದೇವೆ. ಕಲ್ಯಾಣಿಗಳನ್ನೂ ಕಟ್ಟಿಸುತ್ತಾ ಇದ್ದೇವೆ. ಯಾತ್ರಾರ್ಥಿಗಳು ಇಳಿದುಕೊಳ್ಳುವುದಕ್ಕೆ ಅಟ್ಯಾಚ್ಡ್ ಬಾತ್‌ರೂಮ್ ಇರತಕ್ಕ ಒಳ್ಳೊಳ್ಳೆಯ ರೂಮುಗಳನ್ನು ಕಟ್ಟಿಸಿ ನೀರಿನ ಸರಬರಾಯಿ ಮಾಡತಕ್ಕ ವ್ಯವಸ್ಥೆಯನ್ನು ಮಾಡಿಸುತ್ತಾ ಇದ್ದೇವೆ. ಎಲ್ಲಾ ಊರುಗಳಲ್ಲೂ ಮಾಡಿಸುವುದಕ್ಕೆ ಸಾಧ್ಯವಿಲ್ಲದೇ ಇದ್ದರೂ ಕೂಡ ಮುಖ್ಯವಾದ 7-8 ಸ್ಥಳಗಳನ್ನು ಆರಿಸಿಕೊಂಡು ಅಲ್ಲೆಲ್ಲಾ ಈ ಎರಡು ವರ್ಷದಿಂದ ಈ ಕೆಲಸಗಳನ್ನು ಮಾಡಿಸುತ್ತಾ ಇದ್ದೇವೆ. ತಾವು ತಿರುಪತಿಗೆ ಹೋದರೆ ಅರ್ಥವಾಗುತ್ತದೆ. ಅಲ್ಲಿ ನಮ್ಮ ಜನರು 2,000 ಜನರು ಪ್ರತಿದಿನ ಇರುತ್ತಾರೆ. ಅವರು ಅಲ್ಲಿ ಇಳಿದುಕೊಳ್ಳುವುದಕ್ಕೆ ಇದ್ದ ಓಲ್ಡ್ ಮೈಸೂರ್ ಚೌಲ್ಟ್ರಿ ಬಹಳ ಅನಾನುಕೂಲವಾಗಿತ್ತು. ಈ ಎರಡು ವರ್ಷದಲ್ಲಿ 6 ಲಕ್ಷ ರೂಪಾಯಿ ಖರ್ಚುಮಾಡಿ ಮೈಸೂರು ದೇಶದವರು 600 ಜನರು ಹೋದರೂ ಕೂಡ ಇರುವುದಕ್ಕೆ ಫ್ಲಷ್‌ಔಟ್ ಬಾತ್‌ರೂಮುಗಳು ಇರುವಂತಹ ರೂಮುಗಳನ್ನು ಕಟ್ಟಿಸಿ, ಅವರು ಒಂದೆರಡು ದಿನ ಅಲ್ಲಿದ್ದು ಭಕ್ತಿಯಿಂದ ದೇವರಸೇವೆ ಮಾಡಿಕೊಂಡು ಬರಲು ಅನುಕೂಲಮಾಡಿಕೊಟ್ಟಿದ್ದೇವೆ. ಮಹದೇಶ್ವರನ ಬೆಟ್ಟದಲ್ಲಿ ಈ ಎರಡು ವರ್ಷದಲ್ಲಿ 14 ಲಕ್ಷ ರೂಪಾಯಿ ಖರ್ಚುಮಾಡಿದ್ದೇವೆ. 10–12 ಲಕ್ಷ ರೂಪಾಯಿಗಳನ್ನು ರಸ್ತೆಗಾಗಿ ಖರ್ಚುಮಾಡಿದ್ದೇವೆ. ನೀರಿನ ಸರಬರಾಯಿಗೆ 2–3 ಲಕ್ಷ ರೂಪಾಯಿ ಖರ್ಚುಮಾಡಿದ್ದೇವೆ. ಆ ಒಂದು ಸ್ಥಳದಲ್ಲಿ ಈ ಎರಡು ವರ್ಷದಲ್ಲಿ ಎಂದೂ ನಡೆಯದಂತ ಕೆಲಸ ನಡೆದಿದೆ ಎಂಬುದು ಶ್ರೀಮಾನ್ ವೆಂಕಟೇಗೌಡರಿಗೆ ಗೊತ್ತಿದೆ. ಬಿಳಿಗಿರಿರಂಗನ ಬೆಟ್ಟದಲ್ಲಿ ಕೂಡ ಒಂದು ಹೈ ಪವರ್ ಕಮಿಟಿ ಮಾಡಿ ಯಾವ ಯಾವ ಕೆಲಸ ಆಗಬೇಕೋ ಅದನ್ನೆಲ್ಲಾ ಅವರು ಸಲಹೆಮಾಡಿದ್ದಾರೆ, ಅಲ್ಲಿ ರಸ್ತೆಮಾಡಿದ್ದೇವೆ, ರೈಲುಬರುತ್ತದೆ. ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕ ಬರುತ್ತದೆ. ಅದು ಇಂಟರ್‌ನ್ಯಾಷನಲ್ ಪಿಲಗ್ರಿಮೇಜ್ ಆಗಿದೆ. ಸಿಲೋನ್, ಬರ್ಮಾದಿಂದ ಆ ಸಮಯದಲ್ಲಿ ಜನರು ಅಲ್ಲಿಗೆ ಬರುತ್ತಾರೆ. ಬಹಳ ಉತ್ಪನ್ನ ಕೂಡ ಬರುತ್ತದೆ. ಅದು ಶ್ರೀಮಂತರ ದೇವರು. ಅವರ ಹತ್ತಿರ ದುಡ್ಡು ತೆಗೆದುಕೊಂಡು ಅವರ ಹೆಸರಿನಲ್ಲಿ ಅನೇಕ ಕಟ್ಟಡಗಳನ್ನು ಕಟ್ಟಬೇಕೆಂದು ಅಲ್ಲಿ ಒಬ್ಬ ಎಕ್ಸಿಕ್ಯೂಟೀವ್ ಇಂಜನಿಯರನ್ನು ಹಾಕಿದ್ದೇವೆ. It is not only a national festival, but an international one. People from Ceylon and Burma and other countries come here. The department for the first time has taken the services of an Executive Engineer and an Assistant Engineer. ಒಂದು ಸೆಲ್ ಕ್ರಿಯೇಟ್‌ಮಾಡಿ ಅಸಿಸ್ಟೆಂಟ್ ಇಂಜನಿಯರು ಎಕ್ಸಿಕ್ಯೂಟೀವ್ ಇಂಜನಿಯರುಗಳನ್ನು ಇಟ್ಟು ನಾವೇ ಸಿಮೆಂಟ್ ಕೋಟಾ ತೆಗೆದುಕೊಂಡು ಶ್ರವಣಬೆಳಗೊಳದಲ್ಲಿ ಮಹಾ ಮಸ್ತಕಾಭಿಷೇಕ ಆಗುವ ಸಮಯಕ್ಕೆ ಒಂದು ಟೌನ್‌ಷಿಪ್ ಕ್ರಿಯೇಟ್ ಮಾಡಬೇಕೆಂದು ಇದ್ದೇವೆ. ಮಹಾಮಸ್ತಕಾಭಿಷೇಕ ಹತ್ತು ದಿವಸ ಆದಮೇಲೂ ಕೂಡ ಆ ಊರನ್ನು ನಾವು ಎಜ್ಯುಕೇಷನಲ್ ಪರ್‌ಪಸ್‌ಗೆ ತೆಗೆದುಕೊಳ್ಳೋಣ ಎಂದು ಹೇಳಿ ಪ್ಲಾನ್ ಹಾಕಿಕೊಂಡು ಒಂದು ಹೈಪವರ್ ಕಮಿಟಿ ಮಾಡಿದ್ದೆವು. ಅವರು ರಿಪೋರ್ಟ್ ಕೊಟ್ಟಿದ್ದಾರೆ. ಇಷ್ಟರಲ್ಲೇ ಆ ಕಾರ್ಯಕ್ರಮ ಪ್ರಾರಂಭವಾಗುತ್ತದೆ.

ಇದೇ ರೀತಿ ಎಲ್ಲಮ್ಮನ ದೇವಸ್ಥಾನಕ್ಕೂ ಒಂದು ಪ್ಲಾನ್ ಮಾಡುತ್ತಿದ್ದೇವೆ, ಗೋಕರ್ಣ, ಸುಬ್ರಮಣ್ಯ ಮುಂತಾದ ಊರು ಸ್ಥಳಗಳೇನಿವೆ, ಅವುಗಳಿಗೆ ಹೋಗಿಬರುವ ಯಾತ್ರಾರ್ಥಿಗಳಿಗೆ ಬೇಕಾದ ಸೌಲಭ್ಯ ಕಲ್ಪಿಸಬೇಕೆಂದಿದ್ದೇವೆ. ಇದಕ್ಕಾಗಿ ಅಡ್ವೈಜರನ್ನು ಕೂಡ ನೇಮಿಸಬೇಕೆಂದಿದ್ದೇವೆ. ಹಾಗೆ ಮಾಡಿದರೆ ಹೆಚ್ಚು ಜನರು ಹೋಗುವುದರಿಂದ ಉತ್ಪತ್ತಿಯೂ ಹೆಚ್ಚುತ್ತದೆ. ತಿರುಪತಿಯಲ್ಲಿ ಆಡಳಿತಾಧಿಕಾರಿಯಾಗಿದ್ದ ಅಣ್ಣಾರಾವ್ ಎನ್ನುವವರು ರಿಟೈರ್ ಆಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಅವರು ವಾಲಂಟರಿಯಾಗಿ ಕೆಲಸ ಮಾಡಲು ಒಪ್ಪಿದ್ದಾರೆ. ಅವರನ್ನು ಬಹುಶಃ ನೇಮಕ ಮಾಡಬೇಕೆಂದಿದ್ದೇವೆ. ಮುಜರಾಯಿ ಇಲಾಖೆಯ ಹತೋಟಿಯಲ್ಲಿ ಬೆಂಗಳೂರಿನಲ್ಲಿ ಬಹಳ ಆಸ್ತಿಯಿದೆ.

(ಶ್ರೀ ಎಂ. ವಿ. ಕೃಷ್ಣಪ್ಪ)

ಮೆಜೆಸ್ಟಿಕ್ ಸರ್ಕಲಿನಲ್ಲಿ ಶೇಷಮ್ಮನವರ ಛತ್ರವಿದೆ. ಅದು ಒಳ್ಳೆಯ ಸ್ಥಳದಲ್ಲಿದೆ. ನಮ್ಮ ಹತೋಟಿಯಲ್ಲಿದೆ. ಅದಕ್ಕೆ ಹದಿನೈದು ಲಕ್ಷ ರೂಪಾಯಿ ಖರ್ಚು ಮಾಡಿದರೆ, ಕಲ್ಯಾಣ ಮಂಟಪ, ಅಂಗಡಿ ಮುಂತಾದುವನ್ನು ಅಲ್ಲಿ ಕಟ್ಟಿದರೆ ಹತ್ತು ಸಾವಿರ ರೂಪಾಯಿಗಳ ಉತ್ಪತ್ತಿ ಬರುವ ನಿರೀಕ್ಷೆಯಿದೆ. ಹೀಗೆ ಪ್ಲಾನ್ ಮಾಡಿ ಚೆನ್ನಾಗಿ ಈ ಆಸ್ತಿಯಿಂದ ಉತ್ಪತ್ತಿ ಪಡೆಯಬೇಕೆಂದಿದ್ದೇವೆ. ಈ ಎಲ್ಲಾ ದೃಷ್ಟಿಯಿಂದ ಈ ಇಲಾಖೆಯಲ್ಲಿ ಇಂಜಿನಿಯರಿಂಗ್ ಸೆಲ್ ಒಂದನ್ನು ಮಾಡಿ ಒಬ್ಬ ಎಗ್ಸಿಕ್ಯೂಟೀವ್ ಎಂಜಿನಿಯರ್ ಮತ್ತು ಅಸಿಸ್ಟೆಂಟ್ ಎಂಜಿನಿಯರನ್ನು ತೆಗೆದುಕೊಳ್ಳಬೇಕೆಂದಿದ್ದೇವೆ. ಈ ಇಲಾಖೆ ಹುಟ್ಟಿದಾಗಿನಿಂದ ಇಷ್ಟೊಂದು ಕೆಲಸ ಮಾಡಿರಲಿಲ್ಲ. ಈ ಎರಡು ವರ್ಷಗಳಿಂದ ನಲವತ್ತು ಲಕ್ಷ ರೂಪಾಯಿಗಳ ಕೆಲಸ ಮಾಡಲಾಗಿದೆ, ಮುಂದೆ ಒಂದು ಕೋಟಿ ರೂಪಾಯಿನ ಕೆಲಸ ಮಾಡಬೇಕೆಂದಿದ್ದೇವೆ. ಮಾದೇಶ್ವರ ಬೆಟ್ಟಕ್ಕೆ ಸಂಬಂಧಿಸಿದಂತೆ ಮುವತ್ತು ಲಕ್ಷದ ಪ್ಲಾನ್ ಮಾಡಿದ್ದೇವೆ. ಅಲ್ಲಿ ರಸ್ತೆ, ನೀರು ಮುಂತಾದುವುಗಳಿಗೆ ಅನುಕೂಲ ಮಾಡಿದ್ದರಿಂದ ಹೆಚ್ಚು ಉತ್ಪತ್ತಿಯಾಗುತ್ತಿದೆ. ದೇವಸ್ಥಾನಕ್ಕೆ ಉತ್ಪತ್ತಿ ಹೆಚ್ಚಿದಂತೆಲ್ಲಾ ಅದನ್ನು ಅದಕ್ಕೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುತ್ತೇವೆ. ಮುಜರಾಯಿ ಇಲಾಖೆ ರೀಆರ್ಗನೈಜ್ ಮಾಡಿ ಒಳ್ಳೆಯ ವ್ಯವಸ್ಥೆ ಮಾಡುತ್ತಿದ್ದೇವೆ. ಒಳ್ಳೆಯ ಆಡ್ಮಿನಿಸ್ಟ್ರೇಟರನ್ನು ಪಡೆದು ಬೇಗ ಒಳ್ಳೆಯ ಕೆಲಸ ಮಾಡಲು ಪ್ರಾರಂಭಿಸುತ್ತೇವೆ.

ಆಮೇಲೆ ರೆವೆನ್ಯೂ ಇಲಾಖೆಯಲ್ಲಿ ಸರ್ವೇ ಕೆಲಸದ ಬಗ್ಗೆ ಪ್ರಸ್ತಾಪ ಬಂದಿದೆ. ಇಷ್ಟು ದಿವಸ ರೀಸೆಟ್ಲ್‌ಮೆಂಟ್ ಕೆಲಸವಾಗುತ್ತಿತ್ತು, ಅದು ಮುಗಿಯುತ್ತಾ ಬಂತು. ಈಗಿರುವವರ ಜೊತೆಗೆ ಐನೂರು ಜನ ಸರ್ವೇಯರ್‌ಗಳನ್ನು ತೆಗೆದುಕೊಂಡು ಪೋಡಿ ಕೆಲಸ, ದುರಸ್ತು ಮಾಡುವುದು, ರಿಕಾರ್ಡ್ ಆಫ್ ರೈಟ್ಸ್, ಆಕಾರ ಒಂದು ಮುಂತಾದ ಸಣ್ಣ ಪುಟ್ಟ ಕೆಲಸಗಳನ್ನು ಕೈಕೊಳ್ಳಬೇಕೆಂದಿದ್ದೇವೆ. ಇವು ಚಿಕ್ಕ ಕೆಲಸಗಳಾದರೂ ಬೆಳಗಾದರೆ ರೈತರಿಗೆ ತಲೆನೋವಿಗೆ ಕಾರಣವಾಗುತ್ತವೆ. ಕೇಶವಮೂರ್ತಿಗಳು ಹೇಳಿರುವುದನ್ನೂ ಮಾಡಲು ಪ್ರಯತ್ನ ಮಾಡಿದೆ. ಆಡಳಿತ ಮಂಡಲಿಯ ಕೆಲಸ ಮುಗಿದಿದೆ, ಹೆಚ್ಚು ಜನರನ್ನು ತೆಗೆದುಕೊಂಡು ರಿಕಾಡ್ ಆಫ್ ರೈಟ್ಸ್ ಅಪ್ ಟು ಡೇಟ್ ಮಾಡುವುದಕ್ಕೆ ಉಪಯೋಗಿಸಿಕೊಂಡು, ಪೋಡಿ ಕೆಲಸ ಮುವತ್ತು ವರ್ಷಗಳಿಂದ ಅನೇಕ ಕಡೆ ಆಗಿಲ್ಲದಿರುವುದನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಎಲ್ಲಕ್ಕಿಂತ ಹೆಚ್ಚಾಗಿ ಬೆಂಗಳೂರಿನ ಸರ್ವೇ ಕೆಲಸವನ್ನು ಮಾಡಬೇಕಾಗಿದೆ. ಅದಕ್ಕೆ ಮುವತ್ತು ಲಕ್ಷ ರೂಪಾಯಿ ಖರ್ಚಿದೆ, ಒಬ್ಬ ಡೆಪ್ಯುಟಿ ಕಮಿಷನರು, ಇಪ್ಪತ್ತು ಅಸಿಸ್ಟೆಂಟ್ ಕಮಿಷನರುಗಳು, ನೂರಾರು ಸರ್ವೇಯರುಗಳು ಬೇಕು. ಬೆಂಗಳೂರಿನಲ್ಲಿ ಸರ್ವೇಯೇ ಇಲ್ಲ. ಬಹುಶಃ ಅರ್ಧ ಬೆಂಗಳೂರಿನಲ್ಲಿ ಅನ್ ಆಥರೈಜ್ಡ್ ಕನ್‌ಸ್ಟ್ರಕ್ಷನ್ ಇದೆ. ರಾಮಚಂದ್ರಪುರ ಪೂರ್ಣವಾಗಿ ಅನ್ ಆಥರೈಜ್ಡ್ ಕನ್‌ಸ್ಟ್ರಕ್ಷನಿಂದ ತುಂಬಿದೆ. ಇದರ ಸರ್ವೆಯಾಗಬೇಕು.

ಶ್ರೀ ಎಸ್. ಭೀಮಣ್ಣ.—ಹೈದರಾಬಾದ್ ಕರ್ಣಾಟಕದಲ್ಲಿ ರೈಟ್ ಆಫ್ ಮಾಡುವುದು ಮತ್ತು ಕಾಂಪೆನ್ಸೇಷನ್ ಕೊಡುವುದು—ಈ ವಿಚಾರ ಹೇಳಬೇಕು.

ಶ್ರೀ ಎಂ. ವಿ. ಕೃಷ್ಣಪ್ಪ.—ರೈಟ್ ಆಫ್ ಮಾಡುವ ವಿಚಾರ ನಾನು ಹೇಳುವುದಕ್ಕಾಗುವುದಿಲ್ಲ, ಆ ಬಗ್ಗೆ ಹಣಕಾಸಿನ ಇಲಾಖೆ ಶಿಫಾರಸು ಮಾಡುತ್ತದೆ. ಅನೇಕ ಇಲಾಖೆಗಳಲ್ಲಿ ಹಳೆಯ ಲೆಕ್ಕ ಆಗಲೇ ರೈಟ್ ಆಫ್ ಮಾಡುತ್ತಿದ್ದೇವೆ. ತಾವು ಹೇಳುವುದು ಯೋಗ್ಯವಾಗಿದ್ದರೆ ಶಿಫಾರಸು ಮಾಡುತ್ತೇವೆ, ಭರವಸೆ ಕೊಡುವುದಕ್ಕಾಗುವುದಿಲ್ಲ.

ಒಟ್ಟಿನಲ್ಲಿ ಹೇಳಬೇಕಾದರೆ ಯುವಕರಾದ ಅಧಿಕಾರಿಗಳು ಬರುತ್ತಾರೆ. ಸುಮಾರು ನೂರು ಇಪ್ಪತ್ತು ಜನ ಎರಡು ವರ್ಷಗಳ ಟ್ರೈನಿಂಗ್ ಪಡೆದು ತಾಸಿಲ್ದಾರರಾಗುತ್ತಾರೆ. ಅವರು ಬರುವುದರಿಂದ ಈ ಇಲಾಖೆಯಲ್ಲಿ ಸ್ವಲ್ಪ ಚೈತನ್ಯ ಬರಬಹುದೆಂದು ಅಂದುಕೊಂಡಿದ್ದೇನೆ. ಕಾರಣಾಂತರದಿಂದ ಎಂಟು ಹತ್ತು ವರ್ಷಗಳಿಂದ ತಾಸಿಲ್ದಾರರನ್ನು ಈ ದೇಶದಲ್ಲಿ ರೆಕ್ರೂಟ್ ಮಾಡಲಿಲ್ಲ. ಇಲ್ಲಿಯವರೆಗೆ ಪ್ರಮೋಷನ್ ಮೇಲೆ ಅವರನ್ನು ನೇಮಿಸುತ್ತಿದ್ದರು. ಹೀಗಾಗಿ ರಿಟೈರ್ ಆಗುವಾಗ ಒಂದು ವರ್ಷ ತಾಸೀಲ್ದಾರರಾಗಿ ಕೆಲಸ ಮಾಡುತ್ತಿದ್ದರು. ಅನೇಕರು ದಕ್ಷತೆಯಿಂದ ಕೆಲಸ ಮಾಡುತ್ತಾರೆ. ಹಾಗೆ ಕೆಲವರು ಅನುಭವದಿಂದ ಒಳ್ಳೆಯ ಕೆಲಸ ಮಾಡಿದರೂ ಬಹುಮಂದಿಗೆ ನಿರುತ್ಸಾಹವಿರುತ್ತಿತ್ತು. ಮುದಿ ವಯಸ್ಸಿನಲ್ಲಿ ರಿಟೈರ್ ಆಗುವಾಗ ಮುಜರಾಯಿ ಗುಮಾಸ್ತೆಯಾಗಿ ಕೆಲಸ ಪ್ರಾರಂಭಿಸಿರುವವರನ್ನು ತಾಸಿಲ್ದಾರರಾಗಿ ಹಾಕಿದರೆ ದಕ್ಷತೆ ಎಷ್ಟು ಬರುತ್ತದೆ ಎಂಬುದನ್ನು ತಾವು ಯೋಚನೆ ಮಾಡಬಹುದು. ಹೊಸಬರಿಗಾದರೆ ಡೆಪ್ಯುಟಿ ಕಮಿಷನರ್ ಆಗುವ ಆಸೆಯಿರುವುದರಿಂದ ಅನೇಕರು ಒಳ್ಳೆಯ ಕೆಲಸ ಮಾಡುತ್ತಾರೆ. ಯುವಕರಿರುವಕಡೆ ಕೆಲಸ ಚೆನ್ನಾಗಿ ನಡೆಯುತ್ತದೆ, ಅವರು ಅಸಿಸ್ಟೆಂಟ್ ಕಮಿಷನರು, ತಾಸಿಲ್ದಾರರು ಆದರೆ ಬಹುಶಃ ಈ ಇಲಾಖೆಗೆ ಕಳೆ ತರಬಹುದೆಂದು ಭಾವಿಸಿದ್ದೇನೆ.

12.30 P.M.

ಅನಿಮಲ್ ಹಸ್ಬೆಂಡ್ರಿ ಇಲಾಖೆಯ ವಿಚಾರದಲ್ಲಿ ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆ ಗಳನ್ನು ಕೊಟ್ಟಿದ್ದಾರೆ. ನಾನೂ ಈ ಇಲಾಖೆಯ ಬಗ್ಗೆ ಬಹಳ ಅಕ್ಕರೆಯನ್ನು ಇಟ್ಟುಕೊಂಡಿದ್ದೇನೆ. ಎಷ್ಟೋ ಮಾನ್ಯ ಸದಸ್ಯರೂ ಕೂಡ ಹೇಳಿದಂತೆ ಈ ಇಲಾಖೆಗೆ ಒಳ್ಳೆಯ ಭವಿಷ್ಯವಿದೆ ಎಂದು ನಾನೂ ಕೂಡ ತಿಳಿದುಕೊಂಡಿದ್ದೇನೆ. ಇದು ರೈತನಿಗೆ ಬಹಳ ಮುಖ್ಯವಾದ ಇಲಾಖೆ. ಬಹುಶಃ ಇಲ್ಲಿ ಬಂದಿರುವ ಕಟ್ ಮೋಷನ್ನುಗಳನ್ನು ನೋಡಿದರೆ ಇದರಲ್ಲಿ ಎರಡು ತರಹ ವಿಚಾರಗಳನ್ನು ತಿಳಿದಂತೆ ಕಾಣುತ್ತೆ. ಒಬ್ಬರು ಐಕಲರವರು ಒಂದು ರೀತಿ ಕೊಟ್ಟಿದ್ದರೆ ಇನ್ನೊಬ್ಬರು ಎಂದರೆ ಶ್ರೀಮಾನ್ ರಂಗ ನಾಥರವರು ಒಂದು ರೀತಿಯಲ್ಲಿ ಕೊಟ್ಟಿದ್ದಾರೆ. ಸೌತ್ ಕೆನರಾಕ್ಕೆ ಮಂತ್ರಿಗಳು ಬಹಳ ಜಾಸ್ತಿ ಸಹಾಯ ಮಾಡಲು ತೆಗೆದುಕೊಂಡಿದ್ದಾರೋ ಏನೋ ಎನ್ನುವಂತಿದೆ. ಅಂತೂ ಒಟ್ಟಿನಲ್ಲಿ ಎಲ್ಲ ಸದಸ್ಯರೂ ಇದಕ್ಕೆ ವಿಶೇಷ ರೀತಿಯ ಬೆಂಬಲಗಳನ್ನು ಕೊಟ್ಟಿದ್ದಾರೆ. The Department is doing good work. Because they deal with animals, they have to know the language of the animal. Perhaps they have developed the habit of animals, but they are very good officers. ದನಗಳನ್ನು ಕಾಪಾಡಲು ಅವುಗಳಿಗೆ ರೋಗ ಬಂದಾಗ ಸರಿಯಾದ ಔಷಧಿ ಕೊಡದೇ ಹೋದರೆ ಅವು ಸತ್ತು ಹೋಗುತ್ತವೆ. ಬ್ರೀಡಿಂಗ್, ಫೀಡಿಂಗ್, ಮ್ಯಾನೇಜ್‌ಮೆಂಟು, ವೀಡಿಂಗ್ ಇವುಗಳು ಬಹು ಮುಖ್ಯವಾದವು. ವೀಡಿಂಗ್ ಮಾಡುವ ಕೆಲಸಕ್ಕೆ ಹೋಗುವುದಿಲ್ಲ. ಬ್ರೀಡಿಂಗ್ ಮಾಡಿದರೆ ಅದರಿಂದ ಒಳ್ಳೆಯ ಕೆಲಸವಾಗುತ್ತದೆ. ಇವೊತ್ತಿನ ದಿವಸ ಮಿಲ್ಕ್ ಬ್ರೀಡ್ ಎಂದು ನಾವು ಮಾಡಬೇಕೆಂದು ಏನು ಪ್ರೋಗ್ರಾಂ ಹಾಕಿಕೊಂಡಿದ್ದೇವೋ ಅದಕ್ಕಾಗಿ ನಾವು ಜರ್ಸಿ ಹೋರಿಗಳನ್ನು ತರಿಸಿ ಅದರಿಂದ ಒಳ್ಳೆಯ ತಳಿಯನ್ನು ಅಭಿವೃದ್ಧಿ ಮಾಡಬೇಕೆಂದು ಈ ಬೆಂಗಳೂರಿನಲ್ಲಿ, ಮಂಗಳೂರಿನಲ್ಲಿ, ಶಿವಮೊಗ್ಗದಲ್ಲಿ, ನಾರ್ತ್ ಕೆನರಾದಲ್ಲಿ ಒಂದು ಸ್ಕೀಮನ್ನು ಮಾಡಿ ಇದರ ಫಸ್ಟ್ ಸ್ಟೇಜ್ ಈಗಾಗಲೇ ಮಂಗಳೂರಿನಲ್ಲಿ ನಡೆದಿದೆ. ಬೆಂಗಳೂರಿನಲ್ಲಿ ಸುಮಾರು ಎಂಬತ್ತು ಸಾವಿರ ರಾಸುಗಳನ್ನು ಕ್ರಾಸ್ ಬ್ರೀಡ್ ಮಾಡಿರುವುದು ಆಗಿದೆ. ಇವು ದಿನಕ್ಕೆ ಇಪ್ಪತ್ತು ಇಪ್ಪತ್ತೈದು ಪೌಂಡಿನಷ್ಟು ಹಾಲನ್ನು ಕೊಡುತ್ತಿವೆ. ಫಾರಿನ್ ಬ್ರೀಡು ತರಿಸಿ ಇಲ್ಲಿ ಇಂಟ್ರಡ್ಯೂಸ್ ಮಾಡಿದುದರಿಂದ ಎರಡು ಮೂರು ಸೇರುಗಳಷ್ಟು ಹಾಲು ಕೊಡುತ್ತಿದ್ದ ದನಗಳಿಂದ ಆದ ಕರುಗಳು ದೊಡ್ಡದಾಗಿ ಇವೊತ್ತು ಹೆಚ್ಚು ಹಾಲು ಎಂದರೆ ಸುಮಾರು ಹತ್ತು ಹದಿನೈದು ಸೇರಿನಷ್ಟು ಹಾಲು ಕೊಡುತ್ತಿದೆ. ಇದನ್ನು ಬೆಂಗಳೂರು ಸುತ್ತ ಇರುವ ದನ ಗಳಲ್ಲಿ ನಾವು ಕಾಣಬಹುದು. "A good technical man may be a bad administrator you better leave things to us. We will set right every thing" ಇದು ಹೇಗಿದೆ ಎಂದರೆ ನಾನು ಹಿಂದೆ ಒಂದು ಸಾರಿ ಇಲ್ಲಿ ಹೇಳಿದ ಹಾಗೆ ಒಕ್ಕಲಿಗರಿಗೂ ವೈಶ್ಯರಿಗೂ ಜಗಳ ಆದಂತೆ. ವೈಶ್ಯರು ಮನೆಯಲ್ಲಿ ಜಗಳವಾದರೆ ಅವರು ಮನೆ ಬಾಗಿಲು ಹಾಕಿಕೊಂಡು ಮನೆ ಯೊಳಗೇ ಜಗಳ ಮಾಡುತ್ತಾರೆ ಅದು ಒಬ್ಬರಿಗೂ ತಿಳಿಯುವುದಿಲ್ಲ. ಆದರೆ ಒಕ್ಕಲಿಗರು ಜಗಳ ಮಾಡಿದರೆ ಅವರು ಬೀದಿಯ ಹೊರಗಡೆ ಬಂದು ಎಲ್ಲರಿಗೂ ಗೊತ್ತಾಗುವ ಹಾಗೆ ಜಗಳ ಮಾಡುತ್ತಿರು ತ್ತಾರೆ. ಹೀಗೆ ಎಲ್ಲರ ಮನೆಯಲ್ಲಿಯೂ ಜಗಳಗಳಿರುತ್ತವೆ. ಅದು ಮನೆಯ ಜಗಳ. ಇದರ ಬಗ್ಗೆ ಹೆಚ್ಚಿನ ಯೋಚನೆ ಮಾಡಬೇಕಾದ ಅವಶ್ಯಕವಿಲ್ಲ. ನಾವೀಗ ಮಾಡುತ್ತಿರುವ ಮಿಲ್ಕ್ ಸ್ಕೀಂ ಬಹಳ ದೊಡ್ಡದು. ಇದಕ್ಕಾಗಿ ಸುಮಾರು ಒಂದೂವರೆ ಕೋಟಿಯಷ್ಟು ಹಣ ಖರ್ಚು ಮಾಡಿ ಎರಡು ವರ್ಷ ಗಳಾಯಿತು ಈಗಾಗಲೇ ಮುಗಿಯುವುದರಲ್ಲಿದೆ. ಮುಂದಿನ ಮೇ ತಿಂಗಳಿನಲ್ಲಿ ಇದು ಪ್ರಾರಂಭ ವಾಗುತ್ತದೆ. ತಾವು ಎಲ್ಲ ಸದಸ್ಯರು ಮುಂದಿನ ಅಧಿವೇಶನಕ್ಕೆ ಇಲ್ಲಿಗೆ ಬಂದಾಗ ತಮಗೆಲ್ಲ ಒಳ್ಳೆಯ ರುಚಿಕರವಾದ ಹಾಲನ್ನು ಮತ್ತು ಕೋಳಿ ಮೊಟ್ಟೆಗಳನ್ನೂ ಎಷ್ಟು ಬೇಕೋ ಅಷ್ಟನ್ನೂ ಒದಗಿಸಿ ಕೊಡಬೇಕೆಂದಿದ್ದೇನೆ. ನಾನು ಹಿಂದೆ ಪಾರ್ಲಿಮೆಂಟಿನಲ್ಲಿದ್ದಾಗಲೂ ಇದೇ ರೀತಿ ಅಲ್ಲಿನ ಸದಸ್ಯರು ಗಳಿಗೆ ಹಂಚುವ ಏರ್ಪಾಡು ಮಾಡಿದ್ದೆ. ನಾವು ಈಗಾಗಲೇ ಬೆಂಗಳೂರು ಮಿಲ್ಕ್ ಸ್ಕೀಂನ್ನು ಮುಗಿ ಸಿದ್ದೇವೆ. ಮಂಗಳೂರಿನಲ್ಲಿ ಒಂದು ಸ್ಕೀಮನ್ನು ಆರಂಭ ಮಾಡುವುದರಲ್ಲಿದ್ದೇವೆ. ಅದಕ್ಕಾಗಿ ಸುಮಾರು ಎರಡು ಲಕ್ಷದಷ್ಟು ಹಣ ಮಂಜೂರಾಗಿದೆ. ಅದಕ್ಕೆ ಇನ್ನೂ ಹೆಚ್ಚು ಖರ್ಚು ಮಾಡಲು ಸಿದ್ಧರಾಗಿದ್ದೇವೆ. ಭದ್ರಾವತಿ ಮತ್ತು ಶಿವಮೊಗ್ಗದ ಮಧ್ಯೆ ಒಂದು ಸ್ಥಳ ತೆಗೆದುಕೊಂಡಿದ್ದೇವೆ. ಅಲ್ಲಿಯೂ ಒಂದು ಹಾಲಿನ ಕೇಂದ್ರದ ಯೋಜನೆ ಆಗುತ್ತದೆ. ಧಾರವಾಡ ಮತ್ತು ಹುಬ್ಬಳ್ಳಿಗೆ ಮಧ್ಯದಲ್ಲಿ ಒಂದು ಮಿಲ್ಕ್ ಸ್ಕೀಂ ಪ್ರಾರಂಭ ಮಾಡುವುದರಲ್ಲಿದ್ದೇವೆ. ಹೀಗೆ ಐದಾರು ಸ್ಕೀಂಗಳನ್ನು ಹಾಕಿಕೊಂಡು ಆದಷ್ಟು ಬೇಗ ಇದನ್ನೂ ಮುಗಿಸಬೇಕೆಂದು ಇದೆ. ಮೂರು ನಾಲ್ಕು ವರ್ಷಗಳ ಹಿಂದೆಯೇ ಗುಲ್ಬರ್ಗಾಕ್ಕೆ ಮಿಲ್ಕ್ ಸ್ಕೀಂ ಸ್ಯಾಂಕ್ಷನ್ ಆಗಿದೆ ಬೆಳಗಾಂ ಹಾಗೂ ಹುಬ್ಬಳ್ಳಿ ಮಧ್ಯದಲ್ಲಿ ಐವತ್ತು ಎಕರೆಗಳಷ್ಟು ಜಮೀನನ್ನು ಇದಕ್ಕಾಗಿ ತೆಗೆಯಲಾಗಿದೆ. ಭದ್ರಾವತಿ ಮತ್ತು ಮಂಗಳೂರಿ ನಲ್ಲೂ ಬರುತ್ತದೆ. ಹೀಗೆ ಬೇರೆ ಬೇರೆ ಸ್ಥಳಗಳಲ್ಲಿಯೂ ಇಂತಹ ಯೋಜನೆಗಳನ್ನು ಮಾಡಬೇಕೆಂದು ಇದೆ.

(ಶ್ರೀ ಎಂ. ವಿ. ಕೃಷ್ಣಪ್ಪ)

ನಮ್ಮಲ್ಲಿ ರಿಂಡರ್‌ಪೆಸ್ಟ್ ಎನ್ನುವ ಒಂದು ತರಹದ ರೋಗ ದನಗಳಿಗೆ ಬರುತ್ತದೆ. ಇದು ದೊಡ್ಡ ರೋಗ ಎಂದು ಹೇಳುತ್ತಾರೆ. ಇದು ಬಿಟ್ಟು ಹೋಗಿ ಸುಮಾರು ಹದಿನೈದು ವರ್ಷಗಳಾದವು. ಹದಿನೈದು ವರ್ಷಗಳಿಂದ ಬಂದಿರಲಿಲ್ಲ. ಹಿಂದೆ ಒಂದು ಸಾರಿ ಬಂದಾಗ ಒಟ್ಟಿಗೆ ನೂರಾರು ದನಗಳು ಸತ್ತು ಹೋದವು. ಆಗ ಅವುಗಳನ್ನು ಕಾಗೆಗಳೂ ಕೂಡ ತಿನ್ನುವುದಕ್ಕಾಗದಂತೆ ಅಷ್ಟು ಅಸಹ್ಯವಾಗಿತ್ತು. ಹದಿನೈದು ವರ್ಷದಿಂದೀಚೆಗೆ ರಿಂಡರ್‌ಪೆಸ್ಟ್ ಎರಾಡಿಕೇಷನ್ ಸ್ಕೀಂ ಎಂದು ಮಾಡಿ ಇದನ್ನು ತಡೆಯಲಾಗಿದೆ. It was completely eliminated from Penunsular India. ಹಿಂದೆ ಈ ಊರಿನಲ್ಲಿರುವ ಒಂದು ಮಿಲಟರಿ ಫಾರಂನಲ್ಲಿ ಕೆಲವು ದನಗಳನ್ನು ತರಿಸಿದ್ದರು. ಅವುಗಳಲ್ಲಿ ನಾಲ್ಕೈದು ಸತ್ತು ಹೋದುವು. ಆಗ ನಾವು ಈ ಮಾಡಲ್ ಫಾರಂನಿಂದ ರೋಗ ಬಂದಿರಬಹುದು ಎಂದು ಆರು ತಿಂಗಳ ಹಿಂದೆ ಎಲ್ಲ ಕಡೆಗಳಲ್ಲೂ ಆಗುತ್ತಿದ್ದ ದನಗಳ ಪರಿಕ್ಷೆಗಳನ್ನು ನಿಲ್ಲಿಸಿದ್ದೆವು. ಬೆಂಗಳೂರಿನಲ್ಲಿ ವ್ಯಾನುಗಳಲ್ಲಿ ಹೋಗಿ ಎಲ್ಲ ಜನರಿಗೂ 'ಅನೌನ್ಸ್ ಮಾಡಿ ಸುಮಾರು ಸಾವಿರಾರು ದನಗಳಿಗೆ ವ್ಯಾಕ್ಸಿನೇಷನ್ನು ಮಾಡಿಸಲು ಜೀಪುಗಳಲ್ಲಿ ಹೋಗಿ ಡಾಕ್ಟರುಗಳು ಮಾಡಿದ್ದರು. ನನಗಾದರೂ ಹಸುವನ್ನು ಕಂಡ್ರೆ ಬಹಳ ಪ್ರೀತಿ. ಅವು ಸತ್ತು ಹೋದರೆ ಅದನ್ನು ನೋಡುವುದಕ್ಕೆ ಆಗುವುದಿಲ್ಲ. ಆದುದರಿಂದ ಹಸುಗಳ ಇಲಾಖೆಯ ಮಂತ್ರಿಯಾಗಿ ನಾನು ಏನನ್ನು ಮಾಡಬೇಕೋ ಅದನ್ನು ಮಾಡುತ್ತಿದ್ದೇನೆ. ಈಚೆಗೆ ಒಬ್ಬರು ಭದ್ರಯ್ಯ ಎನ್ನುವವರ ಹಸುಗಳು ಇನಾಕ್ಯೂಲೇಷನ್ನು ಮಾಡಿಸಿಕೊಳ್ಳದೇ ಹೋದುದರಿಂದ ಅವರ ಕೆಲವು ದನಗಳು ಸತ್ತು ಹೋದುವು ಎಂದು ಕೇಳಿದೆ.

ಶ್ರೀ ಕೆ. ದೇವಯ್ಯ.—ಮೊದಲನೆಯ ದಿನ ನಾನು ಹೋಗಿ ಹೇಳಿದರೂ ಅವರು ಇನಾಕ್ಯೂಲೇಷನ್ನು ಮಾಡಿಸಲು ಒಪ್ಪಲಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಹೇಳುವುದನ್ನು ಜನ ಕೇಳದೇ ಹೋದರೆ ನಾವೇನು ಮಾಡುವುದು ? ಹಿಂದೆ ನಾವು ವೆಟರ್ನರಿ ಇಲಾಖೆಯ ಮೂಲಕ ಜನಗಳಿಗೆ ತಿಳಿವಳಿಕೆ ಕೂಡ ಕೊಡುತ್ತಿದ್ದೇವೆ: ಹಿಂದೆ ಯು. ಪಿ. ನಲ್ಲಿ ರಿಂಡರುಪೆಸ್ಟು ರೋಗವನ್ನು ತಡೆಗಟ್ಟಲು ಒಂದು ಸ್ಕೀಂ ಮಾಡಿದರು. ಅಲ್ಲಿ ಮಾಡಿರುವ ವ್ಯಾಕ್ಸೀನ್ ತರುವುದಕ್ಕಾಗಿ ನಮ್ಮ ಇಲಾಖೆಯಲ್ಲಿದ್ದ ಡಾಕ್ಟರು ಶ್ರೀ ಶೆಟ್ಟಿಯವರನ್ನು ಅಲ್ಲಿಗೆ ಕಳುಹಿಸಿದ್ದೆವು.

ಯಲಹಂಕದ ಬಳಿ ಸುಮಾರು 300 ಹಸುಗಳಿಗೆ ಇದು ಅಟ್ಯಾಕ್ ಆಗಿತ್ತೆಂದು ಅಸೆಸ್ ಮಾಡಿದ್ದೆವು. ಈ ವಿಚಾರವನ್ನೆಲ್ಲಾ ನಾವು ಮೊದಲೇ ಪತ್ರಿಕೆಗಳಲ್ಲಿ ಪ್ರಚಾರ ಕೂಡ ಮಾಡಿಸಿದ್ದೆವು. ಈ ವಿಚಾರವನ್ನು ಬಿಡದ ಹಾಗೆ 10-15 ದಿವಸ ಒಂದೇ ಸಮನಾಗಿ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿಸಲಾಗಿತ್ತು. ಇನ್ನು ಕೆಲವು ಜನರು ತಮ್ಮ ವಿಚಾರದಲ್ಲೇ ಎಚ್ಚರಿಕೆ ತೆಗೆದುಕೊಳ್ಳದಿರತಕ್ಕ ಜನರು ; ಇನ್ನು ತಮ್ಮ ದನಕರುಗಳ ವಿಚಾರದಲ್ಲಿ ಹೇಗೆ ಎಚ್ಚರಿಕೆ ತೆಗೆದುಕೊಳ್ಳುವರು ? ಆದರೆ ಈ ಇಲಾಖೆಯ ವಿಚಾರದಲ್ಲಿ ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಸಂತೋಷ. ಇನ್ನು ಕೋಳಿ ವಿಚಾರದಲ್ಲಿ ಶ್ರೀ ಐಕಲರವರು ಮಾತನಾಡಿದ್ದಾರೆ. ಇಡೀ ಹಿಂದೂಸ್ಥಾನದಲ್ಲೇ ಇಲ್ಲದಂಥ ದೊಡ್ಡ ಕೋಳಿ ಫಾರಂ ನಮ್ಮ ಹೆಸರಘಟ್ಟದಲ್ಲಿದೆ. ಅಲ್ಲಿ ಇನ್ನೂ ಒಳ್ಳೆಯ ಕುರಿ ಮತ್ತು ಕೋಳಿಗಳನ್ನು ಸಾಕಲು ಪ್ರಯತ್ನ ಮಾಡಿದ್ದೇವೆ. ಒಳ್ಳೆ ಹಾಲನ್ನೂ ಸಹಾ ಒದಗಿಸಲು ಏರ್ಪಾಡಾಗಿದೆ. ಹಾಗೇ ಒಳ್ಳೆ ತತ್ತಿಗಳನ್ನೂ ಕೂಡ ಮಾರಾಟ ಮಾಡಲು ಸಿದ್ಧತೆಗಳಾಗುತ್ತಿವೆ.

I want to open 300 milk booths in Bangalore. With the permission of the Speaker if he allows we are prepared to start a centre in the Lobby where fine flavoured milk will be sold.

ಇನ್ನು ಸರ್‌ಚಾರ್ಜ್ ವಿಷಯದಲ್ಲಿ ಕೆಲವರು ಹೇಳಿದ್ದಾರೆ: 2 ವರ್ಷಗಳ ಕಾಲ ಈ ತೆರಿಗೆಯನ್ನು ವಸೂಲ್ಮಾಡಲು ಈ ಮಾನ್ಯ ಸಭೆಯು ಅನುಮತಿಯನ್ನಿತ್ತಿತ್ತು. 1962-63 ಮತ್ತು 63-64 ಈ ಎರಡು ಸಾಲುಗಳಲ್ಲಿ ಅದನ್ನು ವಸೂಲ್ಮಾಡಿದೆ. ಇನ್ನು ಮುಂದಕ್ಕೆ ಇದನ್ನು ವಸೂಲ್ಮಾಡುವುದಿಲ್ಲ. 2 ವರ್ಷದ ಹಣವನ್ನು ಎಲ್ಲರೂ ಕೊಟ್ಟೇ ತೀರಬೇಕು.

ಒಬ್ಬ ಮಾನ್ಯ ಸದಸ್ಯರು.—ಬರಗಾಲ ಬಿದ್ದಿರತಕ್ಕ ಪ್ರದೇಶದಲ್ಲಾದರೂ ಇದನ್ನು ಕಂತುಗಳ ಮೇಲೆ ವಸೂಲ್ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕ್ಷಾಮದ ವಿಚಾರ ಬಹಳ ದೊಡ್ಡದು. ಪ್ರಶ್ನೋತ್ತರದ ಕಾಲದಲ್ಲಿ ಈ ವಿಚಾರವಾಗಿ ಬಹಳ ವಿಷಯಗಳನ್ನು ತಿಳಿಸಿದ್ದೇನೆ. ಈ ಡಿಮ್ಯಾಂಡ್‌ಗಳಿಗೆ ತಾವೆಲ್ಲರೂ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ ತಮಗೆಲ್ಲರಿಗೂ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The time is up. I will put the demands to the vote of the House.

The question is :

"That the respective sums not exceeding the amounts shown in the list of demands circulated to the members be granted to defray the charges which will come in course of payment during the financial year ending with 31st day of March 1965, in respect of demand Nos. 2, 7, 8, 15, 22, 33, 42 and 53".

The motion was adopted.

[*As directed by the Chair, the motion's for demands for grants which were adopted by the House are reproduced below :—*

DEMAND No. 2.—LAND REVENUE.

9. Land Revenue.

"That a sum not exceeding Rs. 1,98,63,000 be granted to the Government to defray the charges which will come in course of payment during the financial year for the period ending 31st day of March 1965, in respect of 'Land Revenue'."

DEMAND No. 7.—STAMPS.

14. Stamps,

"That a sum not exceeding Rs. 2,85,000 be granted to the Government to defray the charges which will come in course of payment during the financial year for the period ending 31st day of March 1965, in respect of 'Stamps'."

DEMAND No. 8.—REGISTRATION.

15. Registration Fees.

"That a sum not exceeding Rs. 18,86,000 be granted to the Government to defray the charges which will come in couse of payment during the financial year for the period ending 31st day of March 1965, in respect of 'Registration Fees'."

DEMAND No. 15.—MISCELLANEOUS DEPARTMENTS.

26. *Miscellaneous Departments.*

"That a sum not exceeding Rs. 72,04,000 be granted to the Government to defray the charges which will come in course of payment during the financial year for the period ending 31st day of March 1965, in respect of 'Miscellaneous Departments'."

DEMAND No. 22.—ANIMAL HUSBANDRY.

33. *Animal Husbandry.*

"That a sum not exceeding Rs. 2.14,90,000 be granted to the Government to defray the charges which will come in course of payment during the financial year for the period ending 31st day of March 1965, in respect of 'Animal Husbandry'."

DEMAND No. 33.—FAMINE.

64. *Famine Relief.*

"That a sum not exceeding Rs. 71,17,000 be granted to the Government to defray the charges which will come in course of payment during the financial year for the period ending 31st day of March 1965, in respect of 'Famine Relief'."

DEMAND No. 42.—COMPENSATION TO ZAMINDARS.

92. *Payment of Compensation to Land-holders, etc., on the abolition of Zamindari System.*

"That a sum not exceeding Rs. 56,87,000 be granted to the Government to defray the charges which will come in course of payment during the financial year for the period ending 31st day of March 1965, in respect of 'Payment of Compensation to Land-holders, etc., on the Abolition of Zamindari System'."

DEMAND No. 53.—CAPITAL OUTLAY ON SCHEMES OF GOVERNMENT TRADING.

124. *Capital Outlay on Schemes of Government Trading.*

"That a sum not exceeding Rs. 29,60,000 be granted to the Government to defray the charges which will come in course of

payment during the financial year for the period ending 31st day of March 1965, in respect of 'Capital Outlay on Schemes of Government Trading'."]

Member's Representation

Sri C. J. MUCKANNAPPA—Sir, I have just got a letter placed in my pigeon-hole; It contains a copy of the question paper for the examination which is to take place day after tomorrow.

Mr. SPEAKER.—How does he know that, that is true?

Sri C. J. MUCKANNAPPA.—It is up to you to make enquiries. It may or may not be true.

Sri G. V. GOWDA.—I have also got a letter containing a copy of the same question paper.

(Both Sri Muckannappa and Sri G. V. Gowda passed on the letters to Mr. Speaker).

Mr. SPEAKER.—I pass them on to the Minister for Education.

Sri C. J. MUCKANNAPPA.—One of them may be kept with the Chair.

Sri S. R. KANTHI.—I will get it examined.

Mr. SPEAKER.—If it is true, what does he propose to do?

Sri S. R. KANTHI.—We will take necessary steps.

Mr. SPEAKER.—The House will now adjourn and meet on Monday at 12 NOON.

The House adjourned at Fifty Minutes past Twelve of the Clock to meet again at Twelve of the Clock on Monday, the 23rd March 1964.